ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್
ಪದವಿಗಾಗಿ ಸಲ್ಲಿಸಿದ ನಿಬಂಧ

ನಿಬಂಧದ ವಿಷಯ

ಕನ್ನಡ ಗ್ರಂಥಸಂಪಾದನೆಗೆ
ಎಂ.ಎ. ರಾಮಾನುಜಯ್ಯಂಗಾರ್ ಅವರ ಕೊಡುಗೆ

ಮಾರ್ಗದರ್ಶಕರು
ಡಾ. ನಾ. ಗೀತಾಚಾರ್ಯ

ಸಂಶೋಧನ ವಿದ್ಯಾರ್ಥಿನಿ
ಉಷಾರಾಣಿ

ವರ್ಷ: ೨೦೧೦-೨೦೧೧

ಅಧ್ಯಯನ ಕೇಂದ್ರ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ,
ನೇ ಮುಖ್ಯ ರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು – ೫೬೦೦೧೯

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ನಿಬಂಧ

ನಿಬಂಧದ ವಿಷಯ

ಕನ್ನಡ ಗ್ರಂಥಸಂಪಾದನೆಗೆ ಎಂ.ಎ. ರಾಮಾನುಜಯ್ಯಂಗಾರ್ ಅವರ ಕೊಡುಗೆ

ಮಾರ್ಗದರ್ಶಕರು

ಡಾ. ನಾ. ಗೀತಾಚಾರ್ಯ

ಸಂಶೋಧನ ವಿದ್ಯಾರ್ಥಿನಿ

ಉಷಾರಾಣಿ

ವರ್ಷ: ೨೦೧೦-೨೦೧೧

ಅಧ್ಯಯನ ಕೇಂದ್ರ

ಬಿ.ಎಂ.ಶ್ರೀ, ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ,

೩ನೇ ಮುಖ್ಯ ರಸ್ತೆ, ನರಸಿಂಹರಾಜ ಕಾಲೋನಿ

ಬೆಂಗಳೂರು – ೫೬೦೦೧೯

911

ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦-೧೧ ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕನ್ನಡ ಗ್ರಂಥಸಂಪಾದನೆಗೆ ಎಂ.ಎ. ರಾಮಾನುಜಯ್ಯಂಗಾರ್ ಅವರ ಕೊಡುಗೆ."** ಎಂಬ ಶೀರ್ಷಿಕೆಯ ಈ ನಿಬಂಧವನ್ನು, **ಡಾ.ನಾ. ಗೀತಾಚಾರ್ಯ**
ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು. ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Usharani

ಸಂಶೋಧನಾ ವಿದ್ಯಾರ್ಥಿನಿ

ಸ್ಥಳ: ಬೆಂಗಳೂರು.

ಉಷಾರಾಣಿ

ದಿನಾಂಕ: ೧೧/೬/೧೧.

ಸಹಿ/-

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦-೧೧ ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕನ್ನಡ ಗ್ರಂಥಸಂಪಾದನೆಗೆ ಎಂ.ಎ. ರಾಮಾನುಜಯ್ಯಂಗಾರ್ ಅವರ ಕೊಡುಗೆ."** ಎಂಬ ಶೀರ್ಷಿಕೆಯ ಈ ನಿಬಂಧವನ್ನು **ಉಷಾರಾಣಿ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದಾರೆ.

ಈ ನಿಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು. ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ನಾ. ಗೀತಾಚಾರ್ಯ

ಸ್ಥಳ: ಬೆಂಗಳೂರು.

ದಿನಾಂಕ: ೧೧/೬/೧೧.

ಸಹಿ/-

ಎಂ.ಎ. ರಾಮಾನುಜ ಅಯ್ಯಂಗಾರ್ಯರು



ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ

ಪೀಠಿಕೆ

ಗ್ರಂಥಸಂಪಾದನಾ ಕಾರ್ಯದಲ್ಲಿ ಪಾಶ್ಚಾತ್ಯ ವಿದ್ವಾಂಸರದೇ ಮೇಲುಗೈ ಆಗಿದ್ದರೂ ಭಾರತೀಯ ವಿದ್ವಾಂಸರು ಕೂಡ ಅತ್ಯಂತ ಮಹತ್ವವಾದ ಕಾರ್ಯವನ್ನು ಮಾಡಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿ ಸಾಹಿತ್ಯಾಭಿಮಾನಿಗಳನ್ನು ಪ್ರೇರೇಪಿಸುವಂತಹ ವಿಶ್ವಸನೀಯ ಕಾರ್ಯಸಾಧಕರಾಗಿ ಭಾರತೀಯ ವಿದ್ವಾಂಸರು ಅವಿಸ್ಮರಣೀಯರಾಗಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿ ಕನ್ನಡವೆಂದರೆ ಮೂಗುಮುರಿಯುತ್ತಿದ್ದ ಪರಭಾಷಾ ಮೋಹಕ್ಕೆ ಒಳಗಾದ ಕನ್ನಡಿಗರಿಗೆ ಕನ್ನಡದ ಮಹತ್ವವನ್ನು ತಿಳಿಸಿದ್ದಾರೆ.

ಕನ್ನಡಕ್ಕೆ ಎಷ್ಟು ಪ್ರಾಚೀನತೆ ಇದೆ ಎಂಬುದನ್ನು ತೋರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕನ್ನಡ ಭಾಷೆಯನ್ನು ವಿಶ್ವವ್ಯಾಪಿಯಾಗಿ ಸಾರಿರುವಂತಹ ಮಹನೀಯರು ನಮ್ಮಲ್ಲಿಯೇ ಇದ್ದಾರೆ. ಎಂಬುದು ನಮ್ಮ ವಿದ್ವಾಂಸರುಗಳಿಂದ ತಿಳಿದುಬಂದಿದೆ.

ಕನ್ನಡ ಗ್ರಂಥಸಂಪಾದನೆಯಲ್ಲಿ ಪಾಶ್ಚತ್ಯರಿಂದ ಮೊದಲುಗೊಂಡು ಭಾರತೀಯರು ಸಾಕಷ್ಟು ಕೆಲಸವನ್ನು ಮಾಡಿದ್ದಾರೆ. ಅಂತಹ ಅವಿಸ್ಮರಣೀಯರಲ್ಲಿ ಪ್ರಥಮವಾಗಿ ಎಂ.ಎ.ರಾಮಾನುಜಯ್ಯಂಗಾರ್. ಎಸ್.ಜಿ.ನರಸಿಂಹಾಚಾರ್ ಮತ್ತು ಆರ್ ನರಸಿಂಹಾಚಾರ್ ಅವರುಗಳು ಹಳಗನ್ನಡ ಗ್ರಂಥಸಂಪಾನೆಗೆ ನೀಡಿದಂತ ಕೊಡುಗೆ ಅಪಾರವಾದುದು.

ಸಂಪಾದಕನು ಯಾವುದೇ ಪ್ರಾಚೀನ ಕೃತಿಯನ್ನು ಸಂಪಾದಿಸುವ ಮೊದಲು ಆ ಕೃತಿಗಳಿಗೆ ಹಸ್ತ ಪ್ರತಿಗಳು ಎಷ್ಟು, ಹೇಗೆ, ಎಲ್ಲಿ ದೊರೆಯುತ್ತವೆ ಎಂಬುದರ ಮಾಹಿತಿಯನ್ನು ತಿಳಿದುಕೊಳ್ಳಬೇಕು. ಇರುವ ಪ್ರತಿಗಳ ಜೊತೆಗೆ ಮತ್ತೆ ಹೊಸ ಪ್ರತಿಗಳೇನಾದರೂ ದೊರೆಯುವ ಸಾಧ್ಯತೆ ಇದ್ದಲ್ಲಿ ಅವುಗಳನ್ನು ಸಂಗ್ರಹಿಸಲು ಪ್ರಯತ್ನಿಸಬೇಕು. ಸಂಪಾದಕ ಪ್ರಕಟಣೆಗೆ ತೆಗೆದೊಂಡಿರುವ ಕೃತಿಯೇನಾದರೂ ಅಪೂರ್ವವಾಗಿದ್ದರೆ ಅದಕ್ಕೆ ಅಪಾರವಾದ ಹಸ್ತಪ್ರತಿಗಳು ದೊರಕಬಹುದು. ಎಲ್ಲ ಗ್ರಂಥಭಂಡಾರಗಳಲ್ಲಿನ ಗ್ರಂಥಸೂಚಿಯನ್ನು ನೋಡಿ ಆದಷ್ಟು ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸುವುದು ಉತ್ತಮ. ಅವುಗಳು ಮುಂದೆ ಪಾಠಾಂತರ ನಿರ್ಣಯಕ್ಕೆ ಹೆಚ್ಚು ಉಪಯುಕ್ತವಾಗುತ್ತವೆ.

ಹಸ್ತಪ್ರತಿಗಳು ಕಾಲಕ್ರಮದಲ್ಲಿ ತ್ರುಟಿತವಾಗುತ್ತ ಹೋಗುತ್ತವೆ. ಕ್ರಿಮಿಕೀಟಗಳಿಂದ ಕೆಲವು ಪ್ರತಿಗಳು ನಾಶವಾದರೆ ಒಂದು ಕಟ್ಟಿನಿಂದ ಇನ್ನೊಂದಕ್ಕೆ ಬದಲಿಸುವಾಗ, ಮನೆಯಿಂದ ಮನೆಗೆ , ಊರಿನಿಂದ ಊರಿಗೆ ಸಾಗಿಸುವಾಗ ಹಲವು ಭಾಗಗಳು ಹಾಳಾಗಬಹುದು ಇಂತಹ ಸಂದರ್ಭದಲ್ಲಿ ಬಹಳ ಹೆಚ್ಚರಿಕೆಯಿಂದ ಜೋಪಾನ ಮಾಡಬೇಕಾಗುತ್ತದೆ. ಒಂದೇ ಒಂದು ಪ್ರತಿಯಿದ್ದಾಗ ಈ ತ್ರುಟಿತಗಳನ್ನು ಸರಿಡಿಸುವುದು ತುಂಬಾ ಕಷ್ಟವಾಗುತ್ತದೆ. ಹೆಚ್ಚು ಪ್ರತಿಗಳಿದ್ದರೆ ಒಂದರಿಂದ ಒಂದನ್ನು ಬಳಸಿಕೊಂಡು ನಷ್ಟವನ್ನು ತುಂಬಬಹುದು. ಆದರೆ ಕೆಲವು ವೇಳೆ ಒಂದೇ ಸಂಪ್ರದಾಯಕ್ಕೆ ಸೇರಿದವುಗಳಾಗಿದ್ದರೆ ತ್ರುಟಿತಗಳನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ. ಮಿಶ್ರ ಪ್ರತಿಗಳು ದೊರೆತಾಗ ಸಂಪಾದನ ಕಾರ್ಯ ಮತ್ತಷ್ಟು ಕಷ್ಟವಾಗುತ್ತದೆ. ಗರಿಗಳಲ್ಲಿ ಬರೆಯುವ ಸಂದರ್ಭದಲ್ಲಿ ಕೆಲವು ಟಿಪ್ಪಣಿಗಳಾಗಲಿ, ವಿಶೇಷ ವಿಷಯಗಳಾಗಲಿ ಗರಿಯ ಅಂಚಿನಲ್ಲಿ ಬರೆಯುತ್ತಿದ್ದು ನಂತರದ ಪ್ರತಿಗಳಲ್ಲಿ ಅವು ಮೂಲ ಪಾಠದೊಂದಿಗೆ ಸೇರಿರುವ ಸಾಧ್ಯತೆಗಳು ಇರುತ್ತವೆ. ಹೀಗೆ ಸಂಗ್ರಹಿಸಿದ ಪ್ರತಿಗಳಲ್ಲಿನ ಎಲ್ಲ ಸಮಸ್ಯೆಗಳನ್ನು ಸರಿಪಡಿಸಿ, ಪರಿಷ್ಕರಿಸಿ, ಶೋಧಿಸಿ, ಉತ್ತಮವಾದ ರೀತಿಯಲ್ಲಿ ಮುದ್ರಣಕ್ಕೆ ಅಣಿಗೊಳಿಸುವುದು ಒಬ್ಬ ಸಂಪಾದಕನ ಕಾರ್ಯ ವೈಖರಿಯಾಗಿರುತ್ತದೆ.

ಈ ರೀತಿಯಾದ ಪ್ರಾಚೀನ ಗ್ರಂಥಗಳನ್ನು ಬಹು ಅಚ್ಚುಕಟ್ಟಾಗಿ ಸಂಪಾದಿಸಿ ಮುದ್ರಿಸಿ ಅವುಗಳನ್ನು ಗ್ರಂಥರೂಪಕ್ಕೆ ತಂದ ಕೀರ್ತಿ ಎಂ.ಎ. ರಾಮಾನುಜಯ್ಯಂಗಾರ್ ರವರಿಗೆ ಸಲ್ಲುತ್ತದೆ. ಅವರ ಪರಿಶ್ರಮ ಸಾಹಸಗಳು ಇಂದಿಗೂ ಸ್ತುತ್ಯಾರ್ಹವಾದುವು ಎಂಬುದನ್ನು ಈ ಅಧ್ಯಯನದಲ್ಲಿ ತಿಳಿಸಲಾಗುತ್ತದೆ.

ಉದ್ದೇಶ

೧೯ನೇ ಶತಮಾನದ ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಎಂ. ಎ. ರಾಮಾನುಜಯ್ಯಂಗಾರ್ ರವರು ಅಪೂರ್ವವಾದ ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಅವರು ಸಂಪಾದಿತ ಗ್ರಂಥಗಳೆಲ್ಲವು ಪ್ರಸ್ತುದಲ್ಲಿ ದೊರೆಯುವುದಿಲ್ಲ, ಕೆಲವು ದೊರೆತರು ಅವುಗಳು ಸ್ಥಿತಿಯನ್ನು ಗಮನಿಸಿದರೆ ಅದರ ಬಗ್ಗೆ ಯಾವ ಮಾಹಿತಿಯು ದೊರೆಯುವುದಿಲ್ಲ. ಇಂತಹ ಗ್ರಂಥಗಳು ನಾಶವಾಗುತ್ತಿರುವುದು ಶೋಚನೀಯವೆನಿಸುತ್ತದೆ. ಅವುಗಳಲ್ಲಿ ಕೆಲವು ಕಾವ್ಯಗ್ರಂಥಗಳು, ಶಾಸ್ತ್ರಗ್ರಂಥಗಳು ಮತ್ತು ಇತರ ಗ್ರಂಥಗಳು ಪ್ರಸ್ತುತ ಉತ್ತಮವಾಗಿದ್ದು ಅಂತಹ ಗ್ರಂಥಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಇದರಿಂದ ಕೆಲವು ಪ್ರಾಚೀನ ಕೃತಿಗಳ ಮಾಹಿತಿ ದೊರೆತಂತಾಗುತ್ತದೆ. ಈ ಹಿಂದೆ ಪ್ರಕಟವಾಗಿರುವ ಹಲವಾರು ಗ್ರಂಥಗಳು ನಾಶವಾಗಿದ್ದು ಅವುಗಳ ಹೆಸರು ಮಾತ್ರ ದೊರೆತು ಅವುಗಳ ವಿವರವೇ ಇಲ್ಲದಿರುವುದು

ಕಂಡುಬರುತ್ತದೆ ಅಂತಹ ಕೆಲವು ದೊರೆತ ಗ್ರಂಥಗಳ ವಿಚಾರಗಳನ್ನು ಮತ್ತು ಅವರು ಸಾಧಿಸಿದ ಸಾಧನೆಯ ಬಗ್ಗೆ ತಿಳಸುವುದೇ ಈ ಅಧ್ಯಯನದ ಉದ್ದೇಶವಾಗಿದೆ.

ಸ್ವರೂಪ

ಪ್ರಸ್ತುತ ಅಧ್ಯಯನವು ಕನ್ನಡ ಗ್ರಂಥಸಂಪಾದನೆಗೆ ಎಂ.ಎ.ರಾಮಾನುಜಯ್ಯಂಗಾರ್ ಕೊಡುಗೆಯ ಬಗ್ಗೆ ಚರ್ಚಿಸಲಾಗಿದ್ದು, ರಾಮಾನುಜಯ್ಯಂಗಾರರ್ ರವರು ಜೀವನ ಮತ್ತು ಸಾಧನೆಯ ಬಗ್ಗೆ ವಿವರಿಸಲಾಗಿದೆ. ಇವರ ಸಂಪಾಧಿಸಿದ ಕೆಲವು ಲಭ್ಯ ಗ್ರಂಥಗಳ ಬಗ್ಗೆ ವಿವರವನ್ನು ನೀಡಿ, ಗ್ರಂಥಗಳನ್ನು ಸಂಪಾದಿಸಲು ಉಂಟಾದ ಸಮಸ್ಯೆಯ ಬಗ್ಗೆ ತಿಳಸಲಾಗಿದೆ. ಗ್ರಂಥಸಂಪಾದನೆಗೆ ಬಳಸಿದ ಹಸ್ತಪ್ರತಿಗಳು, ಸಂಪಾದಿತ ಗ್ರಂಥಳಲ್ಲಿನ ಕವಿ ಕೃತಿ ವಿಚಾರ ಗ್ರಂಥವಿಚಾರವನ್ನು ಚರ್ಚಿಸಲಾಗಿದೆ. ಹಸ್ತಪ್ರತಿಗಳನ್ನು ಶೋಧಿಸಿ, ಪರಿಷ್ಕರಿಸಿ, ಮುದ್ರಣಕ್ಕೆ ಸಿದ್ಧಪಡಿಸಿದ ಬಗ್ಗೆ, ಗ್ರಂಥಗಳಲ್ಲಿ ಕಂಡುವರುವ ಪಾಠಾಂತರದ ವಿಚಾರವನ್ನು ತಿಳಸಲಾಗಿದೆ.

ವ್ಯಾಪ್ತಿ

ರಾಮಾನುಜಯ್ಯಂಗಾರ್ ರವರು ಸಂಪಾದಿಸಿದ ಕೃತಿಗಳಾದ ಕಾವ್ಯಗ್ರಂಥಗಳಲ್ಲಿ ೧೭ ಚಂಪೂ ಗ್ರಂಥಗಳಲ್ಲಿ, ರನ್ನನ ಗದಾಯುದ್ಧ, ನಾಗಚಂದ್ರನ ಮಲ್ಲಿನಾಥ ಪುರಾಣ, ಚೌಂಡರಸನ ಅಭಿನವ ದಶಕುಮಾರ ಚರಿತೆ, ಅಗ್ಗಳ ದೇವನ ಚಂದ್ರಪ್ರಭ ಪುರಾಣ ಮುಂತಾದ ಕೆಲವು ನನಗೆ ಲಭ್ಯವಾದ ಗ್ರಂಥಗಳ ಬಗ್ಗೆ ವಿವರಿಸಲಾಗಿದ್ದು ಮತ್ತು ಅದೇ ಗ್ರಂಥವನ್ನು ಬೇರೆ ಸಂಪಾದಕರು ಸಂಪಾದಿಸಿದ್ದು ಅವುಗಳನ್ನು ಚರ್ಚಿಸಲಾಗಿದೆ. ಹಾಗೇಯೇ ೧೨ ಷಟ್ಪದಿಗ್ರಂಥಗಳಲ್ಲಿ, ರಾಘವಾಕನ ಹರಿಶ್ಚಂದ್ರಕಾವ್ಯ, ಗುಬ್ಬಿ ಮಲ್ಲಣಾರ್ಯನ ಭಾವ ಚಿಂತಾರತ್ನಂ, ಮುದ್ದಣ ಕವಿಯ ಶ್ರೀರಾಮ ಪಟ್ಟಾಭಿಷೇಕಂ, ಇನ್ನು ಮುಂತಾದ ಲಭ್ಯ ಗ್ರಂಥಗಳನ್ನು ಮತ್ತು ಇವುಗಳನ್ನೇ ಅನ್ಯ ಸಂಪಾದಕರು ಸಂಪಾದಿಸಿ ಪ್ರಕಟಿಸಿರುವ ವಿಚಾರಗಳ ಬಗ್ಗೆ ಚರ್ಚಿಸಲಾಗಿದೆ. ಇದೇರೀತಿ ಕೀರ್ತನೆ, ಸಾಂಗತ್ಯ ಮತ್ತು ಗದ್ಯಗ್ರಂಥಗಳು ಹಾಗೂ ಶಾಸ್ತ್ರ ಗ್ರಂಥಗಳಾದ ಅಲಂಕಾರ ಗ್ರಂಥಗಳು, ನಿಘಂಟುಗಳು, ಛಂದಸ್ಸು ಮುಂತಾದವು ಮತ್ತು ಇತರ ಗ್ರಂಥಗಳಾದ ಕನ್ನಡದ ಮೊದಲ ನಾಟಕ, ಗದ್ಯಾನುವಾದಗಳು, ಶತಕಗಳು ಮತ್ತು ಮತಗ್ರಂಥಗಳ ಬಗೆಗೆ ಚರ್ಚಿಸಲಾಗಿದ್ದು ದೊರೆತ ಕೆಲವು ಗ್ರಂಥಗಳನ್ನು ಮತ್ತು ಅದೇ ಗ್ರಂಥಗಳನ್ನು ಬೇರೆ ಸಂಪಾದಕರು ಸಂಪಾದಿಸಿ ಪ್ರಕಟಪಡಿಸಿರುವುದರ ಬಗ್ಗೆ ತಿಳಸುತ್ತಾ ರಾಮಾನುಜಯ್ಯಂಗಾರ್ ಅವರುಗಳಂದ ಹೇಗೆ ಸಂಪಾದನಾ ಕಾರ್ಯದಲ್ಲಿ ಭಿನ್ನವಾಗಿದ್ದಾರೆ ಎಂಬುದರ ಬಗೆಗೆ ಚರ್ಚೆಯನ್ನು ನಡೆಸಲಾಗಿದೆ.

****

ಅಧ್ಯಾಯ – ೨

ಎಂ.ಎ. ರಾಮಾನುಜಯ್ಯಂಗಾರ್ ರವರ ಜೀವನ ಮತ್ತು ಸಾಧನೆ

ಗ್ರಂಥಸಂಪಾದನೆ ಎಂದರೆ ಯಾವುದೋ ಒಂದು ಅಪ್ರಕಟಿತ ಕಾವ್ಯಕ್ಕೆ ದೊರೆತ ಹಸ್ತಪ್ರತಿಗಳೆಲ್ಲವನ್ನು ಒಂದೆಡೆ ಸೇರಿಸಿ ಅವುಗಳಲ್ಲಿ ಒಂದು ಉತ್ತಮವಾದ ಪ್ರತಿಯಿಂದ ಗ್ರಂಥವನ್ನು ಮುದ್ರಿಸುವುದಾಗಿದೆ. ಪ್ರಾಚೀನ ಓಲೆಗರಿಗಳು, ಹಸ್ತಪ್ರತಿಗಳು ಮತ್ತು ಕಾಗದಪ್ರತಿಗಳನ್ನು ವ್ಯವಸ್ಥಿವಾಗಿ ಮುದ್ರಿಸಿ ಪ್ರಕಟಿಸಿ ಓದುಗರ ಮನಮುಟ್ಟುವಂತೆ ಮಾಡುವುದೇ 'ಗ್ರಂಥಸಂಪಾದನೆ'. ಹೀಗೆ ಸಂಪಾದಿಸಿದ ಪ್ರತಿಗಳನ್ನು ಪರಿಷ್ಕರಿಸಿ, ಪಾಠಾಂತರಗಳನ್ನು ಗುರ್ತುತಿಸಿ, ಸರಿಯಾದ ಪಾಠವನ್ನು ಹೊಂದಿಸಿ. ಗ್ರಂಥಪಾತಗಳಿಗೆ ಕವಿಯ ಪಾಠಕ್ಕೆ ಸಮೀಪವೆನಿಸಿದ ಪಾಠಗಳನ್ನು ನೀಡಿ ಒಂದು ಸುಂದರವಾದ ವ್ಯವಸ್ಥಿತವಾದ ಚೌಕಟ್ಟಿನಲ್ಲಿ ಮುದ್ರಿಸುವುದಾಗಿರುತ್ತದೆ. ಈ ರೀತಿಯಾದ ಕೆಲಸವು ಅಷ್ಟು ಸುಲಭವಾದದಲ್ಲ ಎಂಬುದು ಅದರಲ್ಲಿ ತೊಡಗಿಸಿಕೊಂಡವರಿಗೆ ಮಾತ್ರ ತಿಳಿಯುತ್ತದೆ. ಇಂತಹ ಕಾರ್ಯವನ್ನು ಮಾಡಿದ ಸಾಧಕರು ಎಂ.ಎ. ರಾಮಾನುಜಯ್ಯಂಗಾರ್ ರವರು ಇವರ ಜೀವನ ಮತ್ತು ಸಾಧನೆಯ ಒಂದು ಕಿರು ನೋಟವನ್ನು ಇಲ್ಲಿ ತಿಳಿಸಲಾಗುತ್ತದೆ.

೧. ಜೀವನ

ಅ. ಜನನ

ರಾಮಾನುಜಯ್ಯಂಗಾರ್ ೧೮೬೨ರಲ್ಲಿ ಮಂಡಯದ ಆಜೀ ವಂಶದವರಾದ ಶ್ರೀ ವೆಂಕಟಾಚಾರ್ ಮತ್ತು ಶೃಂಗಾರಮ್ಮ ಎಂಬ ದಂಪತಿಗಳಿಗೆ. ೩ನೇ ಮಗನಾಗಿ ಶ್ರೀಕೃಷ್ಣ ಜನ್ಮಾಷ್ಟಮಿಯಂದು. ರೋಹಿಣಿ ನಕ್ಷತ್ರದಲ್ಲಿ ಜನಿಸಿದರು. ಇವರಿಗೆ ಶ್ರೀ ಐಯ್ಯನ ಅಯ್ಯಂಗಾರ್ ಮತ್ತು ಶ್ರೀ ಶ್ರೀನಿವಾಸ ಅಯ್ಯಂಗಾರ್ ಎಂಬ ಇಬ್ಬರು ಸಹೋದರರು ಮತ್ತು ಶ್ರೀಮತಿ ಅಲಮೇಲು ಎಂಬ ಸಹೋದರಿ. ಇವರ ಮನೆತನ ವಿದ್ವತ್ ಮನೆತನವಾಗಿದ್ದು ರಾಜಸನ್ಮಾನಿತರಾದ ಆನಂದಾಳ್ವಾರ್ ಇವರ ಮಾತಾಮಹರು. ಪ್ರಾಕ್ತನ ವಿಮರ್ಶನ ವಿಚಕ್ಷಣ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು ಇವರ ಸೋದರತ್ತೆಯ ಮಕ್ಕಳು[1]

ರಾಮಾನುಜಯ್ಯಂಗಾರ್ ರವರ ಮೊಮ್ಮಕ್ಕಳಾದ ಎಂ.ಆರ್. ಸಿಂಗಮ್ಮ ನವರು ಬಿ.ಎಂ.ಶ್ರೀ ಪ್ರತಿಷ್ಠಾನದಿಂದ ಪ್ರಕಟವಾದ ಮಣಿಹದಲ್ಲಿ ಬರೆದ ಗ್ರಂಥಸಂಪಾದನೆಗೆ ಎಂ.ಎ ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಎಂಬ ಲೇಖನದಲ್ಲಿ ಮತ್ತು ಎಂ.ಆರ್. ನರಸಿಂಹನ್ ರವರು ಐಬಿಎಚ್ ಪ್ರಕಾಶನದಿಂದ ಪ್ರಕಟವಾದ ಎಂ.ಎ. ರಾಮಾನುಜಯ್ಯಂಗಾರ್ ಎಂಬ ಗ್ರಂಥದಲ್ಲಿ ಅವರ

---

[1] ಎಂ.ಎ.ರಾಮಾನುಜಯ್ಯಂಗಾರ್, ಎಂ.ಆರ್. ನರಸಿಂಹನ್. ಐಬಿಎಚ್ ಪ್ರಕಾಶನ, ಬೆಂಗಳೂರು. ೧೯೭೬. ಪುಟ ೧೦

ತಾತನ ಜನನದ ವರ್ಷವನ್ನು ೧೮೬೪ ಎಂದು ಮುದ್ರಿಸಿದ್ದಾರೆ. ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ಮಾರ್ಗದಶಕ ಮಹನೀಯರು ಎಂಬ ಗ್ರಂಥದ ಲೇಖನವಾದ ಎಸ್.ಜಿ. ನರಸಿಂಹಾಚಾರ್ ಮತ್ತು ರಾಮಾನುಜಯ್ಯಂಗಾರ್ ಎಂಬುದರಲ್ಲಿ ಇಬ್ಬರ ಸಾಮ್ಯವನ್ನು ಹೇಳುತ್ತಾ ಈ ಇಬ್ಬರು ಹುಟ್ಟಿದ ವರ್ಷ ಒಂದೇ ೧೮೬೭ ಎಂದು ಹೇಳಿದ್ದಾರೆ. ಆದರೆ ಬಿ.ಎಂ.ಶ್ರೀ ಪ್ರತಿಷ್ಠಾನದಿಂದ ಪ್ರಕಟವಾದ ಸಾಹಿತ್ಯೋಪಾಸಕರು ಎಂಬ ಗ್ರಂಥದಲ್ಲಿ ಸಿಂಗಮ್ಮನವರೇ ಬರೆದಿರುವ ಎಂ. ಎ. ರಾಮಾನುಜಯ್ಯಂಗಾರ್ ಎಂಬ ಲೇಖನದಲ್ಲಿ ೧೮೬೭ ಎಂದು ಮುದ್ರಿಸಿ ಗೊಂದಲ್ಲವನುಂಟುಮಾಡಿದ್ದಾರೆ. ಹಾಗಾಗಿ ಈ ವಿಚಾರವಾಗಿ ಅವರಲ್ಲಿ ಚರ್ಚಿಸಿದಾಗ ಅವರು ದುಂದುಬಿನಾಮ ಸಂವತ್ಸರದ ರೋಹಿಣಿ ನಕ್ಷತ್ರದ ಪ್ರಕಾರ ೧೮೬೭ ನೇ ವರ್ಷವೇ ಸರಿಯಾದದ್ದು ಎಂದು ಉಂಟಾಗಿದ್ದ ಗೊಂದಲವನ್ನು ಸರಿಪಡಿಸಿದರು.

ಆ. ವಿದ್ಯಾಭ್ಯಾಸ,

ಮೈಸೂರಿನ ಸದ್ವಿದ್ಯಾ ಪಾಠಶಾಲೆಯ ಘನವಿದ್ವಾಂಸರಾದ ಪೆರಿಯಸ್ವಾಮಿ ತಿರುಮಲಾಚಾರ್ಯರ ಬಳಿ ಸಂಸ್ಕೃತ ಮತ್ತು ಕನ್ನಡವನ್ನು ವಿದ್ಯಾಭ್ಯಾಸ ಮಾಡಿ. ಮದರಾಸಿನಲ್ಲಿ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡು ಎಫ್.ಎ. ಮತ್ತು ಬಿ.ಎ ವ್ಯಾಸಂಗ ಮುಗಿಸಿ ನಂತರ ಇಂಜಿನಿಯರ್ ವ್ಯಾಸಂಗ ಸೇರಿ ಗೃಹ ಕೃತ್ಯದ ಅನಾನುಕೂಲ ಪರಿಸ್ಥಿತಿಯಿಂದ ಓದಿಗೆ ತೊಂದರೆ ಒದಗಿದ್ದರಿಂದ ಮೈಸೂರಿಗೆ ಹಿಂದಿರುಗಿದರು. ಇವರು ಗಣಿತ ಮತ್ತು ಖಗೋಳ ಶಾಸ್ತ್ರದಲ್ಲಿ ಅಪಾರವಾದ ಆಸಕ್ತಿ ಪ್ರಾವಿಣ್ಯತೆಯನ್ನು ಹೊಂದಿದ್ದರು. [2]

ಇ. ಉದ್ಯೋಗ:

ರಾಮಾನುಜಯ್ಯಂಗಾರ್ ತಮ್ಮ ೧೫ನೇ ವಯಸ್ಸಿನಲ್ಲಿಯೇ ಶ್ರೀ ನರಸಿಂಹಾಚಾರ್ ಎಂಬುವರ ಜ್ಯೇಷ್ಠ ಪುತ್ರಿಯಾದ ಯದುಗಿರಿಯಮ್ಮನವರೊಡನೆ ವಿವಾಹವಾದರು. ಇವರು ತಮ್ಮ ಜೀವನ ನಿರ್ವಹಣೆಗಾಗಿ ಮೈಸೂರು ವೆಸ್ಲಿಯನ್ ಮಿಷನ್ ಪಾಠಶಾಲೆಯಲ್ಲಿ ಗಣಿತಶಾಸ್ತ್ರ ಅಧ್ಯಾಪಕರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿ ಮಹಾರಾಣಿ ಕಾಲೇಜಿನ ಆಧ್ಯಾಪಕರಾಗಿ, ಅನಂತರ ಸರ್ಕಾರಿ ವಿದ್ಯಾಭ್ಯಾಸ ಇಲಾಖೆಯಲ್ಲಿ ಭಾಷಾಂತರಕಾರರಾಗಿ ಸೇವೆಸಲ್ಲಿಸಿ ನಿವೃತರಾದವರು.

ಸಂಸ್ಕೃತ, ತಮಿಳು, ಇಂಗ್ಲಿಷ್ ಭಾಷೆಗಳಲ್ಲಿ ಅದ್ವಿತೀಯ ಪಾಂಡಿತ್ಯ ಹೊಂದಿದ್ದ ಇವರು ಉದ್ಯೋಗದ ಜೊತೆ ಜೊತೆಗೆ ಗ್ರಂಥ ಪ್ರಕಟಣ ಕಾರ್ಯವನ್ನು ಕೈಗೊಂಡು ಹಲವಾರು ಪ್ರಾಚೀನ ಗ್ರಂಥಗಳನ್ನು ಪ್ರಕಟಿಸಿದರು. ಸಾಹಿತ್ಯಾಸಕ್ತಿ ಹೊಂದಿದ್ದ ಇವರು ತಾವೇ ಕೆಲವು ಸ್ವತಂತ್ರವಾಗಿ ಕೃತಿಗಳನ್ನು ರಚಿಸಿ, ಮಕ್ಕಳಿಗಾಗಿ ಅನೇಕ ಕಥೆಗಳನ್ನು ಭಾಷಾಂತರಿಸಿ ಪುಸ್ತಕಗಳನ್ನು

---

[2] ಎಂ.ಎ.ರಾಮಾನುಜಯ್ಯಂಗಾರ್. ಎಂ.ಆರ್. ನರಸಿಂಹನ್. ಐಬಿಎಚ್ ಪ್ರಕಾಶನ. ಬೆಂಗಳೂರು. ೧೮೭೬. ಪುಟ ೧೧

ಸಿದ್ಧಪಡಿಸಿಕೊಟ್ಟರು. ಆಜೀವ ಪರ್ಯಂತ ಕನ್ನಡ ಸೇವೆಯನ್ನು ಮಾಡುತ್ತಾ ಕ್ರಿ.ಶ. ೧೯೩೭ ರಲ್ಲಿ ವಿಧಿವಶರಾದರು.[3]

೨. ಸಾಧನೆ

ಕನ್ನಡದ ಮೇಲೆ ಅಭಿಮಾನ ಹೊಂದಿದ್ದ ರಾಮಾನುಜಯ್ಯಂಗಾರ್‌ರವರು ಕಾವ್ಯ ಪ್ರಕಾಶನದಲ್ಲಿ ಆಸಕ್ತಿ ಹೊಂದಿ ಮೈಸೂರಿನ ವೆಸ್ಲಿಯನ್ ಮಿಷನ್ ಶಾಲೆಯಲ್ಲಿ ಗಣಿತ ಅಧ್ಯಾಪಕರಾಗಿದ್ದಾಗ ಬಿಡುವಿನ ಸಮಯದಲ್ಲಿ ಅವರ ಮನೆಯ ಹತ್ತಿರದಲ್ಲಿದ್ದ ಸದ್ವಿದ್ಯಾಮಂದಿರ ಮುದ್ರಣ ಶಾಲೆಗೆ ಹೋಗುತ್ತಿದ್ದರು. ಅದರ ಮಾಲೀಕರಾದ ಪಂಡಿತ ಕೊಮಾರಸ್ವಾಮಿ ತಿರುಮಲಾಚಾರ್ಯರು ಇವರ ಬಂಧುಗಳು. ಈ ಪಂಡಿತರು ಪ್ರಖ್ಯಾತ ಸಂಸ್ಕೃತ ವಿದ್ವಾಂಸರಾದ ಶ್ರೀ ಆಸೂರಿ ಆನಂದಾಳ್ವಾರ್ ರ ಜೊತೆ ಸೇರಿ ಕನ್ನಡಿಗರಿಗೆ ಸಂಸ್ಕೃತದ ಗ್ರಂಥಗಳನ್ನು ಕನ್ನಡದಲ್ಲಿ ಕೊಡಬೇಕೆಂದು ಕನ್ನಡ ಅರ್ಥಾನುವಾದ, ವಿವರಣೆ, ವ್ಯಾಖ್ಯಾನಗಳೊಡನೆ ಮುದ್ರಿಸಿ ಪ್ರಕಟಿಸುತ್ತಿದ್ದರು. ಹಾಗೆ ಪ್ರಕಟವಾದ ಸಂಸ್ಕೃತ ಗಂಥಗಳಲ್ಲಿ ಭೋಜರಾಜನ ಪ್ರಬಂಧವಾದ ಸಂಸ್ಕೃತ ಪ್ರಸಿದ್ಧ ಕೃತಿಗಳಲ್ಲಿ "ಶೃಂಗಾರ ಪ್ರಕಾಶ" ವು ಒಂದು.

ರಾಮಾನುಜಯ್ಯಂಗಾರ್ ಸದ್ವಿದ್ಯಾ ಮುದ್ರಣ ಶಾಲೆಯಲ್ಲಿ ಸಂಜೆ ಮತ್ತು ಬಿಡುವಿನ ವೇಳೆಯಲ್ಲಿ ಈ ಇಬ್ಬರ ಮಿತ್ರರ ಜೊತೆಯಲಿದ್ದು ಅವರ ಕಾರ್ಯಕ್ಕೆ ನೆರವಾಗುತ್ತಿದ್ದರು. ಆ ಸಮಯದಲ್ಲಿ ಮುದ್ರಣಕ್ಕೆ ಸಂಬಂಧಪಟ್ಟ ವಿಚಾರಗಳಾದ ಅಚ್ಚಿನ ಮೊಳೆ ಜೋಡಿಸುವುದು, ಕರಡು ತಿದ್ದುವುದು, ಓಲೆಗರಿಗಳನ್ನು ಓದುವ ರೀತಿ, ಅವುಗಳನ್ನು ಅಚ್ಚಿಗೆ ಸಿದ್ಧಪಡಿಸುವ ರೀತಿ, ಇವೇ ಮೊದಲಾದ ಗ್ರಂಥ ಮುದ್ರಣ ಪ್ರಕಾಶನಕ್ಕೆ ಸಂಬಂಧಿಸಿದ ವಿಷಯಗಳನ್ನೆಲ್ಲ ಅರಿತುಕೊಂಡದ್ದರು.

ಯಾವುದೇ ಓಲೆಗರಿಗಳನ್ನು ಅಚ್ಚಿಗೆ ಸಿದ್ಧಪಡಿಸುವುದು ಸುಲಭವಾದ ಮಾತಾಗಿರಲಿಲ್ಲ ಈ ಕೆಲಸದ ಕಷ್ಟ ನಷ್ಟಗಳನ್ನು **ಡಿ.ವಿ.ಜಿ.** ತಮ್ಮ **ಜ್ಞಾಪಕ ಚಿತ್ರ ಶಾಲೆ**ಯಲ್ಲಿ ಈ ರೀತಿ ಹೇಳಿದ್ದಾರೆ. "ಇದು ಎಷ್ಟು ಕಷ್ಟದ ಕೆಲಸ, ಎಂಥ ರೇಜಿಗೆಯ ಕೆಲಸ ಎಂಬುದನ್ನು ಅನುಭವವುಳ್ಳವರು ಮಾತ್ರವೇ ಬಲ್ಲರು. ಹಳೆಯ ತಾಳೆಯೋಲೆಗಳು ಒಣಗಿದ ಸೌದೆಯಂತಾಗಿರುತ್ತದೆ, ಮುಟ್ಟಿದರೆ ಮುರಿದು ಹೋಗುವ ಹಾಗಿರುತ್ತದೆ. ಅವುಗಳನ್ನು ನಾಜೂಕಿನಿಂದ ಬಿಡಿಸಿ ಬೇರೆಮಾಡಬೇಕು. ಆಮೇಲೆ ಅವುಗಳನ್ನು ಓದುವ ಕೆಲಸ, ಪತ್ರಕ್ಕೆ ಸೊಪ್ಪಿನ ರಸವನ್ನು ಸವರಬೇಕು. ಆಗ ಅಕ್ಷರಗಳು ಕರಿಯ ರೇಖೆಗಳಲ್ಲಿ ಎದ್ದು ಕಾಣುತ್ತವೆ. ಆಮೇಲೆ ಮೋಡಿ ಅಕ್ಷರಗಳ ಸರಪಳಿಯನ್ನು ಬಿಡಿಸುವ ಕಷ್ಟ. ಈ ಕಷ್ಟವಂತೂ ಬಹಳ ದೊಡ್ಡದು(ಲಿಪಿ, ಭಾಷೆ) ತಾಳೆಯೋಲೆ ಪತ್ರದಲ್ಲಿ ಪದ್ಯಗಳನ್ನು ಪಾದಪಾದಗಳಾಗಿ ಬಿಡಿಸಿರುವುದಿಲ್ಲ ಪದ್ಯಗಳನ್ನೇ ಒಂದರಿಂದ ಇನ್ನೊಂದನ್ನು ಬಿಡಿಸಿರುವುದಿಲ್ಲ, ಗ್ರಂಥದಲ್ಲಿ ಒಂದೇ ವಾಕ್ಯವೆಂಬಂತೆ

[3] ಮಣಿಹ, ಗ್ರಂಥ ಸಂಪಾಥನೆಗೆ ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಅವರ ಕೊಡುಗೆ, ಎಂ. ಎ. ಸಿಂಗಮ್ಮ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ(ರಿ), ಬೆಂಗಳೂರು, ೧೯೮೭ ಪುಟ ೨೩೭-೨೭೪

ಕಾವ್ಯದ ಮೊದಲ ಮಾತಿನಿಂದ ಕಡೆಯ ಮಾತಿನವರೆಗೂ ಒಂದೇ ಸರಪಳಿಯಾಗಿ ಬಿಗಿದಿರುತ್ತದೆ. ಒಂದು ತಾಳೆಯೋಲೆಯ ಒಂದು ಕಡೆಯ ಬರಹವನ್ನೋದಲು ಅರ್ಧದಿವಸ ಹಿಡಿದರು ಹೆಚ್ಚಿಲ್ಲ. ಇಂಥ ಕೆಲಸವನ್ನು ನಿರ್ವಹಿಸಲು ಬರಿಯ ಸಾಹಿತ್ಯ ಸಾಲದು ಅದರ ಜೊತೆಗೆ ಉತ್ಸಾಹವೂ, ತಾಳ್ಮೆಯು, ಸಹನೆಯೂ, ಅಸಮಾನ್ಯವಾದಷ್ಟು ಸೇರಿರಬೇಕು. ಅಚ್ಚಿಗೆ ಮೂಲ ಪ್ರತಿಯನ್ನು ಸಿದ್ಧಪಡಿಸುವುದು ಹೊಸದಾಗಿ ಗ್ರಂಥವನ್ನು ರಚಿಸುವುದಕ್ಕಿಂತ ಹೆಚ್ಚಿನ ಶ್ರಮವಿದ್ದಿರಬೇಕೆಂದು ನನಗನ್ನಿಸುತ್ತದೆ"[೪] ಎಂದಿದ್ದಾರೆ.

ಇಂತಹ ಪರಿಶ್ರಮದ ಕೆಲಸವನ್ನು ಮಾಡಲು ರಾಮಾನುಜಯ್ಯಂಗಾರ್ ತೀರ್ಮಾನಿಸಿ ತಿರುಮಲಾಚಾರ್ಯರು ಸಂಸ್ಕೃತ ಗ್ರಂಥಗಳನ್ನು ಅನುವಾದ, ವ್ಯಾಖ್ಯಾನ, ವಿವರಣೆಗಳೊಂದಿಗೆ ಕನ್ನಡಿಗರಿಗೆ ನೀಡುತ ಸಂಸ್ಕೃತ ಮತ್ತು ಕನ್ನಡ ಸೇವೆಯನ್ನು ಮಾಡುತ್ತಿದ್ದಾಗ, ರಾಮಾನುಜಯ್ಯಂಗಾರ್ ರವರು ಹಳಗನ್ನಡ ಗ್ರಂಥಗಳನ್ನು ಹೊಸಗನ್ನಡ ಅನುವಾದ, ವ್ಯಾಖ್ಯಾನ, ಟಿಪ್ಪಣಿ, ವಿವರಣೆಗಳೊಂದಿಗೆ, ಶುದ್ಧಪಾಠಗಳೊಂದಿಗೆ ಜನಕ್ಕೆ ಕೊಟ್ಟು ಕನ್ನಡ ಸೇವೆ ಮಾಡುವುದಾಗಿ ಸಂಪಾದನಾ ಕಾರ್ಯವನ್ನು ವಹಿಸಿಕೊಂಡು ಪ್ರಸಿದ್ಧ ಕೃತಿಗಳನ್ನು ಪ್ರಕಟಿಸಿದರು ಅವುಗಳಲ್ಲಿ ಕೆಲವು ಈ ಕೆಳಗಿನ ಪಟ್ಟಿಯಿಂದ ತಿಳಿಯುತ್ತದೆ.

ಚಂಪೂಗ್ರಂಥಗಳು

೧. ಮಹಾಕವಿ ರನ್ನನ ಗದಾಯುದ್ಧ. – ಪ್ರಥಮ ಮುದ್ರಣ ೧೮೯೫. ದ್ವಿತಿಯ ಮುದ್ರಣ. ೧೯೨೫. ತೃತಿಯ ಮುದ್ರಣ ೧೯೨೬

೨. ಕಮಲಭವನ ಶಾಂತೀಶ್ವರ ಪುರಾಣಂ. –೧೯೧೨. ಜಿ ಟಿ ಎ ಮುದ್ರಣಶಾಲೆ. ಮೈಸೂರು

೩. ಚಿಕುಪಾದ್ಯಾಯನ ದಿವ್ಯಸೂರಿ ಚರಿತೆ –೧೯೧೧. ಜಿ ಟಿ ಎ ಮುದ್ರಣಶಾಲೆ. ಮೈಸೂರು.

ಷಟ್ಪದೀ ಗ್ರಂಥಗಳು

೧. ಗುರುಲಿಂಗ ವಿಭುವಿನ ಭಿಕ್ಷಾಟನ ಚರಿತೆ ಸವ್ಯಾಖ್ಯಾನ (ವಾರ್ಧಿಕ) –೧೯೦೮. ಜಿಟಿಎ ಮುದ್ರಣಶಾಲೆ, ಮೈಸೂರು.

೨. ಕುಮಾರ ವಾಲ್ಮೀಕಿಯ ಮೈರಾವಣನ ಕಾಳೆಗ (ಭಾಮಿನಿ)– ೧೯೧೨. ಶ್ರೀನಿವಾಸ್ ಮುದ್ರಣ ಶಾಲೆ, ಮೈಸೂರು.

೩. ತಿರುಮಲೆವೈದ್ಯನ ಉತ್ತರ ರಾಮಾಯಣ (ಭಾಮಿನಿ)– ೧೯೧೦. ಜಿಟಿಎ ಮುದ್ರಣಶಾಲೆ. ಮೈಸೂರು.

೪. ಕೋನಯ್ಯನ ಗಯ ಚರಿತ್ರೆ (ಭಾಮಿನಿ). – ೧೯೧೫. ಶ್ರೀನಿವಾಸ್ ಮುದ್ರಣ ಶಾಲೆ. ಮೈಸೂರು.

---

[೪] ಸಾಹಿತ್ಯೋಪಾಸಕರು –ಜ್ಞಾಪಕ ಚಿತ್ರ ಶಾಲೆ. ಡಿ.ವಿ.ಜಿ. ಕಾವ್ಯಾಲಯ ಪ್ರಕಾಶನ. ೧೯೭೦. ಪುಟ ೫೯.೬೦.

ಗದ್ಯ ಗ್ರಂಥಗಳು

೧. ತಿರುಮಲೆಯಾರ್ಯನ ಚಿಕದೇವರಾಯ ವಂಶಾವಳಿ: ಹಳಗನ್ನಡ – ೧೯೩೩. ಜಿ ಟಿ ಎ ಮುದ್ರಣಶಾಲೆ. ಮೈಸೂರು.

೨. ಚಿಕುಪಾಧ್ಯಾಯನ ವಿಷ್ಣುಪುರಾಣ. ೧, ೪, ೫ ನೆ ಅಂಶಗಳು. – ೧. ಶ್ರೀನಿವಾಸ್ ಮುದ್ರಣ ಶಾಲೆ. ಮೈಸೂರು. ೧೯೧೪. ೪. ೧೯೧೧. ೫. ೧೯೧೦

೩. ಕನ್ನಡ ವಚನ ಕಾದಂಬರಿ– ಪೂರ್ವಭಾಗ. ಕೆ.ಎನ್. ನರಸಿಂಹಯ್ಯ ಮುದ್ರಣಶಾಲೆ ಮೈಸೂರು. ೧೯೨೩

೪. ಬಾಳಲೋಚನನ ಬತ್ತೀಸಪುತ್ತಳ ಕಥೆಗಳು. – ೧೯೦೮. ಜಿ ಟಿ ಎ ಮುದ್ರಣಶಾಲೆ. ಮೈಸೂರು.

ನಾಟಕ ಗದ್ಯಾನುವಾದಗಳು.

೧. ಮುಮ್ಮಡಿ ಕೃಷ್ಣರಾಜ ಒಡೆಯರ ಶಾಕುಂತಳ ನವೀನ ಟೀಕೆ. – ೧೯೧೪. ಶ್ರೀನಿವಾಸ್ ಮುದ್ರಣ ಶಾಲೆ. ಮೈಸೂರು.

ಛಂದಸ್ಸು

೧. ನಂದಿಕವಿಯ ನಂದಿಛಂದಸ್ಸು. ಸವಿವರಣ – ೧೯೦೯. ಜಿ ಟಿ ಎ ಮುದ್ರಣಶಾಲೆ. ಮೈಸೂರು.

ಸಾಂಗತ್ಯದ ಹಾಡು

೧. ಪ್ರಧಾನಿ ತಿರುಮಲಾರ್ಯನ ಕರ್ಣ ವೃತ್ತಾಂತ ಕಥ – ಮುದ್ರಣ ಶಾಲೆ. ಮೈಸೂರು.

೨. ಸಂಚಿಹೊನ್ನಮ್ಮನ ಹದಿಬದೆಯ ಧರ್ಮ. – (ದ್ವಿ) ೧೯೩೫ ಜಿ ಟಿ ಎ ಮುದ್ರಣಶಾಲೆ. ಮೈಸೂರು.

ಮತಗ್ರಂಥಗಳು:– ಗದ್ಯ

೧. ವೇದಾಂತವಿವೇಕಸಾರ. ಪ್ರಥಮಭಾಗ (ಅದ್ವೈತ). – ೧೯೦೮. ಸ್ಟಾರ್ ಪ್ರೆಸ್. ಮೈಸೂರು

ರಾಮಾನುಜಯ್ಯಂಗಾರ್ ರವರು ಸಂಪಾದನಾ ಕಾರ್ಯವಷ್ಟೆ ಅಲ್ಲದೇ ಇವರಿಗೆದ್ದ ಅಪಾರ ಪಾಂಡಿತ್ಯದಿಂದ ಕೆಲವು ಸ್ವತಃ ಗ್ರಂಥಗಳನ್ನು ರಚಿಸಿರುವುದನ್ನು ಗಮನಿಸಬಹುದು.

ಅಂತಹ ನವೀನ ಗ್ರಂಥಗಳು

೧. ಮಹಾಭಾರತ ಕಥಾಪ್ರಸಂಗ ಆದಿಪರ್ವ ಮತ್ತು ಸಭಾಪರ್ವ

೨. ಕವಿಸಮಯಂ – ಕಾವ್ಯರಸವನ್ನು ಬೋಧಿಸುವ ವಿಮರ್ಶೆ:

೩. ಬಾಗಿಲು ಭದ್ರ: ಇದೊಂದು ತತ್ವ ಬೋಧಕ ಗ್ರಂಥ–

೪. ಸುವ್ರತ– ಕರ್ಮವಿಲಾಸವನ್ನು ಬೋಧಿಸುವ ಕಾದಂಬರಿ:

೫. ಕವಿಕಾರ್ಯ ಪ್ರಶಂಶೆ: ಕನ್ನಡ ಕಾವ್ಯ ವಿಮರ್ಶೆಯ ಕೃತಿ

೬. ಪ್ರಮಾಣಪ್ರಮೇಯ ವಿವೇಕ-ಮತಬೋಧಾವತರಣಿಕೆ:

೭. ಪ್ರಬಂಧಾವಳಿ ಅಥವಾ ಐಹಿಕಸುಖಸಾಧನಂ

ಹೀಗೆ ವೈವಿಧ್ಯಮಯವಾದ ಗ್ರಂಥಗಳನ್ನು ಹಲವಾರು ಹಸ್ತಪ್ರತಿಗಳನ್ನು ಹೋಲಿಸಿ. ಪಾಠಾಂತರಗಳನ್ನು, ಟಿಪ್ಪಣಿಗಳನ್ನು, ವ್ಯಾಕರಣ ಛಂದಸ್ಸಿನ ವಿವರಗಳನ್ನು, ತಿಳಿಸಿ ವಿದ್ವತ್ಪೂರ್ಣವಾಗಿ ಸಂಪಾದಿಸಿ ಪ್ರಕಟಿಸಿರುವುದು ಸ್ತುತ್ಯಾರ್ಹವಾಗಿದೆ.

೨. ರಾಮಾನುಜಯ್ಯಂಗಾರ್‌ರಿಗೆ ಎಸ್.ಜಿ. ನರಸಿಂಹಾಚಾರ್ ನೆರವು

ಕನ್ನಡಸಾಹಿತ್ಯ ಕ್ಷೇತ್ರದಲ್ಲಿ ಗ್ರಂಥಾಸಂಪಾನೆಗೆ ಶ್ರಮಿಸಿದ ಮಹನೀಯರಾದವರೆಂದರೆ. ಎಸ್.ಜಿ. ನರಸಿಂಹಾಚಾರ್. ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಆರ್. ನರಸಿಂಹಾಚಾರ್. ಮಹಾಕಾವ್ಯಗಳನ್ನು ರಚಿಸಿದ ರನ್ನ. ಪೊನ್ನ ಪಂಪರು ಅಂದಿನ ರತ್ನತ್ರಯರಾದರೆ. ಎಂ.ಎ. ರಾಮಾನುಜಯ್ಯಂಗಾರ್. ಎಸ್.ಜಿ.ನರಸಿಂಹಾಚಾರ್ ಮತ್ತು ಆರ್. ನರಸಿಂಹಾಚಾರ್ಯರು ಇಂದಿನ ರತ್ನತ್ರಯರು"[5] ಎಂದು ಆಚಾರ್ಯ ಬಿ.ಎಂ.ಶ್ರೀ. ಅವರು ಹೇಳಿದ್ದಾರೆ.

ಆ ರತ್ನತ್ರಯರಲ್ಲಿ ಎಸ್.ಜಿ. ನರಸಿಂಹಾಚಾರ್ ಮತ್ತು ಎಂ.ಎ. ರಾಮಾನುಜ ಅಯ್ಯಂಗಾರ್ ರವರು ಪ್ರಮುಖರು. ರಾಮಾನುಜಯ್ಯಂಗಾರ್ ರವರಿಗೆ ಗ್ರಂಥಸಂಪಾದನಾ ಕಾರ್ಯದಲ್ಲಿ ನೆರವಾದವರು ಎಸ್. ಜಿ. ನರಸಿಂಹಾಚಾರ್. ಮೈಸೂರು ಜಿಲ್ಲೆಯ. ಶ್ರೀರಂಗಪಟ್ಟಣದ ಅಳಸಿಂಗರಾಚಾರ್ ತಾಯಿ ಸೀತಮ್ಮನವರ ಮಗ. ಶ್ರೀರಂಗ ಪಟ್ಟಣದಲ್ಲಿ ಉಪಾಧ್ಯಾಯರಾಗಿ. ಮೈಸೂರು ಸರ್ಕಾರದ ವಿದ್ಯಾಭ್ಯಾಸ ಇಲಾಖೆಯಲ್ಲಿ ಕಾರ್ಯನಿರ್ವಾಹಕರಾಗಿ ನಂತರ ೧೮೯೧ ರಲ್ಲಿ ಅಂದಿನ ಮೈಸೂರು ಮಹಾರಾಜರಾಗಿದ್ದ ಚಾಮರಾಜೇಂದ್ರ ಒಡೆಯರು ಪ್ರಾರಂಭಿಸಿದ ಓರಿಯೆಂಟಲ್ ಲೈಬ್ರರಿಯಲ್ಲಿ ಲೈಬ್ರರಿಯನ್ ಆಗಿ. ಭಾಷಾಂತರಕಾರರಾಗಿಯೂ ಕಾರ್ಯನಿರ್ವಹಿಸಿದವರು. ಆ ಸಂದರ್ಭದಲ್ಲಿ ಎಸ್.ಜಿ. ನರಸಿಂಹಾಚಾರ್ಯರು ತಮ್ಮದೇ ಆದ ಕೆಲವು ಅನುವಾದಿತ ಗ್ರಂಥಗಳ ಮೂಲಕ. ಅನುವಾದ ಕಾರ್ಯದಲ್ಲಿ ತಮ್ಮ ಪ್ರೌಢಿಮೆಯನ್ನೂ ಕೌಶಲ್ಯವನ್ನೂ ಬೆಳಸಿಕೊಂಡಿದ್ದುದ್ದರಿಂದ ಹಳಗನ್ನಡ ಗ್ರಂಥಗಳ ಸಂಪಾದಕರಾಗಿ ಮಹಾಕವಿ ಪಂಪನ "ಆದಿಪುರಾಣ"ವನ್ನು ಸಂಪಾದಿಸಿ. ೧೯೦೦ ರಲ್ಲಿ ಸಂಸ್ಥೆಯ ಪ್ರಪ್ರಥಮ ಕನ್ನಡ ಪ್ರಕಟಣೆಯನ್ನಾಗಿ ಹೊರತಂದವರು. ಇಷ್ಟೇ ಅಲ್ಲದೆ ಅನೇಕ ಕೃತಿಗಳನ್ನು ರಚಿಸಿ. ಸಂಸ್ಕೃತ ಮತ್ತು ಇಂಗ್ಲಿಷ್‌ನ ಪ್ರಸಿದ್ಧ ಕೃತಿಗಳನ್ನು ಅನುವಾದಿಸಿ ಪ್ರಕ್ರಟಿಸಿದ್ದಾರೆ. ೧೯೦೪ ರಲ್ಲಿ ರುದ್ರಭಟ್ಟನ 'ಜಗನ್ನಾಥ ವಿಜಯವನ್ನೂ ಸಹ ಸಂಪಾದಿಸಿ ಪ್ರಕಟಿಸಿದ್ದಾರೆ. ಆದಿಪುರಾಣವನ್ನು ಪ್ರಥಮ

---

[5] ಮಣಿಹ, ಗ್ರಂಥ ಸಂಪಾಧನೆಗೆ ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಅವರ ಕೊಡುಗೆ. ಎಂ. ಎ. ಸಿಂಗಮ್ಮ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ(ರಿ). ಬೆಂಗಳೂರು. ೧೯೮೨ ಪುಟ ೨೭೨.

ಕನ್ನಡ ಪ್ರಕಟಣೆಯಾಗಿ ಹೊರತಂದ ದೃಷ್ಟಿಯಿಂದ ಎಸ್.ಜಿ. ನರಸಿಂಹಾಚಾರ್ ಈಗಿನ ಪ್ರಕಟನೆಗಳಿಗೆ "ಪಿತಾಮಹ"[6]ರೆಂದು ಕರೆಯಬಹುದಾಗಿದೆ. ಎಂದು ಅಭಿಪ್ರಾಯಪಟ್ಟಿದ್ದಾರೆ.

ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಇವರ ಜೋಡಿ ಅಪರೂಪವಾದದ್ದು. ಇವರಿಬ್ಬರ ನಡುವಿನ ಸಾಮ್ಯವನ್ನು ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ಹೀಗೆ ವರ್ಣಿಸುತ್ತಾರೆ. "ಈ ಇಬ್ಬರು ತಮಿಳು ಮನೆತನದ ರಾಮಾನುಜ ಪಂಥೀಯರು, ಶ್ರೀವೈಷ್ಣವ ಸಂಪ್ರದಾಯಸ್ತ ಕುಟುಂಬಕ್ಕೆ ಸೇರಿದರರು. ಹುಟ್ಟಿದ ವರ್ಷ ಒಂದೇ, ಹುಟ್ಟಿದ ಜಿಲ್ಲೆ ಒಂದೇ, ವಿದ್ಯಾಭ್ಯಾಸವೂ ಒಂದೇ ಕಡೆ, ಒಬ್ಬರೆ ಗುರುಗಳು – ಸದ್ವಿದ್ಯಾಪಾಠಶಾಲೆಯ ಸ್ಥಾಪಕರಾದ ಪಂಡಿತ ಪೆರಿಯಸ್ವಾಮಿ ತಿರುಮಲಾರ್ಯರು. ಒಂದೇ ಜಿಲ್ಲೆಯ ಸಾಹಿತಿಗಳು. ಮತ್ತು ಅಂದಿನ ಮೈಸೂರು ವಿದ್ಯಾ ಮತ್ತು ಭಾಷಾಂತರ ಇಲಾಖೆಗಳಲ್ಲಿ ಕೆಲಸಮಾಡಿದ್ದಾರೆ. ಅಂದಿನ ಶಿಕ್ಷಣ ಸಂಪ್ರದಾಯಕ್ಕೆ ಅನುಗುಣವಾಗಿ ಸಂಸ್ಕೃತ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿಯೂ ಸಮಾನವಾದ ಪ್ರಭುತ್ವವನ್ನು ಗಳಿಸಿ. ಒಟ್ಟಿಗೆ ಸಾಹಿತ್ಯ ಕೃಷಿಯಲ್ಲಿ ತೊಡಗಿದವರು. ಗ್ರಂಥಸಂಪಾದನಾ ಕಾರ್ಯದಲ್ಲಿ ಜೊತೆಯಾಗಿ ಶ್ರಮಿಸಿದವರು. ಈ ಉಭಯರ ಸ್ನೇಹ ಸಾಹಚರ್ಯಗಳು ಹೆಚ್ಚು ನಿಕಟವಾಗಲು ಈ ಸಾಮ್ಯಗಳೇ ಸಾಕ್ಷಿ. ಇವರಿಬ್ಬರ ಜೋಡಿಯನ್ನು ಪಾಶ್ಚಾತ್ಯ ವಿದ್ವಾಂಸರುಗಳಾದ ಕಿಟಲ್- ರೈಸ್ ಜೋಡಿ ಇದ್ದಂತೆ[7] ಎನ್ನುತ್ತಾರೆ"

ಇಂತಹ ವಿದ್ವಾಂಸರು ಸಂಪಾದನಾ ಕಾರ್ಯದಲ್ಲಿ ಜೊತೆಗೂಡಿ ಹಲವಾರು ಕೃತಿಗಳನ್ನು ಸಂಪಾದಿಸಿ ಪ್ರಕಟಿಸುವುದರಲ್ಲಿ ಮಹತ್ ಸಾಧನೆಯನ್ನು ಮಾಡಿದ್ದಾರೆ. ೧೮೯೨ ರಲ್ಲಿ ರಾಮಾನುಜಯ್ಯಂಗಾರ್ ರವರು ಕನ್ನಡ ಅಭಿಮಾನದಿಂದ "ಕರ್ನಾಟಕ ಕಾವ್ಯ ಮಂಜರಿ" ಹೊಸ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ಆ ಸಮಯದಲ್ಲಿ ನೆರವಾದವರು ಎಸ್. ಜಿ ನರಸಿಂಹಾಚಾರ್. ಈ ಪತ್ರಿಕೆ ೫-೬ ವರ್ಷಗಳಲ್ಲಿ ಸುಮಾರು ೨೦-೨೫ ಹಳಗನ್ನಡ ನಡುಗನ್ನಡ ಗ್ರಂಥಗಳನ್ನು ಪ್ರಕಟಿಸಿತು. ಈ ಸಂದರ್ಭದಲ್ಲಿ ಹಳಗನ್ನಡ ಗ್ರಂಥಗಳ ಪ್ರಕಟಣೆಗಾಗಿ ಓಲೆಗರಿಗಳನ್ನು ಸಂಗ್ರಹಿಸಲು ನಾಡಿನಾದ್ಯಂತ ಸಂಚರಿಸಿ, ಸಂಗ್ರಹಿಸಿದ ಓಲೆಗರಿಗಳನ್ನು ಕಾಗದ ಪ್ರತಿಗಳನ್ನು ಅಚ್ಚಿಗಾಗಿ ಪ್ರತಿಮಾಡಿ, ಪಾಠಾಂತರಗಳನ್ನು ಗುರುತಿಸಿ, ತಪ್ಪು ಪಾಠಗಳನ್ನು ತಿದ್ದಿ. ಶುದ್ಧಪಾಠಗಳನ್ನು ಊಹಿಸಿ, ಅರ್ಥನಿರ್ಣಯ ಮಾಡಿ. ಟಿಪ್ಪಣಿಗಳನ್ನು ಕವಿಚರಿತ್ರೆಯನ್ನು ಬರೆದು ಪ್ರಕಟಿಸಿದ್ದಾರೆ. ಕ್ರೈಸ್ತ ಮಿಷನರಿಗಳೂ ಕನ್ನಡ ವಿದ್ವಾಂಸರೂ ಆದ ಕಿಟಲ್. ರೈಸ್ ಮೊದಲಾದವರು ಮಾಡುತ್ತಿದ್ದ ಗ್ರಂಥಸಂಪಾದನಾ ರೀತಿಯನ್ನು

---

[6] ಮಾರ್ಗದರ್ಶಕ ಮಹನೀಯರು. ಲೇಖನ-ಎಸ್.ಜಿ. ನರಸಿಂಹಾಚಾರ್. ಟಿ.ವಿ. ವೆಂಕಟಾಚಲ ಶಾಸ್ತ್ರಿ ಪುಟ – ೧೨೮

[7] ಮಾರ್ಗದರ್ಶಕ ಮಹನೀಯರು. ಲೇಖನ-ಎಸ್.ಜಿ. ನರಸಿಂಹಾಚಾರ್ ಮತ್ತು ಎಂ.ಎ.ರಾಮಾನುಜಯ್ಯಂಗಾರ್. ಟಿ.ವಿ. ವೆಂಕಟಾಚಲ ಶಾಸ್ತ್ರಿ. ಪುಟ- ೧೫೧,೧೫೨

ಮುಂದುವರೆಸಿ ಶ್ರೇಷ್ಠ ಹಳಗನ್ನಡ ಕಾವ್ಯಗಳಾದ ಗದಾಯುದ್ಧ, ಮಲ್ಲಿನಾಥ ಪುರಾಣ, ಲೀಲಾವತಿ ಪ್ರಬಂಧ, ಕರ್ನಾಟಕ ಪಂಚತಂತ್ರ, ಜಯನೃಪ ಕಾವ್ಯ ಮೊದಲಾದವುಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ನಂತರ ೧೮೯೯ ರಲ್ಲಿ ಮತ್ತೊಂದು ಹೆಸರಿನಲ್ಲಿ ನರಸಿಂಹಾಚಾರ್ ಸಹಕಾರದಿಂದ "ಕರ್ನಾಟಕ ಕಾವ್ಯ ಕಲಾನಿಧಿ" ಎಂಬ ಹೊಸ ಮಾಸ ಪತ್ರಿಕೆಯನ್ನು ಪ್ರಾರಂಬಿಸಿ ಹಳಗನ್ನಡ ಕೃತಿಗಳ ಜೊತೆಗೆ ಹೊಸಗನ್ನಡ ಕೃತಿಗಳನ್ನು ಪ್ರಕಟಪಡಿಸುವಲ್ಲಿ ನೆರವಾದರು. ಅಂತಹ ಗ್ರಂಥಳಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ೧೩ ಗ್ರಂಥಗಳನ್ನು ಪ್ರಕಟಿಸಲು ೧೯೦೩ ರಲ್ಲಿ ಅನುಮತಿ ಪಡೆದು ಅವುಗಳಲ್ಲಿ ಶಾಕುಂತಳ ನವೀನ ಟೀಕೆ, ವತ್ಸರಾಜಕಥೆ ಮುಂತಾದವುಗಳನ್ನು ಪ್ರಕಟಿಸಿದಾರೆ.[೮]

ಈ ಇಬ್ಬರು ವಿದ್ವಾಂದರು ಹಸ್ತಪ್ರತಿಗಳ ಒಡಲಿನಿಂದ ಮೊದಲ ಬಾರಿಗೆ ಬಹುಪಾಲು ಪ್ರಾಚೀನ ಕೃತಿಗಳನ್ನು ಬೆಳಕಿಗೆ ತಂದರು. ಇದು ಆ ಮಹನೀಯರ ದೊಡ್ಡ ಸಾಧನೆ. ನಂತರದ ಗ್ರಂಥಸಂಪಾದಕರ ಸಂಪಾದನೆಗಳಿಗೆ ಈ ಇಬ್ಬರೂ ವಿದ್ವಾಂಸರ ಆವೃತಿಗಳೇ ಮುಖ್ಯ ಆಧಾರಗಳಾದವು ಎಂಬುದು ಗಮನಿಸಬೇಕಾದ ಅಂಶವಾಗಿದೆ. ಇವರು ಆಧಾರ ಪ್ರತಿಯನ್ನು ವಿಚಕ್ಷಣೆಯಿಂದ ನಿರ್ಣಯಿಸಿ, ಪಾಠ ಸಂಕಲನ ಮಾಡಿ ಹೊಸಕಾಲದ ಮುದ್ರಣ ರೀತಿಗೆ ಅನುಗುಣವಾಗಿ ಕವಿಪಾಠವನ್ನು ನಿರ್ಣಯಿಸಿದ್ದಾರೆ. ಯಾವ ಸೌಕರ್ಯಗಳೂ ಮಾದರಿಗಳು ಇಲ್ಲದ ಕಾಲದಲ್ಲಿ ಇವರಿಬ್ಬರು ರಾತ್ರಿಯನ್ನು ಹಗಳನ್ನಾಗಿ ಮಾಡ ಶ್ರಮಿಸಿ, ಮಾದರಿಯನ್ನು ರೂಪಿಸುವ ಮೂಲಕ ಕನ್ನಡ ಸಾಹಿತ್ಯ ಚರಿತ್ರೆಗೆ ಭದ್ರ ಅಡಿರಚನೆ ಹಾಕಿದರು ಎನ್ನಬಹುದು.[೯]

ಇವರಿಬ್ಬರ ಗ್ರಂಥಸಂಪಾದನಾ ಕಾರ್ಯ ಹೇಗಿತ್ತು ಎಂಬುದಕ್ಕೆ ಈ ಕೆಳಗೆ ಕೊಟ್ಟಿರುವ ಗ್ರಂಥಪಟ್ಟಿಯೇ ಸಾಕ್ಷಿಯಾಗಿದೆ.

ಚಂಪೂಗ್ರಂಥಗಳು

೧. ಮಹಾಕವಿ ರನ್ನನ ಗದಾಯುದ್ಧ, – ೧೮೯೫, ವೆಸ್ಲಿಯನ್ ಮಿಷನ್, ಮೈಸೂರು.

೨. ಅಭಿನವ ಪಂಪ ಅಥವಾ ನಾಗಚಂದ್ರನ ಮಲ್ಲಿನಾಥಪುರಾಣ –೧೮೯೫, ಸದ್ವಿದ್ಯಾ ಮುದ್ರಣ ಶಾಲೆ, ಮೈಸೂರು.

೩. ಕವಿಕುಂಜರಾಭಿದ ನೇಮಿಚಂದ್ರನ ಲೀಲಾವತೀ ಪ್ರಬಂಧಂ –೧೮೯೮,

---

[8] ಮಣಿಹ, ಗ್ರಂಥ ಸಂಪಾಧನೆಗೆ ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಅವರ ಕೊಡುಗೆ, ಎಂ. ಎ. ಸಿಂಗಮ್ಮ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ(ರಿ), ಬೆಂಗಳೂರು, ೧೯೮೨ ಪುಟ ೨೩೭–೨೭೪

[9] ಕರ್ನಾಟಕ ಲೋಚನ, ವಿದ್ವತ್ ಪತ್ರಿಕೆ, ಎಸ್.ಜಿ.ನರಸಿಂಹಾಚಾರ್ ಸಾಹಿತ್ಯ ಸಾಧನೆ, ಡಾ. ಎಸ್.ಎಸ್.ಅಂಗಡಿ, ಪುಟ ೩೩

೪. ಅಗ್ಗಳದೇವನ ಚಂದ್ರ ಪ್ರಭಪುರಾಣಂ – ಅಗ್ಗಳ ಲೀಲಾವತಿ.– ೧೯೦೧, ೧೯೦೩ ಸ್ಟಾರ್ ಪ್ರೆಸ್ , ಮೈಸೂರು

೫. ಚೌಂಡರಾಯನ ಅಭಿನವ ದಶಕುಮಾರ ಚರಿತೆ –೧೯೦೨, ಸ್ಟಾರ್ ಪ್ರೆಸ್ , ಮೈಸೂರು

೬. ಅಭಿನವ ವಾದಿವಿದ್ಯಾನಂದನ ಕಾವ್ಯಸಾರಂ – ೧೮೯೮, ಜಿಟಿಎ ಮುದ್ರಣಶಾಲೆ, ಮೈಸೂರು.

೭. ತಿರುಮಲೆಯಾರ್ಯನ ಚಿಕದೇವರಾಜ ವಿಜಯಂ – ೧೮೯೬, ಜಿಟಿಎ ಮುದ್ರಣಶಾಲೆ, ಮೈಸೂರು.

೮. ಗೋಪಾಲ ಪ್ರಸಾದಿಯ ಚಿಕದೇವೇಂದ್ರ ವಂಶಾವಳಿ, – ೧೯೦೧, ಸ್ಟಾರ್ ಪ್ರೆಸ್ , ಮೈಸೂರು

ಷಟ್ಪದೀ ಗ್ರಂಥಗಳು

೧. ರಾಘವಾಂಕನ ಹರಿಶ್ಚಂದ್ರರ ಕಾವ್ಯ (ವಾರ್ಧಿಕ) – ೧೯೦೬, ಜಿಟಿಎ ಮುದ್ರಣಶಾಲೆ ಮೈಸೂರು

೨. ಗುಬ್ಬಿ ಮಲ್ಲಣಾರ್ಯನ ಭಾವ ಚಿಂತಾರತ್ನಂ (ವಾರ್ಧಿಕ), – ಪ್ರ ೧೯೦೧, ಒ ೧೯೩೩, ಜಿಟಿಎ ಮುದ್ರಣಶಾಲೆ ಮೈಸೂರು

೩. ಮಹಾಲಕ್ಷ್ಮಿಯ ಶ್ರೀರಾಮ ಪಟ್ಟಾಭಿಷೇಕಂ (ವಾರ್ಧಿಕ) – ೧೮೯೭.

೪. ಗೋಪಕವಿಯ ನಂದೀ ಮಾಹಾತ್ಮ್ಯಂ (ವಾರ್ಧಿಕ) – ೧೯೦೭, ಜಿಟಿಎ ಮುದ್ರಣಶಾಲೆ, ಮೈಸೂರು.

ಗದ್ಯ ಗ್ರಂಥಗಳು

೧. ಮುದ್ದಣ್ಣನ ಶ್ರೀರಾಮಾಶ್ವಮೇಧಂ: ಹಳಗನ್ನಡ – ೧೯೦೧,

೨. ಅದ್ಭುತರಾಮಾಯಣಂ (ಸಟಿಪ್ಪಣಂ) – ೧೮೯೬, ಜಿ ಟಿ ಎ ಮುದ್ರಣಶಾಲೆ, ಮೈಸೂರು

ಶತಕಗಳು

೧. ಸುಭಾಷಿತ ಮುಕ್ತಕಶತಕಂ (ಸಂಕಲಿತ) – ೧೮೯೮, ಸ್ಟಾರ ಪ್ಲಸ್ ಮೈಸೂರು

೨. ರತ್ನಾಕರ ಕವಿಯ ಅಪರಾಜಿತೇಶ್ವರ ಶತಕ – ೧೮೯೩ ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

೩. ಶ್ರೀವಾಸನ ವರ್ಷ ವರ್ಧಂತೀ ಶತಕ(ವಾರ್ಧಿಕ ಷಟ್ಪದಿ) – ೧೯೦೧, ಸ್ಟಾರ ಪ್ಲಸ್ ಮೈಸೂರು

ರಸಗ್ರಂಥ

೧. ಕವಿಕಾಮನ ಶೃಂಗಾರರತ್ನಾಕರ - ೧೮೯೪, ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

ನಿಘಂಟುಗಳು

೧. ಕರ್ಣಾಟಕ ನಿಘಂಟು –೧೮೯೩, ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

೨. ಚತುರಾಸ್ಯ ನಿಘಂಟು –೧೮೯೩, ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

೩. ಶಬ್ದಸಾರ ನಿಘಂಟು (ಗದ್ಯ) – ೧೮೯೭, ಜಿಟಿಎ ಮುದ್ರಣಶಾಲೆ, ಮೈಸೂರು.

೪. ಸೂರ್ಯಕವಿಯ ಕವಿಕಂಠ ಹಾರ –೧೯೦೨, ಸ್ಟಾರ ಪ್ಲಸ್ ಮೈಸೂರು

೫. ಕರ್ಣಾಟಕ ಸಂಜೀವನವೆಂಬ ಅಚಿಕುಳ ನಿಘಂಟು –೧೮೭೯, ಸ್ಟಾರ ಪ್ಲಸ್ ಮೈಸೂರು

ಸಾಂಗತ್ಯದ ಹಾಡು

೩. ಸಂಚಿಹೊನ್ನಮ್ಮನ ಹದಿಬದೆಯ ಧರ್ಮ, – ೧೮೯೩, ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು. ೭ (ದ್ವಿ) ೧೯೩೫ ಜಿ ಟಿ ಎ ಮುದ್ರಣಶಾಲೆ, ಮೈಸೂರು.

೪. ಕೃಷ್ಣಗೋಪೀವಿಲಾಸ ಅಥವಾ ಕೃಷ್ಣಬಾಲಲೀಲೆ – ೧೮೯೪ ೧೮೯೪, ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

ಕೀರ್ತನೆಗಳು

೧. ಚಿಕದೇವರಾಯನ ಗೀತಗೋಪಾಲ ಪ್ರಬಂಧ – ೧೯೦೫. ಜಿ ಟಿ ಎ ಮುದ್ರಣಶಾಲೆ, ಮೈಸೂರು.

ಇವಷ್ಟ ಅಲ್ಲದೆ ಇವರಿಬ್ಬರು ಸೇರಿ ಸುಮಾರು ೪೦ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ ಎಂಬ ಹೆಗ್ಗಳಕೆ ಗ್ರಂಥ ಸಂಪಾದನ ಕ್ಷೇತ್ರದಲ್ಲಿ ದೊರೆಯುತ್ತದೆ.

೩. ಪತ್ರಿಕೆಗಳಲ್ಲಿ ಪ್ರಾಚೀನ ಕಾವ್ಯಗಳ ಪ್ರಕಟಣೆ

ಆರ್ಯಮತ ಸಂಜೀವಿನಿ

೧೯ ಶತಮಾನದ ಕೊನೆ, ೧೮೮೮ ರಲ್ಲಿ ರಾಮಾನುಜಯ್ಯಂಗಾರರು ಸ್ವತಃ ಸಂಪಾದಕರಾಗಿ "ಆರ್ಯಮತ ಸಂಜೀವಿನಿ" ಎಂಬ ಮಾಸ ಪತ್ರಿಕೆಯನ್ನು ಆಪ್ತ ಗೆಳೆಯರಾದ ಎಸ್. ಜಿ ನರಸಿಂಹಾಚಾರ್ ಅವರ ಸಹಕಾರದಿಂದ ಪ್ರಾರಂಭಿಸಿದರು. ಆ ಶತಮಾನಗಳಲ್ಲಿ ಕನ್ನಡ ಪತ್ರಿಕೋದ್ಯಮದಲ್ಲಿ ಮಾಸಪತ್ರಿಕೆಗಳ ಮೂಲಕ ಕನ್ನಡ ಗ್ರಂಥಗಳನ್ನು ಕಂತು ಕಂತಾಗಿ ಪ್ರಕಟಿಸುವುದೇ ವಿಶೇಷವಾದ ಪದ್ಧತಿಯಾಗಿತ್ತು.

ಹೀಗೆ ಪ್ರಾರಂಭಿಸಿದ ಆರ್ಯಮತ ಸಂಜೀವಿನಿ ಪತ್ರಿಕೆಯಲ್ಲಿ ಅನೇಕ ಕೃತಿಗಳನ್ನು ಪ್ರಕಟಪಡಿಸಿ ಸಂಸ್ಕೃತ, ತಮಿಳು ಗ್ರಂಥಗಳನ್ನು ಕನ್ನಡ ವಿವರಣೆಯೊಡನೆ ಪ್ರಕಟಿಸುವುದರ ಜೊತೆಗೆ ಕನ್ನಡ ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಈ ಪತ್ರಿಕೆ ಮೂಲಕ, ಗೀತರೂಪ ಮುಕುಂದಮಾಲೆ, ಭಗವದ್ಗೀತಾರ್ಥ ಪ್ರತಿವಾದನ, ನೀತಿ ಸುಭಾಷಿತಗಳು ಮೊದಲಾದ ಸಂಸ್ಕೃತ ಗ್ರಂಥಗಳು ಕನ್ನಡ ಲಿಪಿಯಲ್ಲಿ ಮೂಲದೊಡನೆ ಅರ್ಥವಿವರಣೆಗಳೊದಿಗೆ ಪ್ರಕಟವಾದವು.

ರಾಮಾನುಜಯ್ಯಂಗಾರ್ ಪ್ರಕಟಣೆಯನ್ನು ಮುಂದುವರೆಸಿ ಸಂಸ್ಕೃತ ಮಾಹಾಭಾರತವನ್ನು ಸರಳಗನ್ನಡದಲ್ಲಿ ಗದ್ಯರೂಪದಲ್ಲಿ ಸಮಗ್ರವಾಗಿ ಕನ್ನಡೀಕರಿಸಿ ನೀಡಬೇಕೆಂದು ನಿರ್ಧರಿಸಿ ಮಹಾಭಾರತ ಕಥಾ ಪ್ರಸಂಗವೆಂಬ ಹೆಸರಿನಲ್ಲಿ 'ಆದಿಪರ್ವ', 'ಸಭಾಪರ್ವ'ಗಳನ್ನು ರಚಿಸಿ ಪ್ರಕಟಿಸಿದರು. ಚಿಕ್ಕದೇವರಾಜ ಒಡೆಯರ 'ವಿಶಿಷ್ಟಾದ್ವೈತ ತತ್ತ್ವ'ವನ್ನು ಸರಳ ಸುಂದರವಾಗಿ ನಿರೂಪಿಸುವ ಕೃತಿ 'ಚಿಕ್ಕದೇವರಾಜ ಬಿನ್ನಪಂ' ದ ಇಡೀ ಗ್ರಂಥವನ್ನು, ಚಿಕ್ಕುಪಾಧ್ಯಾಯನ 'ವಿಷ್ಣು ಪುರಾಣ' ಮೊದಲಾದ ಕನ್ನಡ ಗ್ರಂಥಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಿದರು. ಹೀಗೆ ೧೮೯೦ ರ ೧೯ನೇ ಶತಮಾನ ಕೊನೆಯಲ್ಲಿ ಪ್ರಾರಂಭವಾದ ಆರ್ಯಮತ ಸಂಜೀವಿನಿ ಮಾಸಪತ್ರಿಕೆ ಹಲವು ಗ್ರಂಥಗಳನ್ನು ಪ್ರಕಟಿಸಿದ ಒಂದೆರಡು ವರ್ಷದಲ್ಲಿಯೇ ಕಾರಣಾಂತರಗಳಿಂದ ನಿಂತು ಹೋಯಿತು.[೧೦]

ಕಾವ್ಯಮಂಜರಿ

ರಾಮಾನುಜಯ್ಯಂಗಾರ್ ರವರು ಕನ್ನಡ ಅಭಿಮಾನ ಮತ್ತೆ ಸಂಪಾದನಾ ಕಾರ್ಯಕ್ಕೆ ಕೈಹಾಕುವಂತೆ ಮಾಡಿ ಎಸ್. ಜಿ ನರಸಿಂಹಾಚಾರ್ಯರ ನೆರವಿನೊಂದಿಗೆ ೧೮೯೨ ರಲ್ಲಿ "ಕರ್ನಾಟಕ ಕಾವ್ಯ ಮಂಜರಿ" ಎಂಬ ಹೊಸ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ಇದು ೫-೬ ವರ್ಷಗಳಲ್ಲಿ ಸುಮಾರು ೨೦-೨೫ ಹಳಗನ್ನಡ ನಡುಗನ್ನಡ ಗ್ರಂಥಗಳನ್ನು ಪ್ರಕಟಿಸಿತು. ಈ ಸಂದರ್ಭದಲ್ಲಿ ಹಳಗನ್ನಡ ಗ್ರಂಥಗಳ ಪ್ರಕಟಣೆಗಾಗಿ ಓಲೆಗರಿಗಳನ್ನು ಸಂಗ್ರಹಿಸಲು ವಿದ್ವಾಂಸರಿಬ್ಬರೂ ನಾಡಿನ ಮೂಲೆ ಮೂಲೆಗಳಲ್ಲಿ ಸಂಚರಿಸಿ, ಕನ್ನಡ ನಾಡಿನ ವಿದ್ವಾಂಸರನ್ನು, ಸಾಹಿತ್ಯೋಪಾಸಕರನ್ನು ಬೇಟಿ ಮಾಡಿದವರು. ಓಲೆಗರಿಗಳನ್ನು, ಕಾಗದ ಪತ್ರಗಳನ್ನು ಇಟ್ಟುಕೊಂಡಿದ್ದವರು ಉದಾರ ಹಸ್ತದಿಂದ ಕೊಟ್ಟರು. ಕೆಲವರು ಮೂಲವನ್ನು ತಮ್ಮಲ್ಲಿಯೇ ಇಟ್ಟುಕೊಂಡು ಪ್ರತಿ ಮಾಡಿಕಳುಹಿಸಿದರು ಮತ್ತೆ ಕೆಲವರ ಬಳಿ ಹಣಕೊಟ್ಟು ಕೊಂಡುಕೊಂಡರು. ಇನ್ನೂ ಕೆಲವರಲ್ಲಿ ಎಷ್ಟೇ ಮನವೊಲಿಸಿದರು ಓಲೆಗರಿಗಳು ಪೂಜನೀಯವೆಂದು ವಂಶಪಾರಂಪರ್ಯವಾಗಿ ಬಂದದ್ದೆಂದು ಭಾವಿಸಿ ಕೊಡಲು ನಿರಾಕರಿಸಿದರು. ಹೀಗೆ ಸಂಗ್ರಹಿಸಿದ ಓಲೆಗರಿಗಳನ್ನು ಅಚ್ಚಿಗಾಗಿ ಪ್ರತಿಮಾಡಿ, ಪಾಠಾಂತರಗಳನ್ನು ಗುರುತಿಸಿ, ತಪ್ಪು ಪಾಠಗಳನ್ನು ತಿದ್ದಿ, ಶುದ್ಧಪಾಠಗಳನ್ನು ಊಹಿಸಿ, ಅರ್ಥನಿರ್ಣಯ ಮಾಡಿ, ಟಿಪ್ಪಣಿಗಳನ್ನು ಕವಿಚರಿತ್ರೆಯನ್ನು ಬರೆದು ಶ್ರೇಷ್ಠ ಹಳಗನ್ನಡ ಕಾವ್ಯಗಳಾದ ಗದಾಯುದ್ಧ, ಮಲ್ಲಿನಾಥ ಪುರಾಣ, ಲೀಲಾವತಿ ಪ್ರಬಂಧ, ಕರ್ನಾಟಕ ಪಂಚತಂತ್ರ, ಜಯನೃಪ ಕಾವ್ಯ ಮೊದಲಾದವುಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ[೧೧] ಅವುಗಳು ಈ ಕೆಳಗಿನಂತಿವೆ.

---

[10] ಹಳಗನ್ನಡ ಕಾವ್ಯನಿಧಿ ಪುಣ್ಯಪುರುಷ ಮಂಡಯಂ ಆಜಿ ರಾಮಾನುಜ ಅಯ್ಯಂಗಾರ್ .ಹಸ್ತಪ್ರತಿ, ಆಕಾಶವಾಣಿಯಲ್ಲಿ ಪ್ರಸಾರವಾದ ಪ್ರೋ. ಜಿ. ಅಶ್ವತ್ಥ್ ನಾರಾಯಣ ರವರ ಕಾರ್ಯಕ್ರಮ

[11] ಮಣಿಹ, ಗ್ರಂಥ ಸಂಪಾಥನೆಗೆ ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಅವರ ಕೊಡುಗೆ, ಎಂ. ಎ. ಸಿಂಗಮ್ಮ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ(ರಿ), ಬೆಂಗಳೂರು, ೧೯೮೨, ಪುಟ- ೨೬೭-೨೭೪

ಚಂಪೂಗ್ರಂಥಗಳು

೧. ಮಹಾಕವಿ ರನ್ನನ ಗದಾಯುದ್ಧ, ಕಾವ್ಯ ಮಂಜರಿ, ೧೮೯೫, ವೆಸ್ಲಿಯನ್ ಮಿಷನ್, ಮೈಸೂರು, ಒ, ದ್ವಿ. ೧೯೨೫, ತೃ. ೧೯೨೬

೨. ಅಭಿನವ ಪಂಪ ಅಥವಾ ನಾಗಚಂದ್ರನ ಮಲ್ಲಿನಾಥಪುರಾಣ – ಕರ್ನಾಟಕ ಕಾವ್ಯ ಮಂಜರಿ, –೧೮೯೫, ಸದ್ವಿದ್ಯಾ ಮುದ್ರಣ ಶಾಲೆ, ಮೈಸೂರು.

೩. ದುರ್ಗಸಿಂಹನ ಪಂಚತಂತ್ರ (ಸಟಿಪ್ಪಣಂ), ಕಾವ್ಯಮಂಜರಿ

೪. ಅಭಿನವ ವಾದಿವಿದ್ಯಾನಂದನ ಕಾವ್ಯಸಾರಂ – ಕಾವ್ಯ ಮಂಜರಿ, ೧೮೯೮, ಜಿಟಿಎ ಮುದ್ರಣಶಾಲೆ, ಮೈಸೂರು.

೫. ತಿರುಮಲೆಯಾರ್ಯನ ಚಿಕದೇವರಾಜ ವಿಜಯಂ – ಕಾವ್ಯ ಮಂಜರಿ, ೧೮೯೬, ಜಿಟಿಎ ಮುದ್ರಣಶಾಲೆ, ಮೈಸೂರು.

೬. ಗೋಪಾಲ ಪ್ರಸಾದಿಯ ಚಿಕದೇವೇಂದ್ರ ವಂಶಾವಳಿ. – ಕಾವ್ಯ ಮಂಜರಿ, ೧೯೦೧, ಸ್ಟಾರ್ ಪ್ರೆಸ್ , ಮೈಸೂರು

ಷಟ್ಪದೀ ಗ್ರಂಥಗಳು

೧. ಮಹಾಲಕ್ಷ್ಮಿಯ ಶ್ರೀರಾಮ ಪಟ್ಟಾಭಿಷೇಕಂ (ವಾರ್ಧಕ)– ಕಾವ್ಯಮಂಜರಿ. ೧೮೯೭.

ಗದ್ಯ ಗ್ರಂಥಗಳು

೧. ಅದ್ಭುತರಾಮಾಯಣಂ (ಸಟಿಪ್ಪಣಂ) – ಕಾವ್ಯಮಂಜರಿ. ೧೮೯೬. ಜಿ ಟಿ ಎ ಮುದ್ರಣಶಾಲೆ. ಮೈಸೂರು

ಶತಕಗಳು

೧. ಸುಭಾಷಿತ ಮುಕ್ತಕಶತಕಂ (ಸಂಕಲಿತ) – ಕಾವ್ಯ ಮಂಜರಿ ೧೮೯೮. ಸ್ಟಾರ ಪ್ಲಸ್ ಮೈಸೂರು

೨. ರತ್ನಾಕರ ಕವಿಯ ಅಪರಾಜಿತೇಶ್ವರ ಶತಕ – ಕಾವ್ಯ ಮ೧ಜರಿ ೧೮೯೩ ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

ರಸಗ್ರಂಥ

೧. ಕವಿಕಾಮನ ಶೃಂಗಾರರತ್ನಾಕರ – ಕಾವ್ಯ ಮಂಜರಿ ೧೮೯೪. ಸದ್ವಿದ್ಯಾಮಂದಿರ ಮುದ್ರಣಶಾಲೆ. ಮೈಸೂರು

ನಿಘಂಟುಗಳು

೧. ಕರ್ಣಾಟಕ ನಿಘಂಟು –ಕಾವ್ಯ ಮಂಜರಿ ೧೮೯೩. ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

೨. ಚತುರಾಸ್ಯ ನಿಘಂಟು –ಕಾವ್ಯ ಮಂಜರಿ ೧೮೯೩. ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

೩. ಶಬ್ದಸಾರ ನಿಘಂಟು (ಗದ್ಯ) – ಕಾವ್ಯ ಮಂಜರಿ ೧೮೯೭, ಜಿಟಿಎ ಮುದ್ರಣಶಾಲೆ, ಮೈಸೂರು.

೪. ಕರ್ಣಾಟಕ ಸಂಜೀವನವೆಂಬ ಚಟಿಕುಳ ನಿಘಂಟು – ಕಾವ್ಯ ಮಂಜರಿ, ೧೮೭೯, ಸ್ಟಾರ ಪ್ಲಸ್ ಮೈಸೂರು

ಸಾಂಗತ್ಯದ ಹಾಡು

೧. ಸಂಚಿಹೊನ್ನಮ್ಮನ ಹದಿಬದೆಯ ಧರ್ಮ, – ಕಾವ್ಯ ಮಂಜರಿ, ೧೮೯೩, ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು, ೨ (ದ್ವಿ) ೧೯೩೫ ಜಿ ಟಿ ಎ ಮುದ್ರಣಶಾಲೆ, ಮೈಸೂರು.

೨. ಕೃಷ್ಣಗೋಪೀವಿಲಾಸ ಅಥವಾ ಕೃಷ್ಣಬಾಲಲೀಲೆ – ಕಾವ್ಯಮಂಜರಿ, ೧೮೯೪ ೧೮೯೪, ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

ಇನ್ನು ಅನೇಕ ಗ್ರಂಥಗಳು ಇದರಲ್ಲಿ ಪ್ರಕಟವಾಗಿರುವುದಕ್ಕೆ ಕೆಲವು ಆಧಾರಗಳು ದೊರೆಯುತ್ತವೆ.

ಇವರ ಮಹತ್ವವನ್ನು ಕಂಡು ಆಗಿನ ಶಿಕ್ಷಣಾಧಿಕಾರಿಗಳು ಕನ್ನಡ ಅಭಿವೃದ್ಧಿಯಲ್ಲಿ ಆಸಕ್ತರೂ ಆದ ಎಚ್.ಜೆ. ಭಾಭಾ ಅವರು ಕನ್ನಡ ಭಾಷೆಯ ಬಗ್ಗೆ ಅಭಿಮಾನವುಳ್ಳಂತ ಸಾಹಿತ್ಯಾಭಿರುಚಿಯ ಪಂಡಿತ ಪ್ರೇಮಿಯೂ ಆಗಿದ್ದ ಇವರು ಸಹಾಯಧನವನ್ನು ಶಿಫಾರಸ್ಸು ಮಾಡಿ ಸರ್ಕರವು ಈ ಪತ್ರಿಕೆಯ ಚಂದಾದಾರರಾಗುವಂತೆ ಮಾಡಿ. ಶಾಲಾ ಕಾಲೇಜುಗಳ ಪುಸ್ತಕ ಭಂಡಾರಗಳಿಗೆ ಪತ್ರಿಕೆ ಕೊಳ್ಳುವಂತೆ ಆದೇಶಿಸಿ ಪ್ರೋತ್ಸಾಹಿಸಿದರು. ಹೀಗೆ ಪ್ರಸಿದ್ಧಿಪಡೆದು ಯಶಸ್ಸಿನ ಹಾದಿಯಲ್ಲಿ ಸಾಗುತ್ತಿದ್ದ ಸಂದರ್ಭದಲ್ಲಿ ಇಂತಹ ಸೊಗಸಾದ ಪತ್ರಿಕೆ ಪಾಲುದಾರರಾದ ಕೊಮಾರಸ್ವಾಮಿ ತಿರುಮಲಾಯರ ನಿಧನದಿಂದ ಮತ್ತು ಆಸೂರಿ ಆನಂದಾಳ್ವಾರ್ ಅವರ ಸಂನ್ಯಾಸನ ಸ್ವೀಕರಿಸಿದ್ದರಿಂದ ಪಾಲುದಾರಿಕೆಯಿಲ್ಲದಾಗ ೧೮೯೭ ರಲ್ಲಿ ಪತ್ರಿಕೆ ನಿಂತುಹೋಯಿತು. [೧೨]

ಕಾವ್ಯ ಕಲಾನಿಧಿ

ವಿದ್ವಾಂಸರಿಗೆ, ಸಾಹಿತ್ಯಾಸಕ್ತರಿಗೆ ಉಪಯುಕ್ತವಾದ ಕನ್ನಡದಲ್ಲಿ ಮಹತ್ತಾದ ಕಾವ್ಯ ಗ್ರಂಥಗಳ ಪ್ರಕಟನೆಯ ಕಾವ್ಯಮಂಜರಿಯ ಪತ್ರಿಕೆ ನಿಂತು ಹೋದದ್ದನ್ನು ಕಂಡು, ಪತ್ರಿಕೆಯನ್ನು ಮುಂದುವರೆಸಬೇಕೆಂದು ನಾಡಿನ ಎಲ್ಲ ಕಡೆಗಳಿಂದಲೂ ಬೇಡಿಕೆಗಳು ಬರತೊಡಗಿ, ಕಾವ್ಯಮಂಜರಿ ಪತ್ರಿಕೆಯಲ್ಲಿ ಪ್ರಕಟವಾದ ಗ್ರಂಥಗಳು ಪ್ರತ್ಯೇಕ ಪ್ರಕಟನೆಗಳಾಗಿ ಪ್ರಕಟವಾಗಿ ಮುಂಬೈ, ಮದರಾಸ್, ಕಲ್ಕತ್ತ, ಲಂಡನ್ ಸ್ಕೂಲ್ ಆಫ್ ಓರಿಯಂಟಲ್ ಲಾಂಗ್ವೇಜಸ್ ಮೊದಲಾದ ಕಡೆ ಪಠ್ಯಗ್ರಂಥಗಳಾಗಿ ಗೊತ್ತು ಮಾಡಿದ್ದರಿಂದ ಜನಪ್ರಿಯತೆ ಪಡೆದುಕೊಂಡಿತ್ತು. ಹೀಗಾಗಿ ಕಾವ್ಯಮಂಜರಿ ನಿಂತ ೧ ವರ್ಷ ೩

[12] ಮಣಿಹ, ಗ್ರಂಥ ಸಂಪಾದನೆಗೆ ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಅವರ ಕೊಡುಗೆ. ಎಂ. ಎ. ಸಿಂಗಮ್ಮ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ(ರಿ), ಬೆಂಗಳೂರು, ೧೯೮೨, ಪುಟ – ೨೩೭-೨೩೪

ತಿಂಗಳಷ್ಟೇ ಆಗಿತ್ತು ೧೮೯೯ ರಲ್ಲಿ ಮತ್ತೊಂದು ಹೆಸರಿನಲ್ಲಿ ನರಸಿಂಹಾಚಾರ್ ಸಹಕಾರದಿಂದ "ಕರ್ನಾಟಕ ಕಾವ್ಯ ಕಲಾನಿಧಿ" ಎಂಬ ಹೊಸ ಮಾಸ ಪತ್ರಿಕೆಯನ್ನು ಕಾವ್ಯಮಂಜರಿ ಮಾದರಿಯಲ್ಲಿಯೇ ಹೊರತಂದರು.

ಈ ಪತ್ರಿಕೆಯಲ್ಲಿ ಹಳಗನ್ನಡ ಕೃತಿಗಳ ಜೊತೆಗೆ ಹೊಸಗನ್ನಡ ಕೃತಿಗಳನ್ನು ಪ್ರಕಟಿಸುತ್ತಿದ್ದರು. ಇದು ಅಂದಿನ ಮೈಸೂರಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ತಾತನವರಾದ ಮುಮ್ಮಡಿ ಕೃಷ್ಣರಾಜ ಒಡೆಯರ ೧೩ ಗ್ರಂಥಗಳನ್ನು ಪ್ರಕಟಿಸವಂತೆ ೧೯೦೩ ರಲ್ಲಿ ಅನುಮತಿ ನೀಡಿದರು. ಅವುಗಳಲ್ಲಿ ಶಾಕುಂತಳ ನವೀನ ಟೀಕೆ, ವತ್ಸರಾಜಕಥೆಗಳು ಪ್ರಕಟವಾದವು. ಇದೇ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಪ್ರವಾಸ ಕಾಲದಲ್ಲಿ ಮತ್ತು ಸಭೆ ಸಮಾರಂಭಗಳಲ್ಲಿ ಮಾಡಿದ ಆಂಗ್ಲ ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿ ರಾಜಕೃಪೆಗೆ ಪಾತ್ರರಾಗಿ ಸನ್ಮಾನಿಸಲ್ಪಟ್ಟರು. ಈ ರೀತಿಯಾದ ಮೆಚ್ಚುಯೊಂದಿಗೆ ಪತ್ರಿಕೆಯು ಯಶಸ್ವಿಯಾಗಿ ಸಾಗುತ್ತಿದ್ದ ಸಮಯದಲ್ಲಿ ಎಸ್. ಜಿ. ನರಸಿಂಹಾಚಾರ್ ರವರು ೧೯೦೭ ರಲ್ಲಿ ಅಕಾಲಿಕ ಮರಣಕ್ಕೆ ತುತ್ತಾದರು.[೧೩]

ತಮ್ಮ ಆಪ್ತಗೆಳೆಯರನ್ನು ಕಳೆದುಕೊಂಡ ರಾಮಾನುಜಯ್ಯಂಗಾರರಿಗೆ ಅಂತಸ್ಸತ್ವವೇ ಉಡುಗಿದಂತಾಗಿ ಬಲಗೈಯನ್ನು ಕಳೆದುಕೊಂಡವರಂತಾದರಂತೆ. ಅವರ ನೆರವಿಲ್ಲದೆ ಮುಂದೆ ಕಗ್ಗತ್ತಲಲ್ಲಿ ದಾರಿಕಾಣದ ಮೂಕವಿಸ್ಮಿತರಾದರೆಂದು ಹೇಳುತ್ತಾರೆ[೧೪]. ಆದರೂ ಎದೆಗುಂದದೆ ಗೆಳೆಯನ ನೆನಪ್ಪಲ್ಲೇ ಕರ್ನಾಟಕ ಕಾವ್ಯ ಕಲಾನಿಧಿ ಪತ್ರಿಕೆಯನ್ನು ಮುಂದುವರೆಸಿ ಪ್ರಕಟಣೆಯನ್ನು ಕೈಗೊಂಡಾಗ ಅವರ ಸಹಾಯಕ್ಕೆ ಎಸ್.ಜಿ ನರಸಿಂಹಾಚಾರ್ಯರ ಸಹೋದರರಾದ ಗೋಂವಿಂದಾಚಾರ್ ನೆರವಾಗಿ ಈ ಪತ್ರಿಕೆಯಲ್ಲಿ ಪ್ರಕಟಿಸಿದ ಗ್ರಂಥಗಳ ಪಟ್ಟಿ ಈ ಕೆಳಗಿನಂತಿದೆ.

ಚಂಪೂಗ್ರಂಥಗಳು

೧. ಕವಿಕುಂಜರಾಭಿದ ನೇಮಿಚಂದ್ರನ ಲೀಲಾವತೀ ಪ್ರಬಂಧಂ – ಕಾವ್ಯಕಲಾನಿಧಿ. ೧೮೯೮.

೨. ಕವಿಕುಂಜರಾಭಿದ ನೇಮಿಚಂದ್ರನ ಅರ್ಧನೇಮಿ ಪುರಾಣಂ

೩. ಅಗ್ಗಳದೇವನ ಚಂದ್ರ ಪ್ರಭಪುರಾಣಂ – ಅಗ್ಗಳ ಲೀಲಾವತಿ, – ಕಾವ್ಯಕಲಾನಿಧಿ. ೧೯೦೧. ೧೯೦೩ ಸ್ಟಾರ್ ಪ್ರೆಸ್ , ಮೈಸೂರು

---

[13] ಮಣಿಹ. ಗ್ರಂಥ ಸಂಪಾಥನೆಗೆ ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಅವರ ಕೊಡುಗೆ. ಎಂ. ಎ. ಸಿಂಗಮ್ಮ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ(ರಿ). ಬೆಂಗಳೂರು. ೧೯೮೨ ಪುಟ – ೨೩೭–೨೭೪

[14] ಹಳಗನ್ನಡ ಕಾವ್ಯನಿಧಿ ಪುಣ್ಯಪುರುಷ ಮಂಡಯಂ ಆಜಿ ರಾಮಾನುಜ ಅಯ್ಯಂಗಾರ್ .ಹಸ್ತಪ್ರತಿ. ಆಕಾಶವಾಣಿಯಲ್ಲಿ ಪ್ರಸಾರವಾದ ಪ್ರೋ. ಜಿ. ಅಶ್ವತ್ಥ್ ನಾರಾಯಣ ರವರ ಕಾರ್ಯಕ್ರಮ

೪. ಕಮಲಭವನ ಶಾಂತೀಶ್ವರ ಪುರಾಣಂ, – ಕಾವ್ಯ ಕಲಾನಿದಿ, ೧೯೧೨, ಜಿ ಟಿ ಎ ಮುದ್ರಣಶಾಲೆ, ಮೈಸೂರು

೫. ಚೌಂಡರಾಯನ ಅಭಿನವ ದಶಕುಮಾರ ಚರಿತೆ – ಕರ್ನಾಟಕ ಕಾವ್ಯ ಕಲಾನಿಧಿ. ೧೯೦೨. ಸ್ಟಾರ್ ಪ್ರೆಸ್, ಮೈಸೂರು

೬. ಚಿಕುಪಾದ್ಯಯನ ದಿವ್ಯಸೂರಿ ಚರಿತೆ – ಕರ್ನಾಟಕ ಕಾವ್ಯ ಕಲಾನಿಧಿ. ೧೯೧೧. ಜಿ ಟಿ ಎ ಮುದ್ರಣಶಾಲೆ, ಮೈಸೂರು.

ಷಟ್ಪದೀ ಗ್ರಂಥಗಳು

೧. ರಾಘವಾಂಕನ ಹರಿಶ್ಚಂದರ ಕಾವ್ಯ (ವಾರ್ಧಿಕ) – ಕಲಾನಿಧಿ. ೧೯೦೬. ಜಿಟಿಎ ಮುದ್ರಣಶಾಲೆ ಮೈಸೂರು

೨. ಗುರುಲಿಂಗ ವಿಭುವಿನ ಭಿಕ್ಷಾಟನ ಚರಿತೆ ಸವ್ಯಾಖ್ಯಾನ (ವಾರ್ಧಿಕ) –ಕಾವ್ಯ ಕಲಾನಿದಿ. ೧೯೦೮. ಜಿಟಿಎ ಮುದ್ರಣಶಾಲೆ, ಮೈಸೂರು.

೩. ಕುಮಾರ ವಾಲ್ಮೀಕಿಯ ಮೈರಾವಣನ ಕಾಳೆಗ (ಭಾಮಿನಿ) – ಕಾವ್ಯ ಕಲಾನಿಧಿ. ೧೯೧೨, ಶ್ರೀನಿವಾಸ್ ಮುದ್ರಣ ಶಾಲೆ, ಮೈಸೂರು.

೪. ತಿರುಮಲೆವೈದ್ಯನ ಉತ್ತರ ರಾಮಾಯಣ (ಭಾಮಿನಿ) – ಕಾವ್ಯ ಕಲಾನಿಧಿ. ೧೯೧೦. ಜಿಟಿಎ ಮುದ್ರಣಶಾಲೆ, ಮೈಸೂರು.

೫. ಗೋಪಕವಿಯ ನಂದೀ ಮಾಹಾತ್ಮ್ಯಂ (ವಾರ್ಧಿಕ) – ಕಾವ್ಯ ಕಲಾನಿಧಿ. ೧೯೦೭. ಜಿಟಿಎ ಮುದ್ರಣಶಾಲೆ, ಮೈಸೂರು.

೬. ಕೋನಯ್ಯನ ಗಯ ಚರಿತ್ರೆ (ಭಾಮಿನಿ). – ಕಾವ್ಯ ಕಲಾನಿಧಿ. ೧೯೧೫. ಶ್ರೀನಿವಾಸ್ ಮುದ್ರಣ ಶಾಲೆ, ಮೈಸೂರು.

ಗದ್ಯ ಗ್ರಂಥಗಳು

೧. ಚಿಕುಪಾಧ್ಯಾಯನ ವಿಷ್ಣುಪುರಾಣ, ೧, ೪, ೫ ನೆ ಅಂಶಗಳು. – ೧. ಶ್ರೀನಿವಾಸ್ ಮುದ್ರಣ ಶಾಲೆ, ಮೈಸೂರು. ೧೯೧೪. ೪. ೧೯೧೧. ೫. ೧೯೧೦. ಕಾವ್ಯಕಲಾನಿಧಿ

೨. ಬಾಳಲೋಚನನ ಬತ್ತೀಸಪುತ್ತಳಿ ಕಥೆಗಳು, – ಕಾವ್ಯ ಕಲಾನಿಧಿ. ೧೯೦೮. ಜಿ ಟಿ ಎ ಮುದ್ರಣಶಾಲೆ, ಮೈಸೂರು.

೩. ಮುದ್ದಣ್ಣನ ಶ್ರೀರಾಮಾಶ್ವಮೇಧಂ: ಹಳಗನ್ನಡ – ಕಾವ್ಯಕಲಾನಿಧಿ. ೧೯೦೧.

ನಾಟಕ ಗದ್ಯಾನುವಾದಗಳು

೧. ಮುಮ್ಮಡಿ ಕೃಷ್ಣರಾಜ ಒಡೆಯರ ಶಾಕುಂತಳ ನವೀನ ಟೀಕೆ. – ಕಾವ್ಯಕಲಾನಿಧಿ. ೧೯೧೪.

ಶ್ರೀನಿವಾಸ್ ಮುದ್ರಣ ಶಾಲೆ, ಮೈಸೂರು.

೨. ಶ್ರೀವಾಸನ ವರ್ಷ ವರ್ಧಂತೀ ಶತಕ(ವಾರ್ಧಿಕ ಷಟ್ಪದಿ) – ಕಾವ್ಯಕಲಾನಿಧಿ ೧೯೦೧, ಸ್ಟಾರ ಪ್ಲಸ್ ಮೈಸೂರು

ನಿಘಂಟುಗಳು

೧. ಸೂರ್ಯಕವಿಯ ಕವಿಕಂಠ ಹಾರ –ಕಾವ್ಯ ಕಲಾನಿಧಿ, ೧೯೦೨, ಸ್ಟಾರ ಪ್ಲಸ್ ಮೈಸೂರು

ಛಂದಸ್ಸು

೧. ನಂದಿಕವಿಯ ನಂದಿಛಂದಸ್ಸು, ಸವಿವರಣ – ಕಾವ್ಯ ಕಲಾನಿಧಿ, ೧೯೦೯, ಜಿ ಟಿ ಎ ಮುದ್ರಣಶಾಲೆ, ಮೈಸೂರು.

ಕೀರ್ತನೆಗಳು

೧. ಚಿಕದೇವರಾಯನ ಗೀತಗೋಪಾಲ ಪ್ರಬಂಧ – ಕಾವ್ಯಕಲಾನಿಧಿ, ೧೯೦೫, ಜಿ ಟಿ ಎ ಮುದ್ರಣಶಾಲೆ, ಮೈಸೂರು.

ಮತಗ್ರಂಥಗಳು:– ಗದ್ಯ

೧. ವೇದಾಂತವಿವೇಕಸಾರ, ಪ್ರಥಮಭಾಗ (ಅದ್ವೈತ). – ಕಾವ್ಯ ಕಲಾನಿಧಿ, ೧೯೦೮, ಸ್ಟಾರ್ ಪ್ರೆಸ್, ಮೈಸೂರು

ಇನ್ನು ಅನೇಕ ಗ್ರಂಥಗಳನ್ನು ೧೮೯೯ ರಿಂದ ೧೯೧೬ ರವರೆಗೆ ಪತ್ರಿಕೆಯಲ್ಲಿ ಪ್ರಕಟಣೆಯನ್ನು ನಡೆಸಿ ಗ್ರಂಥಗಳನ್ನು ಪ್ರಕಟಿಸಿದ ಹೆಗ್ಗಳಿಕೆಗೆ ಪಾತ್ರವಾಯಿತು ಎಂದಿದ್ದಾರೆ. [೧೫]

ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಬಗ್ಗೆ ಡಿ. ಎಲ್ ನರಸಿಂಹಾಚಾರ್ಯರು ಹೇಳಿದ ಮೆಚ್ಚು ನುಡಿಯನ್ನು ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ತಮ್ಮ ಮಾರ್ಗದಶಕ ಮಹನೀಯರು ಎಂಬ ಪುಸ್ತಕದಲ್ಲಿ ಈ ರೀತಿ ಹೇಳಿದ್ದಾರೆ " ಎಫ್ ಕಿಟಲ್, ಬಿ. ಎಲ್ ರೈಸ್ ಅವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಹಿಡಿದು ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಮುನ್ನಡೆದ ಈ ಧುರೀಣರು ಪ್ರಾಚೀನ ಕನ್ನಡ ಸಾಹಿತ್ಯದ ಸಂರಕ್ಷಣೆ ಪ್ರಕಟಣೆಗಳ ಸಲುವಾಗಿ ಮಾಡಿರುವ ಕೆಲಸ ಅನನ್ಯವಾದುದ್ದು, ಅದ್ಭುತವಾದದು. ಕನ್ನಡ ಗ್ರಂಥಸಂಪಾದನಾ ಚರಿತ್ರೆಯಲ್ಲಿ ಮಾಸದ ಪ್ರಕಾಶದಿಂದ ತೊಳಗುತ್ತಿರುವ ಎರಡು ಪ್ರಥಮ ವರ್ಗದ ತಾರೆಗಳು ಎಂದರೆ ಎಸ್.ಜಿ. ನರಸಿಂಹಾಚಾರ್ಯರು ಮತ್ತು ಎಂ.ಎ ರಾಮಾನುಜಯ್ಯಂಗಾರ್ .... ಇಂಗ್ಲೀಷಿಗೆ ಪ್ರಶಸ್ತಿ ಇದ್ದ ಕಾಲದಲ್ಲಿ ಸರ್ಕಾರದ ಪ್ರೋತ್ಸಾಹವಾಗಲಿ, ಸಾರ್ವಜನಿಕರ ಉತ್ಸಾಹವಾಗಲಿ ಸಾಕಷ್ಟಿಲ್ಲದಿದ್ದಾಗ ಈ ಇಬ್ಬರು ಮಹಾವಿದ್ವಾಂಸರು

---

[15] ಹಳಗನ್ನಡ ಕಾವ್ಯನಿಧಿ ಪುಣ್ಯಪುರುಷ ಮಂಡಯಂ ಆಜಿ ರಾಮಾನುಜ ಅಯ್ಯಂಗಾರ್ .ಹಸ್ತಪ್ರತಿ. ಆಕಾಶವಾಣಿಯಲ್ಲಿ ಪ್ರಸಾರವಾದ ಪ್ರೋ. ಜಿ. ಅಶ್ವತ್ಥ್ ನಾರಾಯಣ ರವರ ಕಾರ್ಯಕ್ರಮ.

ಮಾಡಿದ ಕೆಲಸದ ಮಹತ್ವವನ್ನು ಈಚಿನವರಾದ ನಾವು ಮನಗಾಣಬಹುದಾಗಿದೆ. ಇವರ ಕಾವ್ಯ ಲಾಲಸೆಯಲ್ಲಿ, ಭಾಷಾ ಪ್ರೇಮದಲ್ಲಿ ಸ್ವಲ್ಪಭಾಗವನ್ನಾದರೂ ನಾವು ಗಳಿಸಿಕೊಂಡರೆ ಕೃತಾರ್ಥರಾಗಬಹುದು"[16] ಎಂದಿದ್ದಾರೆ.

ಇಂತಹ ಪ್ರವರ್ಧಮಾನವಾದ, ಪ್ರಕಾಶವಾನವಾದ ಪ್ರತ್ರಿಕಾ ಪ್ರಕಟಣಾ ಕಾರ್ಯಾಲಯಕ್ಕೆ ಸುಮಾರು ೧೯೨೦ ರಲ್ಲಿ ಬೆಂಕಿಬಿದ್ದು ಮುದ್ರಿತ ಪುಸ್ತಕಗಳು, ಆಕರ ಗ್ರಂಥಗಳು ಇತರ ಉದಾತ್ತ ಬರಹ ಸಾಮಗ್ರಿಗಳು, ಅಚ್ಚಾದ ಬಿಡಿ ಫಾರಂಗಳು, ಹಸ್ತಪ್ರತಿಗಳು ಬೆಂಕಿಗೆ ಭಸ್ಮವಾಗಿ ಜೀವಮಾನದ ಸಾರಸ್ವತ ಸಂಪತ್ತು ನಾಶವಾಗಿ ಘೋರ ದುರಂತವೆನಿಸಿ ಕನ್ನಡ ಸಾಹಿತ್ಯಕ್ಕೆ ಅಪಾರ ನಷ್ಟ ಸಂಭವಿಸಿ ಪತ್ರಿಕೆ ನಿಂತು ಹೋಯಿತು. ಆದರೆ ರಾಮಾನುಜಯ್ಯಂಗಾರ್ ಪ್ರಕಟನೆ ಕಾರ್ಯವನ್ನು ಮಾತ್ರ ನಿಲ್ಲಿಸದೆ ಮುಂದುವರೆಸಿ ಪತ್ರಿಕೆಯಲ್ಲಿ ಪ್ರಕಟವಾದವುಗಳನ್ನು ಬಿಡಿ ಬಿಡಿಯಾಗಿ ಪುಸ್ತಕಗಳನ್ನಾಗಿ ಹೊರತಂದಿದ್ದಾರೆ.*

ಎಂ.ಎ ರಾಮಾನುಜಯ್ಯಂಗಾರ್ ಗ್ರಂಥಸಂಪಾದನಾ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅಮೂಲ್ಯವಾದ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿರುವುದು ಇಂದಿಗೂ ಸ್ಮರಣೀಯವಾಗಿದೆ. ಅವರು ಓಲೆಗರಿಗಳನ್ನು, ಹಸ್ತಪ್ರತಿಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ಓಲೆಗರಿಗಳನ್ನು ತಮ್ಮಲ್ಲಿಯೇ ಇಟ್ಟುಕೊಂಡವರ ಬಳಿ ಎಷ್ಟೇ ಕೇಳಿಕೊಂಡರು ಕೊಡದಂತವುಗಳಲ್ಲಿ ಇನ್ನು ಉತ್ತಮವಾದ ಮಹತ್ವದ ಕೃತಿಗಳು ಇದ್ದಿರಬಹುದು. ಅವು ಕಾಲ ಗರ್ಭದಲ್ಲಿ ನಾಶವಾಗಿರಬಹುದು ಅವುಗಳನ್ನು ಪ್ರಕಟಿಸಲು ಅವಕಾಶಮಾಡಿ ಕೊಟ್ಟಿದ್ದರೆ ಆ ಕೃತಿಗಳನ್ನು ನೋಡಬಹುದಾಗಿತ್ತು ಹೀಗೆ ಎಷ್ಟೋ ಅಮೂಲ್ಯ ಕೃತಿಗಳು ನಾಶವಾಗಿವೆ. ದೊರೆತಷ್ಟನ್ನಾದರೂ ಕಷ್ಟಪಟ್ಟು ಪ್ರಕಟಪಡಿಸಿ ಗ್ರಂಥಸಂಪಾದನಾ ಕಾರ್ಯದಲ್ಲಿ ಅತ್ಯಮೋಘವಾದ ಸಾಧನೆಯನ್ನು ಮಾಡಿದ ಕೀರ್ತಿ ಎಂ.ಎ ರಾಮಾನುಜಯ್ಯಂಗಾರ್‌ರದ್ದು .

****

---

[16] ಮಾರ್ಗದರ್ಶಕ ಮಹನೀಯರು, ಲೇಖನ-ಎಸ್.ಜಿ. ನರಸಿಂಹಾಚಾರ್ ಮತ್ತು ಎಂ.ಎ.ರಾಮಾನುಜಯ್ಯಂಗಾರ್, ಟಿ.ವಿ. ವೆಂಕಟಾಚಲ ಶಾಸ್ತ್ರಿ, ಪುಟ ೧೫೧-೧೫೫

* ಇಂತಹ ಗ್ರಂಥಗಳ ಅನೇಕ ಪ್ರತಿಗಳು ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಈಗಲೂ ಮಾರಾಟಕ್ಕೆ ಲಭ್ಯವಿದೆ. ರಾಮಾನುಜಯ್ಯಂಗಾರ ಮೊಮ್ಮಗಳು ಎಂ.ಎ. ಸಿಂಗಮ್ಮ ಅವರ ಮೈಸೂರಿನ ಮನೆಯಲ್ಲಿದ್ದಂತಹ ಹಳೆಯ ಗ್ರಂಥಗಳ ಪ್ರತಿಗಳನ್ನು (ಬಹಳ ಶಿಥಿಲವಾಗಿವೆ. ಬೈಂಡ್ ಆಗದೆ ಪ್ರಿಂಟೆಡ್ ಫಾರಂ ರೂಪದಲ್ಲಿ ಇವೆ) ಹಾಳುಮಾಡಲು ಮನಸ್ಸಾಗದೆ ಪ್ರತಿಷ್ಠಾನಕ್ಕೆ ನೀಡಿದ್ದಾರೆಂದೂ ಅವುಗಳ ಮಾರಾಟದಿಂದ ಬಂದ ಹಣವನ್ನು ಕೂಡಿಸಿ ರಾಮಾನುಜಯ್ಯಂಗಾರ್ ದತ್ತಿನಿಧಿ ಸ್ಥಾಪಿಸಲಾಗಿದೆ ಎಂದೂ ಗೌರವ ಕಾರ್ಯದಶಿ ಡಾ|| ನಾ ಗೀತಾಚಾರ್ಯರು ತಿಳಿಸಿದ್ದಾರೆ.

ಅಧ್ಯಾಯ ೩

ಕಾವ್ಯಗ್ರಂಥಗಳ ಸಂಪಾದನೆ

೧೯ನೇ ಶತಮಾನದಲ್ಲಿ ಪ್ರಾಚೀನ ಕಾವ್ಯಗ್ರಂಥಗಳ ಸಂಪಾದನಾ ಕ್ಷೇತ್ರದಲ್ಲಿ ಅಪಾರವಾದ ಗ್ರಂಥಗಳು ಪ್ರಕಟವಾಗಿದೆ. ಅವುಗಳಲ್ಲಿ ಹೆಚ್ಚಾಗಿ ಚಂಪೂ, ಷಟ್ಪದಿ, ಗದ್ಯಕಾವ್ಯ, ಕೀರ್ತನೆ, ಸಾಂಗತ್ಯ ಇನ್ನು ಮುಂತಾದ ಕಾವ್ಯಪ್ರಕಾರಗಳ ಗ್ರಂಥಗಳು ಪ್ರಕಟವಾಗಿವೆ. ಈ ಪ್ರಕಟಣಾ ಕಾರ್ಯವನ್ನು ಮಾಡಿದವರಲ್ಲಿ ಎಂ ಎ ರಾಮಾನುಜಯ್ಯಂಗಾರ್ ರವರು ಪ್ರಮುಖರು. ಕಾವ್ಯಗ್ರಂಥಗಳನ್ನು ಸಂಪಾದಿಸಲು ಸಂಪಾದಕರಾದವರಿಗೆ ಕಾವ್ಯಗಳ ಪರಿಚಯ, ಭಾಷಾ ಪ್ರೌಢಿಮೆ, ಅಲಂಕಾರ, ವ್ಯಾಕರಣಗಳು ಮೂತಾದವುಗಳ ಅಪಾರವಾದ ಪಾಂಡಿತ್ಯ ಬೇಕಾಗುತ್ತದೆ. ಎಂ.ಎ. ರಾಮಾನುಜಯ್ಯಂಗಾರ್ ಅಂತಹ ವಿದ್ವತ್‌ನ್ನು ಪಡೆದಂತವರಾಗಿದ್ದರು ಎಂಬುದಕ್ಕೆ ಇಲ್ಲಿ ಉಲ್ಲೇಖಿಸಿರುವ ಗ್ರಂಥಗಳೇ ಸಾಕ್ಷಿಗಳಾಗಿವೆ ಎನ್ನಬಹುದು.

೧. ಚಂಪೂ ಗ್ರಂಥಗಳು

೧೯ ನೇ ಶತಮಾನದಲ್ಲಿ ಚಂಪೂ ಕೃತಿಗಳೆ ಮೊಟ್ಟ ಮೊದಲ್ಲಿಗೆ ಸಂಪಾದಿತವಾಗಿ ಪ್ರಕಟವಾಗಿರುವುದು. ಕನ್ನಡ ಸಾಹಿತ್ಯದಲ್ಲಿ ಉನ್ನತ ಶ್ರೇಣಿಯಲ್ಲಿರುವುದು ಎಂದರೆ ತಪ್ಪಾಗಲಾರದು. ಈ ನಿಟ್ಟಿನಲ್ಲಿ ಪಂಪನ ಆದಿಪುರಾಣವೇ ಪ್ರಥಮವಾಗಿ ನಿಲ್ಲುತ್ತದೆ. ಅದರಂತೆಯೇ ಎಂ.ಎ. ರಾಮಾನುಜಯ್ಯಂಗಾರ್ ರವರು ಕೂಡ ಅತಿ ಹೆಚ್ಚು ಕೃತಿಗಳನ್ನು ಸಂಪಾದಿಸಿರುವುದು ಈ ವಿಭಾಗದಲ್ಲಿಯೇ. ಇದರಲ್ಲಿ ಅಭಿನವ ಪಂಪಾಭಿಧನಾಗಚಂದ್ರ ವಿರಚಿತ 'ಮಲ್ಲಿನಾಥಪುರಾಣಂ', ಚಿಕುಪದ್ಯಾಯನ 'ದಿವ್ಯಸೂರಿಚರಿತೆ', ಚೌಂಡರಾಜ ವಿರಚಿತ 'ಅಭಿನವದಶಕುಮಾರಚರಿತೆ', ಕವಿಕುಂಜರಾಭಿದನೇಮಿಚಂದ್ರನ 'ಲೀಲಾವತೀ ಪ್ರಬಂಧಂ', ಅಗ್ಗಳದೇವನ 'ಚಂದ್ರ ಪ್ರಭಪುರಾಣಂ – ಅಗ್ಗಳ ಲೀಲಾವತಿ', ಅಭಿನವ ವಾದಿವಿದ್ಯಾನಂದನ 'ಕಾವ್ಯಸಾರಂ', ಗೋಪಾಲ ಪ್ರಸಾದಿಯ 'ಚಿಕದೇವೇಂದ್ರ ವಂಶಾವಳಿ', ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರ(ಸಟಿಪ್ಪಣಂ)', ಕಮಲಭವನ 'ಶಾಂತೀಶ್ವರ ಪುರಾಣಂ.' ತಿರುಮಲೆಯಾರ್ಯನ 'ಚಿಕದೇವರಾಜ ವಿಜಯಂ', ಮಹಾಕವಿ ರನ್ನನ 'ಗದಾಯುದ್ಧ', ಹರಿಹರದೇವನ 'ಗಿರಿಜಾಕಲ್ಯಾಣಂ', ಮಹಾಕವಿ ರನ್ನನ 'ಅಜಿತತೀರ್ಥಂಕರ ಪುರಾಣ ತಿಲಕಂ', ಆಂಡಯ್ಯನ 'ಕಬ್ಬಿಗರ ಕಾವಂ ಸಟಿಪ್ಪಣಂ', ಕರ್ಣಾಟಕ ಕವಿ ಚಕ್ರವರ್ತಿ 'ಜನ್ನನ ಶಾಸನಗಳ ಸಂಗ್ರಹ' ಮತ್ತು 'ಯಶೋಧರ ಚರಿತೆ ಸಟಿಪ್ಪಣಂ'. ಮುಂತಾದ ೧೭ಚಂಪೂ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ಈ ಗ್ರಂಥಗಳಲ್ಲಿ ಸಾಮಾನ್ಯವಾಗಿ ಒಳಪುಟಗಳಲ್ಲಿ ಪೀಠಿಕೆ, ಉಪೋದ್ಘಾತ, ಅವತಾರಿಕೆ, ಮುನ್ನುಡಿಗಳು ಇದ್ದು ಅವುಗಳಲ್ಲಿ ಕವಿಯ ಕಾಲ, ಕೃತಿ, ಸ್ಥಳ, ಗೊತ್ತಿದ್ದರೆ ಗುರು ಪಂಪರೆಯ ಬಗೆ ತಿಳಿಸಲಾಗಿದೆ. ಕೆಲವು ಗ್ರಂಥಗಳಲ್ಲಿ ಈ ವಿಚಾರಗಳು ದೀರ್ಘವಾಗಿದ್ದು ಕೆಲವು ಗಂಥಗಳಲ್ಲಿ ಕಾಲು ಪುಟದಷ್ಟೆ ಇರುವುದು ಗಮನಾರ್ಹವಾಗಿದೆ. ನನಗೆ ದೊರೆತ ಇನ್ನು ಕೆಲವು ಗ್ರಂಥಗಳು ನೇರವಾದ ಕಥಾಭಾಗದಿಂದ ಮುದ್ರಿತವಾಗಿದ್ದು ಅವುಗಳಲ್ಲಿ ಯಾವುದೇ ಗ್ರಂಥದ ಬಗೆಯಾಗಲೀ, ಕವಿಯ ಬಗೆಯಾಗಲ್ಲೀ ಮಾಹಿತಿ ದೊರೆಯುವುದಿಲ್ಲ.

ಇವರು ಸಂಪಾದಿಸಿದ ಕೆಲವು ಗ್ರಂಥಗಳಲ್ಲಿ ಶೋಧನ ಪತ್ರಗಳನ್ನು ನೀಡಿರುವುದು ಗರ್ಮನಾರ್ಹ. ಅವುಗಳಲ್ಲಿ ಪುಟಸಂಖ್ಯೆ, ಪಙ್ತೆ ಸಂಖ್ಯೆ, ಅಶುದ್ಧ, ಶುದ್ಧ ಎಂದು ಪಟ್ಟಿ ಮಾಡಿದ್ದಾರೆ. ಹಾಗೆಯೇ ಟೀಕೆ ಟಿಪ್ಪಣಿಗಳು ಈ ಗ್ರಂಥಗಳಲ್ಲಿ ಕಂಡುಬರುತ್ತದೆ.

ಚಂಪೂ ಗ್ರಂಥಗಳನ್ನು ಮುದ್ರಿಸಲು ದೊರೆತ ಪ್ರತಿಗಳ ಬಗೆಗೆ ಮಾಹಿತಿಯನ್ನು ನೀಡಿದ್ದು, ಅವುಗಳು ಎಲ್ಲಿಂದ ದೊರೆತವು ಯಾರ ಕೃಪೆಯಿಂದ ಕಳುಹಿಸಿಕೊಟ್ಟರು ಎಂಬುದನ್ನು ಹೇಳಿದ್ದಾರೆ.

ಉದಾಹರಣೆ

೧. **ಚಿಕುಪದ್ಯಾಯನ ದಿವ್ಯಸೂರಿ ಚರಿತೆ** ಮೈಸೂರಿನ ಗೌರನಮೆಂಟ್ ಓರಿಯಂಟಲ್ ಕೋಶಾಗಾರದಿಂದ ಪ್ರತಿಯನ್ನು ಕ್ಯೂರೇಟರ್ ಆದ 'ಮಹದೇವ ಶಾಸ್ತ್ರಿಗಳು ಕಳುಹಿಸಿಕೊಟ್ಟದ್ದು.

೨. **"ದುರ್ಗಸಿಂಹನ ಕರ್ಣಾಟಕ ಪಂಚತಂತ್ರ" (ಸಟಿಪ್ಪಣಂ)"** 'ಗ'ಪ್ರತಿ ಮೈಸೂರು ಶ್ರೀಮಾಹಾರಾಜರ ಅರವನೆಯ ಸ್ವರಸ್ವತೀ ಭಂಡಾರದಲ್ಲಿದದ್ದು.

ಹಾಗೆ ಸಂಪಾದಿಸಿದಂತ ಪ್ರತಿಗಳನ್ನು ಶೋಧಿಸಿ, ಪರಿಷ್ಕರಿಸಿ, ಸಾಧ್ಯವಾದ ಮಟ್ಟಿಗೆ ಮೂಲ ಪಾಠಕ್ಕೆ ಸರಿ ಹೊಂದುವಂತೆ ತಿದ್ದಿ ಅವುಗಳಿಗೆ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ನೀಡಿದ್ದಾರೆ. ಪ್ರತಿಗಳಲ್ಲಿ ಕಂಡುಬರುವ ವ್ಯತ್ಯಾಸವನ್ನು, ಒಂದು ಪ್ರತಿಯಲ್ಲಿ ದೊರೆತ ಅಧಿಕಪಾಠವನ್ನು ಗುರುತಿಸಿ ಗ್ರಂಥದ ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

ಅದೇ ರೀತಿ ಅಡಿಟಿಪ್ಪಣಿಯಲ್ಲಿ ಪಾಠಾಂತರಗಳಲ್ಲದೆ ವಿಶೇಷವಾದ ವಿಶಿಷ್ಟ ಪದಗಳಿಗೆ ಅರ್ಥಗಳನ್ನು ತದ್ಭವ ರೂಪಗಳನ್ನು, ವ್ಯಾಕರಣ ವಿಚಾರಗಳನ್ನು ಮತ್ತು ವಿಶಿಷ್ಟ ಪದಗಳನ್ನು ಪದವಿಭಾಗ ಮಾಡಿ ಅವುಗಳಿಗೆ ಅರ್ಥಗಳನ್ನು ನೀಡಿದ್ದಾರೆ. ಕೆಲವು ಪದ ಪ್ರಯೋಗಗಳನ್ನು ಕೊಟ್ಟು ಆ ಪದಗಳಿಗೆ ಅರ್ಥಗಳನ್ನು ಕೊಡುವುದರ ಜೊತೆಗೆ ಬೇರೆ ನಿಘಂಟಿನ ಉಲ್ಲೇಖ ಮಾಡುತ್ತಾರೆ. ಈ ಕೃತಿಗಳಲ್ಲಿ ಬಳಕೆಯಾಗಿರುವ ವಿಶಿಷ್ಟಪದಗಳ ಉಲ್ಲೇಖವು ಬೇರೆ ಕೃತಿಯಲ್ಲಿ ಬಳಸಿರುವುದನ್ನು ಗುರುತಿಸಿ ಉಲ್ಲೇಖಿಸಿದ್ದಾರೆ.

ಉದಾ: ಏಳದಿಕೆ= ತಿರಸ್ಕಾರ, ನಾಗವರ್ಮನ ಶಬ್ದ ಸ್ಮೃತಿಯ ೧೮ ನೇ ಪುಟದಲ್ಲಿ ನೀಡಿದ್ದು, ಮಲ್ಲಿನಾಥ ಪುರಾಣದ ಪುಟ ೪೨ ರಲ್ಲಿ "ಉಕ್ಕಿಟಮೆಂದೆನಲ್ಕೆ=ಬಱದೆಂಬುದು – ಕರ್ಣಾಟಕ ನಿಘಂಟು ಎಂದು ಉಲ್ಲೇಖಿಸಿ ೫೦ ಎಂಬ ಸಂಕೇತವನ್ನು ನೀಡಿ ಸ್ಥಾನನಿರ್ದೇಶನವನ್ನು ಹೇಳಿದ್ದಾರೆ. ಶಕಟರೇಫವನ್ನು ಉಳಿಸಿಕೊಂಡಿದ್ದಾರೆ.

೮. ಚಂಪೂ ಗ್ರಂಥಗಳಲ್ಲಿನ ವಿಶೇಷ ವಿಚಾರ ಮತ್ತು ವಿಮರ್ಶೆ

೧. **"ಅಭಿನವ ಪಂಪಾಭಿಧ ನಾಗಚಂದ್ರ ವಿರಚಿತ ಮಲ್ಲಿನಾಥಪುರಾಣಂ"** ಈ ಕೃತಿಯು ಎಸ್. ಜಿ. ನರಸಿಂಹಾಚಾರ್ ಮತ್ತು ಆರ್.ನರಸಿಂಹಾಚಾರ್ ಎಂ.ಎ ಇವರುಗಳಿಂದ ವಿರಚಿತವಾದ **"ಕವಿಕಥಾಮೃತ ಶಬ್ಧ"** ಎಂಬ ಗ್ರಂಥದಿಂದ ಸಂಗ್ರಹಿಸಲ್ಪಟ್ಟಿದೆ ಎಂದು ತಿಳಿಸಿದ್ದಾರೆ. ಅದರಲ್ಲಿ ಶಕಾಬ್ದ ೧೬೩೬ ಎಂದು ಬರೆದಿರುವುದಾಗಿ ತಿಳಿಸಿದ್ದಾರೆ ಮತ್ತು ಇದನ್ನು ಅಂದಿನ ಲೈಬ್ರೆರಿಯ ಕ್ಯೂರೇಟರ ಆದ 'ಮಹದೇವ ಶಾಸ್ತ್ರಿಗಳು' ಕಳುಹಿಸಿದರೆಂದು ಸ್ಮರಿಸಿದ್ದಾರೆ.

ಈ ಕೃತಿಯು ಶ್ರವಣಬೆಳಗೊಳದ ಶ್ರೀ ಯವರ ಮಠದ 'ಕ' ಎಂಬ ಬಹಳ ಪುರಾತನವಾದ ಪ್ರತಿ. ಮತ್ತೊಂದು ಮೈಸೂರು ಸರ್ಕಾರದ ಓರಿಯಂಟಲ್ ಲೈಬ್ರೆರಿಯ 'ಗ' ಪ್ರತಿಯ ಆಧಾರದ ಮೇಲೆ ಮುದ್ರಿತವಾಗಿದೆ. ಈ ಕ ಮತ್ತು ಗ ಎಂಬ ಸಾಂಕೇತಿಕ ಪ್ರತಿಯನ್ನು ಬಳಸಿಕೊಂಡು ಅದರ ಉಲ್ಲೇಖಿತ ಪ್ರತಿಗಳಲ್ಲಿ ಇಲ್ಲದ ಪಾಠಗಳನ್ನು ಕೆಲವೆಡೆ ಬಳಸಿರುವುದು ಕಂಡುಬರುತ್ತದೆ.

ಉದಾ; ೧. ಪುಟ ೫೨ ರ ಅಡಿ ಟಿಪ್ಪಣಿಯಲ್ಲಿ 'ವಡೆಯಾದ' ಪಾಠದಲ್ಲಿ 'ಗೆಡೆಯಾದ' ಎಂದೂ. ಪುಟ ೬೪ರ ಅಡಿ ಟಿಪ್ಪಣಿಯಲ್ಲಿ 'ಎಡವಱಯಿದ' ಕ। ಗ। ಪ್ರತಿಗಳಲ್ಲಿ 'ಎಡೆವಱಯಿದೆ' ಎಂದಿದೆ. ಕ।ಗ। ಪ್ರತಿಯಲ್ಲಿ ಇಲ್ಲದ ಪಾಠಗಳನ್ನು ಇವರು ಅನೇಕ ಕಡೆಗಳಲ್ಲಿ ಬಳಸಿರುವುದನ್ನು ನೋಡಿದರೆ ಬೇರೆಯಾವುದರ ಪಾಠವೋ ಅಥವಾ ಊಹಾಪಠವೋ ಎಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ.

೨. ಪುಟ ೧೧೪ ರ ಪಾಠದಲ್ಲಿ ನೆಱ್‌ನಿರ್ಪ ಎಂದಿದ್ದು ಅಡಿಟಿಪ್ಪಣಿಯಲ್ಲಿ ನೆಱ್‌ದಿರ್ದ ಎಂದಿದೆ. ಹಲವು ಕಡೆಗಳಲ್ಲಿ ಅರ್ಥ ತಿಳಿಯದ ಪಾಠಗಳಿಗೆ ಅದರ ಪಕ್ಕದಲ್ಲಿಯೇ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಿರುವುದು ಗಮನಾರ್ಹವಾಗಿದೆ.

ಎರಡು ಆಶ್ವಾಸಗಳು ಅಚ್ಚಾದ ಮೇಲೆ ದೊರೆತದುದರಿಂದ ಅದರ ಪಾಠಾಂತರಗಳನ್ನು ಗಂಥದ ಆರಂಭದಲ್ಲೇ ಪುಟ ಸಂಖ್ಯೆ ಗ್ರಂಥ ಸಂಖ್ಯೆಗಳೊಂದಿಗೆ ಆಯ ಪಠ್ಯದ ಪಾಠಾಂತರಗಳನ್ನು ಕೊಟ್ಟಿದ್ದಾರೆ. ಅಷ್ಟೆ ಅಲ್ಲದೆ.

ಉದಾ: ೧. ಪುಟ ೧೩೭ರ ಅಡಿಟಿಪ್ಪಣಿಯಲ್ಲಿ ಅಂಚೆವಾಳತಿ= ಅಂಚೆ+ಬಾಳತಿ(ಬಾಣಂತಿ). ಬಳ್ಳಿವಂದರ್=ಬಳ್ಳಿ+ಪಂದರ್(ಚಪ್ಪರ) ಇಂತಹ ಪದಗಳು ಪಂಪರಾಮಾಯಣದಲ್ಲಿ ಬಳಕೆಯಾಗಿರುವುದನ್ನೂ ಸೂಚಿಸಿದ್ದಾರೆ.

ಈ **'ಮಲ್ಲಿನಾಥ ಪುರಾಣ'ವನ್ನು ಬಿ. ಓ. ಹೆಂಡಿ** ೧೯೭೪ ರಲ್ಲಿ ಇವರು ಧಾರವಾಡ ಕನ್ನಡ ಅಧ್ಯಯನ ಪೀಠದಿಂದ ಪ್ರಕಟಿಸಿದ್ದು ಇವರು ಎರಡು ತಾಳೆಗರಿ ಒಂದು ಮುದ್ರಿತ ಪ್ರತಿ ಮತ್ತು ಒಂದು ಕಾಗದ ಪ್ರತಿಯಿಂದ ಮುದ್ರಿಸಿದ್ದಾರೆ. ಪಾಠನಿರ್ಣಯ ಮತ್ತು ಪಾಠಾಂತರಗಳನ್ನು ಒಳಕೊಂಡಿದೆ ಆದರೆ ಅದನ್ನು ಸಮರ್ಪಕವಾಗಿ ನೀಡಿಲ್ಲ. ಪದ್ಯಗಳಲ್ಲಿ ಅಲ್ಲಲ್ಲಿ ಖಾಲಿ ಜಾಗಗಳನ್ನು ಬಿಟ್ಟಿರುವುದು ಓದುಗರು ಪ್ರಶ್ನೆ ಕೇಳುವಂತೆ ಮಾಡಿದ್ದಾರೆ. ಹೆಚ್ಚು ತಪ್ಪುಗಳಿದ್ದು ಪಾಠಾಂತರಗಳನ್ನು ಕೆಲವು ಕಡೆ ಒಂದೇ ಪುಟದಲ್ಲಿ ಸುಮಾರು ೩೫ ಪಾಠಾಂತರಗಳನ್ನು ನೀಡಿರುವುದು ಗಮನಾರ್ಹ.[೧೭]

ಇಲ್ಲಿ ಬಿ. ಓ. ಹೆಂಡಿ, ಎಂ.ಎಂ. ಮುದ್ರಿತ ಪ್ರತಿ ಎಂದು ಹೇಳಿರುವುದನ್ನು ಗಮನಿಸಿದರೆ ಅದು ರಾಮಾನುಜಯ್ಯಂಗಾರ್ ಸಂಪಾದಿಸಿದ ಪ್ರತಿಯೇ ಇರಬಹುದು ಎಂದು ಊಹಿಸಲಾಗಿದೆ. ಇವರು ಸಂಪಾದಿಸಿ ಪ್ರಕಟಿಸಿರುವುದರಲ್ಲಿ ಕೆಲವೊಂದು ಉಪಯುಕ್ತ ಮಾಹಿತಿಯನ್ನು ನೀಡಲು ಪ್ರಯತ್ನಿಸಿರುವುದು ಉತ್ತಮವಾಗಿದೆ.

೨. **" ಚಿಕುಪದ್ಯಾಯನ ದಿವ್ಯಸೂರಿ ಚರಿತೆ"** ಶ್ರೀಮತ್ಕರ್ಣಾಟಕ ಮಂಡಲಾಧೀಶ್ವರ ಶ್ರೀ ಚಿಕದೇವರಾಜ ಮಹಾರಾಜರ ಕಾಲದಲ್ಲಿ ಆಸ್ಥಾನ ಕವಿಯಾಗಿದ್ದ **'ಚಿಕುಪದ್ಯಾಯ'**ನಿಂದ ರಚಿತವಾಗಿದೆ ಎಂದು ಹೇಳಿದ್ದಾರೆ. ಕವಿ ಹೆಸರಿನ ಬಗ್ಗೆ ಗೊಂದಲವಿದ್ದು ಈ ಕೃತಿಯ ಪ್ರಥಮಾಶ್ವಾಸದ ೧೯ನೇ ಪದ್ಯದಿಂದ ಈ ಕವಿಯು ಯಜುಶ್ಯಾಖೆಯ ಪುರುಕುತ್ಸ ಗೋತ್ರದ ಶ್ರೀವೈಷ್ಣವ ಬ್ರಾಹ್ಮಣನಾದ ರಂಗಾಚಾರನೆಂಬುವನಿಗೆ ಪುತ್ರನಾಗಿಯೂ ಚಿಕದೇವ ಮಹಾರಾಜರ ಸಚಿವರಲ್ಲಿ ಪ್ರಧಾನ ಸಚಿವನಾಗಿದ್ದನೆಂದು ತಿಳಿದುಬರುತ್ತದೆ ಎಂದು ಉಲ್ಲೇಖಿಸಿದ್ದಾರೆ.

ಚಿಕದೇವ ಮಹಾರಾಜರು ಕ್ರಿ.ಶ. ೧೬೭೨ ರಿಂದ ೧೭೦೪ ರವರೆಗೆ ಆಳ್ವಿಕೆ ನಡೆಸುತ್ತಿದ್ದ ಆಧಾರದ ಮೇಲೆ ಈ ಕವಿಯು ೧೭ ನೆಯ ಶತಮಾನದಲ್ಲಿ ಇದ್ದವನು ಎಂದು ಹೇಳಿದ್ದಾರೆ. ಈ ಕವಿಯು ಸಂಸ್ಕೃತದಲ್ಲಿಯೂ ಮತ್ತು ಕನ್ನಡದಲ್ಲಿಯೂ ವಿಶೇಷ ಪಾಂಡಿತ್ಯವನ್ನು ಹೋಂದಿದನೆಂದು ಈತನ ಗ್ರಂಥಗಳಿಂದ ತಿಳಿಯುತ್ತದೆ.

ಈ ಕೃತಿಯು ೧೪ ಆಶ್ವಾಸಗಳುಳ್ಳ ಚಂಪೂ ಗ್ರಂಥವೆಂದು ಅದರ ವಿಷಯ ಸೂಚಿಯಿಂದ ತಿಳಿದುಬರುತ್ತದೆ. ಚಂಪೂ ಗ್ರಂಥಗಳಲ್ಲಿ ಇದು ಶ್ರೇಷ್ಠವಾದುದೆಂದು ಹೇಳಲಾಗಿದೆ. ಚಿಕದೇವ ಮಹಾರಾಜರ ವಂಶವನ್ನು ವರ್ಣಿಸಿ ಗ್ರಂಥಾರಂಭವನ್ನು ಮಾಡಿದ್ದು, 'ತಮಿಳಿನ ೧೨ ಜನ ಆಳ್ವರುಗಳ' ವಿಚಾರವು ವಿಶಿಷ್ಟವಾಗಿದೆ. ವೈಷ್ಣವ ಸಮುಚಿತ ವಿದ್ಯ ಪ್ರಬಂಧಗಳನ್ನು ರಚಿಸಿದ 'ದಿವ್ಯ ಸೂರಿಗಳ'ಚರಿತೆಯನ್ನು ಈ ಕೃತಿಯಲ್ಲಿ ವಿಸ್ತಾರವಾಗಿ ಹೇಳಲಾಗಿದೆ.

---

[17] 'ಮಲ್ಲಿನಾಥ ಪುರಾಣ', ಬಿ. ಓ. ಹೆಂಡಿ, ಕನ್ನಡ ಅಧ್ಯಯನ ಪೀಠ, ಧಾರವಾಡ. ೧೯೭೪

ಇದನ್ನು ೨ ಪ್ರತಿಗಳ ಸಹಾಯದಿಂದ ಮುದ್ರಿಸಿದ್ದಾರೆ. ಮೈಸೂರಿನ ಗೌರನಮೆಂಟ್ ಓರಿಯಂಟಲ್ ಕೋಶಾಗಾರದಿಂದ ಪ್ರತಿಯನ್ನು ಕಳುಹಿಸಿಕೊಟ್ಟ ಕ್ಯೂರೇಟರ್ ಆದ 'ಮಹದೇವ ಶಾಸ್ತ್ರಿಗಳಿಗೂ ಮತ್ತು ಗ್ರಂಥವನ್ನು ಶೋಧಿಸಲು ಸಹಾಯ ಮಾಡಿದ 'ಎಸ್. ಜಿ. ಗೋವಿಂದರಾಜರಿಗೂ 'ಕೃತಜ್ಞತೆಯನ್ನು ಸಲ್ಲಿಸುತ್ತಾರೆ.

೩. **"ಚೌಂಡರಾಜ ವಿರಚಿತ ಅಭಿನವ ದಶಕುಮಾರ ಚರಿತೆ"** ಈ ಗ್ರಂಥವು **'ದಂಡಿ'** ಕವಿಯ ಸಂಸ್ಕೃತ ಗದ್ಯ ರೂಪದಿಂದ **"ದಶಕುಮಾರ ಚರಿತ್ರೆ"**ಯ ಕರ್ಣಾಟಕ ಚಂಪೂ ರೂಪವಾದ ಅನುವಾದವನ್ನು ಪ್ರಥಮ ಸಂಪುಟದಲ್ಲಿ ಇದರ ಪೂರ್ವ ಪೀಠಿಕೆಯ ಕಥಾಭಾಗವನ್ನು ಮುದ್ರಿಸಿದ್ದಾರೆ.

ಈ ಗ್ರಂಥವನ್ನು ೨ ಹಸ್ತ ಲಿಖಿತ ಪುಸ್ತಕಗಳ ಆಧಾರದಿಂದ ಮುದ್ರಿಸಿರುವುದಾಗಿ ತಿಳಿಸುತ್ತಾರೆ. ಈ ಎರಡೂ ಪ್ರತಿಗಳು ಮೈಸೂರಿನ ಗೌರ್ವನಮೆಂಟ್ ಓರಿಂಟಲ್ ಲೈಬ್ರೆರಿಯ ಪುಸ್ತಕಗಳು. ಒಂದು ಓಲೆಯ ಪುಸ್ತಕ ಇನ್ನೊಂದು ಕಾಗದ ಪುಸ್ತಕ ಎಂದಿದ್ದು ಕಾಗದದ ಪುಸ್ತಕವು ಬಹಳ ಅಶುದ್ಧವಾದುದು ಆದುದರಿಂದ ಓಲೆಯ ಪುಸ್ತಕದ ಆಧಾರದಿಂದಲೇ ಈ ಗ್ರಂಥವು ಅಚ್ಚಾಯಿತೆಂದು ಹೇಳುತ್ತಾರೆ. ಈ ಪ್ರತಿಯನ್ನು ಕಳುಹಿಸಿಕೊಟ್ಟ ಅಂದಿನ ಕ್ಯೂರೇಟರ್ ಆದ ಮಹದೇವ ಶಾಸ್ತ್ರಿಗಳ ಉಪಕಾರವನ್ನು ಚಿರಸ್ಮರಿಸುತ್ತಾರೆ.

ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ಸಂಖ್ಯೆಗಳನ್ನು ಮತ್ತು ಚಿಹ್ನೆಗಳನ್ನು ಬಳಸಿ ನೀಡಿದ್ದಾರೆ. ಈ ಅಡಿಟಿಪ್ಪಣಿಯ ಆಧಾರದಿಂದ ಇವರಿಗೆ ದೊರೆತ ಪ್ರತಿಗಳಿಗೆ ಕ। ಗ। ಎಂಬ ಸಂಕೇತವನ್ನು ನೀಡಿದ್ದಾರೆ. ದ್ವಿತೀಯ ಸಂಪುಟದ ಕೊನೆಯ ಪುಟದ ಅಡಿಟಿಪಣ್ಣಿಯಲ್ಲಿ "ನಮಗೆ ದೊರೆತ ಪ್ರತಿಗಳಲ್ಲಿಲ್ಲಾ ಇಲ್ಲಿದರ ಮುಂದೆ ಗ್ರಂಥಪಾತ" ಎಂದಿದ್ದಾರೆ.

ಉದಾಹರಣೆಗೆ:

ಪ್ರಥಮ ಸಂಪುಟದ ಪುಟ ೧೩೭ ಪಾಠದಲ್ಲಿ 'ದಸದ್ಬ' ಎಂದಿದ್ದರೆ ಅಡಿ ಟಿಪ್ಪಣಿಯ ಪಾಠಾಂತರದಲ್ಲಿ 'ದವರ್ಬ' ಕ. ಗ ಎಂದಿದೆ. ಅದೇರಿತಿ ಪುಟ ೨೮ ರಲ್ಲಿ 'ಭೂತ' ಎಂದಿದ್ದರೆ ಅಡಿ ಟಿಪ್ಪಣಿಯಲ್ಲಿ 'ಯಾತ' ಕ ಎಂದು ತೋರಿಸಿದ್ದಾರೆ. ಅಡಿ ಟಿಪ್ಪಣಿಯಲ್ಲಿ ವಿಶೇಷವಾಗಿ ಕೆಲವು ಪದ್ಯಗಳನ್ನು ಉಲ್ಲೇಖಿ ಅವುಗಳು ಈ ಗ್ರಂಥ ಕರ್ತನದಲ್ಲ ಎಂದು ಗುರಿತಿಸಿದರ ಉಲ್ಲೇಖ ಕೊಡುತ್ತಾರೆ.

೪. **"ಕವಿಕುಂಜರಾಭಿದ ನೇಮಿಚಂದ್ರನ ಲೀಲಾವತೀ ಪ್ರಬಂಧಂ"** ಈ ಕೃತಿಯು ನೇರವಾಗಿ ಕಥಾಭಾಗದಿಂದ ಪ್ರಾರಂಭವಾಗುವುದರಿಂದ ಇದರ ರಕ್ಷಾಪುಟವು ಇಲ್ಲದ ಕಾರಣ ಹೆಚ್ಚಿನ ವಿಚಾರಗಳೇನೂ ತಿಳಿದುಬರುವುದಿಲ್ಲ. ಇದರಲ್ಲಿ ಆಶ್ವಾಸಗಳಿದ್ದು ಅಡಿ ಟಿಪ್ಪಣಿಯಲ್ಲಿ ಕೊಟ್ಟಿರುವ ಆಧಾರಗಳ ಮೇಲೆ ಇದು ಕ।,ಖ।,ಗ।,ಚ।,ಜ। ಎಂಬ ೫ ಪ್ರತಿಗಳಿಂದ ಮುದ್ರಿತವಾಗಿದೆ ಎಂದು ತಿಳಿದುಬರುತ್ತದೆ.

ಕೆಲವು ಕಡೆ ಎಲ್ಲವು ಬೇರೆ ಬೇರೆ ಪ್ರತಿಗಳ ಪಾಠಾಂತರವೇ ಇದ್ದು ಕೆಲವು ಕಡೆ ಎರಡು ಪ್ರತಿ, ಮೂರು ಪ್ರತಿ, ನಾಲ್ಕು ಪ್ರತಿಗಳಲ್ಲೂ ಒಂದೇ ಇರುವುದನ್ನು ತಿಳಿಸುತ್ತಾರೆ.

ಉದಾಹರಣೆಗೆ

ಎರಡು ಪ್ರತಿಗೆ ಪುಟ ೨೨ ರಲ್ಲಿ 'ವಾಕ್ಯ' ಕ।ಗ। ಪ್ರತಿಯಲ್ಲಿ ಪಾಠದಲ್ಲಿ 'ಕಾವ್ಯ' ಎಂದಿದ್ದರೆ ಪುಟ ೮೭ ರಲ್ಲಿ ನಾಲ್ಕು ಪ್ರತಿಗಳಲ್ಲಿ ಒಂದೇ ಇರುವುದು 'ಪರವಶೆ' ಕ।ಗ।ಚ।ಜ। ಪಾಠದಲ್ಲಿ 'ಪರವರಿ' ಎಂದಿದೆ.

೧೯೩೭ ರಲ್ಲಿ "ಲೀಲಾವತೀ ಪ್ರಬಂಧಂ'ವನ್ನು **ಕೆ. ವೆಂಕಟರಾಮಪ್ಪ ಮತ್ತು ದೇ.ಜವರೇಗೌಡರು** ಸಂಸ್ಕರಿಸಿ ಪ್ರಕಟಿಸಿದ್ದಾರೆ ಇದರಲ್ಲಿ 'ಕಘಚ' ಎಂಬ ಮೂರು ಪ್ರತಿಯನ್ನು ಬಳಸಿಕೊಂಡಿದ್ದು ಎಂ.ಎ. ಆರ್ ರವರು ಬಳಸಿದ ಖ ಗ ಪ್ರತಿಗಳನ್ನೇ ಬಳಸಿರುವುದಾಗಿ ಹೇಳಿದ್ದಾರೆ. ೯೫ ಪುಟಗಳ ದೀರ್ಘ ಪೀಠಿಕೆ ಇದ್ದು ಇದರಲ್ಲಿ ಲೀಲಾವತಿ ಪ್ರಬಂಧಕ್ಕಿಂತ ನೇಮಿಚಂದ್ರನ ಇನ್ನೊಂದು ಕೃತಿಯಾದ ನೇಮಿನಾಥ ಪುರಾಣದ ಬಗೆಗೆ ಹೆಚ್ಚಾಗಿ ಹೇಳಿರುವುದು ಕಂಡುಬರುತ್ತದೆ.

ಈ ಸಂಪಾದಿತ ಗ್ರಂಥದಲ್ಲಿ ಹೊಸ ರೀತಿಯಲ್ಲಿ ಹೇಳಲು ಹೊರಟಿದ್ದಾರೆ. ಇವರು ಹೇಳ ಹೊರಟ ವಿಚಾರಗಳನ್ನು ಮೊದಲೆ ರಾಮಾನುಜಯ್ಯಂಗಾರ್ ರವರು ಹೇಳಿರುವುದನ್ನು ಕಾಣುತ್ತೇವೆ.

೫. "ಅಗ್ಗಳದೇವನ ಚಂದ್ರ ಪ್ರಭಪುರಾಣಂ – ಅಗ್ಗಳ ಲೀಲಾವತಿ". ಈ ಗ್ರಂಥವನ್ನು ಎರಡು ಸಂಪುಟಗಳಲ್ಲಿ ಹೊರತಂದಿದ್ದಾರೆ. ಮೊದಲನೆಯ ಸಂಪುಟವು ೧ ರಿಂದ ೮ ಅಧ್ಯಾಯಗಳನ್ನು ಒಳಗೊಂಡಿದೆ. ಎರಡನೆಯ ಸಂಪುಟವು ೯ ರಿಂದ ೧೬ ಅಧ್ಯಾಯಗಳನ್ನೊಳಗೊಂಡಿದೆ.

ಈ ಸಂಪುಟದಲ್ಲಿ "ಉತ್ತರಾರ್ಧವನ್ನು ಎರಡನೆಯ ಸಂಪುಟವಾಗಿ ಮುದ್ರಿಸುತ್ತೇವೆ. ಆ ಗ್ರಂಥವು ಸಮಗ್ರವಾಗಿ ಮುದ್ರಿತವಾದ ಕೂಡಲೆ ಕವಿಚರಿತ್ರೆಯನ್ನೂ ಗ್ರಂಥ ವಿಚಾರವನ್ನೂ ವಿಸ್ತಾರವಾಗಿ ಬರೆಯುತ್ತೇವೆ" ಎಂದು ಹೇಳಿರುವರಾದರೂ ಕವಿ ಕಾವ್ಯ ಸ್ಥಳಗಳ ಕುರಿತು ಕೆಲವು ವಿಚಾರಗಳನ್ನು ಇಲ್ಲಿಯೇ ಚರ್ಚಿಸಿದ್ದಾರೆ. ಈ ಗ್ರಂಥದ ಕವಿ ಅಗ್ಗಳದೇವ ಇಂಗಳೇಶ್ವರ ಪುರವೆಂಬ ಸ್ಥಳದಲ್ಲಿ ಇದ್ದಂತೆ ತೋರುವ ವಿಚಾರ, ಅವನ ತಂದೆ ಶಾಂತೀಶ ತಾಯಿ ವಾಡಾಂಬಿಕೆ ಹಾಗೂ ಗುರು ಶ್ರುತಿಕೀರ್ತಿದೇವ ಎನ್ನುವ ವಿಚಾರಗಳನ್ನು ಕಾವ್ಯದಲ್ಲಿ ಸಿಕ್ಕಿರುವ ಆಧಾರದ ಮೇಲೆ ಗುರುತಿಸಿದ್ದಾರೆ.

"ಏಕಾದಶ ಸತಮುಂ ಮ
ತ್ತೇಕಾದಶಮಾಗೆ ಶಕನೃಪಾಬ್ದಂಸಾಮ್ಯ॥
ಪ್ರಾಕಟವರ್ಷದ ಚೈತ್ರಸಿ।
ತೈಕಾದಶಿಯಂದು ನೆಗಟ್ಟುದೀಕೃತಿ ರತ್ನಂ॥ ಎಂದು ಹೇಳಿರುವ ಪದ್ಯದ ಆಧಾರದ ಮೇಲೆ ಈ

ಕೃತಿಯನ್ನು ಶಾಲಿವಾಹನ ಶಕೆ ೧೧೧೧ ಎಂದರೆ ಕ್ರಿ.ಶ.೧೧೮೯ ರಲ್ಲಿ ರಚಿಸಿರುವುದಾಗಿ ತಿಳಿಸುತ್ತಾರೆ.

ಇದರ ಎರಡನೆಯ ಸಂಪುಟ **ಕರ್ಣಾಟಕ ಕಾವ್ಯ ಕಲಾನಿಧಿಯ ಕೋಶ** ೧೦ ರಲ್ಲಿ ಪ್ರಕಟಗೊಂಡಿದೆ. ಎಸ್.ಜಿ.ನರಸಿಂಹಾಚಾರ್ ರೊಂದಿಗೆ ಜಂಟಿಯಾಗಿ ಸಂಪಾದಿಸಿದ ಈ ಗ್ರಂಥ ೧೯೦೩ ರಲ್ಲಿ ಉತ್ತರಾರ್ಧದೊಂದಿಗೆ ಪ್ರಕಟಪಡಿಸಿದ್ದಾರೆ.

ಪುಟ ೧೮೪ ರ ಅಡಿ ಟಿಪ್ಪಣಿಯಲ್ಲಿ

" ಮತ್ತಂ ವಸುಂಧಾವಲ್ಲಭ। " ಎಂಬ ಪದ್ಯವು ಒಂದು ಪ್ರತಿಯಲ್ಲಿ ಮಾತ್ರವಿದೆ ಗ್ರಂಥಕರ್ತನದಲ್ಲವೆಂದು ತೋರುತ್ತದೆ. ಎಂಬುದನ್ನು ತಿಳಿಸಿದ್ದಾರೆ.

ಈ ಕೃತಿಯ ಮುದ್ರಣಕ್ಕೆ ಎಷ್ಟು ಪ್ರತಿಗಳನ್ನು ಬಳಸಿ ಹೊರತಂದಿದ್ದಾರೆ ಎಂದು ತಿಳಿದು ಬರುವುದಿಲ್ಲ. ಎರಡನೆ ಸಂಪುಟದ ಅಡಿ ಟಿಪ್ಪಣಿಯ ಪ್ರಕಾರ ಕ। ಎಂಬ ಒಂದು ಪ್ರತಿಯನ್ನು ಬಳಸಿರುವುದು ಕಂಡುಬರುತ್ತದೆ. ಕೆಲವು ಆಶ್ವಾಸಗಳ ಅಡಿ ಟಿಪ್ಪಣಿಯಲ್ಲಿ ಪದ್ಯಗಳನ್ನು ಕೊಟ್ಟು ಇದು ಗ್ರಂಥಕರ್ತನದಲ್ಲ ಎಂದಿದ್ದಾರೆ.

ಉದಾ: ೧. ಪುಟ ೮೫ ರ ಅಡಿ ಟಿಪ್ಪಣಿಯಲ್ಲಿ ಕೊಟ್ಟಿರುವ ಪದ್ಯ

"ಅನಂತ ಸಿರಿನಿಧಿ ವಾಸದೋ।

ಳನಂತ ಬೋದಾದಿರಾಜನೊಪ್ಪುವ ಗುಣದ॥

ಲ್ಲಿನಂಗಜಯ ಕಳಸವೆನ।

ಲ್ಪನಮಾತೆಯ ಗಂಧ ವಿಬುಧ ಭೂಷಣವೆಸಗುಂ(?)॥

(ನಾಸಿಕಾಭರಣಶ್ಲೇಷಾರ್ಥಂ)

ಎಂದು ೧೩೩ನೆಯ ಪದ್ಯವಾಗಿ ಒಂದು ಪ್ರತಿಯಲ್ಲಿದೆ ಇದು ಗ್ರಂಥಕರ್ತನ ಪದ್ಯದಂತೆ ತೋರಿಬರುವುದಿಲ್ಲ ಎಂದಿದ್ದಾರೆ.

ಮೊದಲ ಸಂಪುಟದಲ್ಲಿ ಪಾಠಾಂತರಗಳು ಕಂಡುಬರುವುದಿಲ್ಲ.

ಎರಡನೆ ಸಂಪುಟದಲ್ಲಿ ಪಾಠಾಂತರಗಳು ಇವೆ **ಉದಾ:**

ಪುಟ ೧೮೪ ರಲ್ಲಿ "ಸ್ವದಮೆನಿಸಿರ್ದುಂ ಬಟಿಃಕ್ಕಮಚಿರದ್ಯುತಿಸಂ
ಪದಮೆನಿಸಿತೋರ್ಪುದಂ ತಾ ।
ಮುದು ಚಿತ್ತಕ್ಕೆ ಚಿತ್ರತತಮೆಂಬಿನೆಗಂ॥ (?)

ಪಾಠಾಂತರ "ಸ್ವದಮೆನಿಸಿರ್ದಂ ಸಂಚರದ್ಯುತಿ
ಸಂಪರಮೆನಿಸಿ ತೋರ್ಪುಯಂ ತೋವದೆ
ಮದುಚಿತ್ತಕೆ, ಕ॥

೧. ಪುಟ ೧೮೯ " ತ್ರಿಕೋಣ ಚತುರ ಶ್ರವಾಪಿಗಳ್ ಸೋಗಯಿಸುಗಂ ॥

ಪಾಠಾಂತರ †ಈ ಕಡೆ – ಅಂತು ಚತುರ್ಮುಖಂಗಳೊಳ್ ಪ್ರತ್ಯೇಕ ವಾಪಿತ್ರಯಂಗಳಕ್ಕುಂ ಎಂದೊಂದು ಪ್ರತಿಯಲ್ಲಿದೆ ಎಂದು ಉಲ್ಲೇಖಿಸಿದ್ದಾರೆ.

೨. ಪುಟ ೨೧೨ ರಲ್ಲಿ ಗದ್ಯ ಭಾಗದಲ್ಲಿ

" ಭಕ್ತಿ ಭಾವ ಶುದ್ಧ ಸಿದ್ಧರಸವನೆಬಲಿದು †

ಎಂಬುದಕ್ಕೆ ಅಡಿ ಟಿಪ್ಪಣಿಯಲ್ಲಿ " ಇಲ್ಲಿಂದ ಮುಂದೆ ಸುಮಾರು ೬೦ ಪದ್ಯಗಳಷ್ಟು ಗ್ರಂಥವನ್ನು ಬರೆದು ಯಾರೋ ಸೇರಿಸಿದಂತೆ ತೋರುತ್ತದೆ. ಈ ಭಾಗವು ಅಶುದ್ಧವಾಗಿ ಏಕದ್ಗ್ರಂಥಕರ್ತ ಕೃತವಲ್ಲವೆಂದು ತೋರಿಬರುವುದರಿಂದಲೂ. ಪುರಾತನ ಪ್ರತಿಯಲ್ಲಿ ಇಲ್ಲವಾದುದರಿಂದಲೂ ಈ ಭಾಗಗಳನ್ನು ಮುದ್ರಿಸದೆ ಬಿಟ್ಟಿರುತ್ತೇವೆ ಎಂದು ತಿಳಿಸಿದ್ದಾರೆ.

ಆರ್. ವಿ. ಕುಲಕರ್ಣಿಯವರು ಎಂ.ಎ.ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಚಾರ್ ಅವರುಗಳು ಪರಿಷ್ಕರಿಸಿದ ಪಾಠವನ್ನೇ ಅಂಗೀಕರಿಸಿ ೧೯೮೧ ರಲ್ಲಿ '**ಚಂದ್ರ ಪ್ರಭಪುರಾಣ**'ದ ಗದ್ಯಾವನುವಾದನು ಮಾಡಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಿದ್ದಾರೆ.[೧೮] ಇದರ ಮೂಲಕ ಇವರ ಗ್ರಂಥ ಸಂಪಾದನೆಯ ಘನತೆಯನ್ನು ಗುರುತಿಸಬಹುದಾಗಿದೆ.
ಇವರದು ಗದ್ಯಾನುವಾದವಾದ್ದರಿಂದ ಇದರಲ್ಲಿ ಗ್ರಂಥಸಂಪಾದನೆಯ ಹೆಚ್ಚಿನ ವಿಶೇಷವೇನೂ ಕಂಡುಬರುವುದಿಲ್ಲ. ಅಚ್ಚುಕಟ್ಟಾಗಿ ಅಚ್ಚಾಗಿದೆ.

೬. "ಅಭಿನವ ವಾದಿವಿದ್ಯಾನಂದನ ಕಾವ್ಯಸಾರಂ" ಅನ್ನು ಅಭಿನವವಾದಿ 'ವಿದ್ಯಾನಂದನೆಂಬ ಜೈನ ಪಂಡಿತ'. ಕ್ರಿ.ಶ. ೧೫ ನೇ ಶತಮಾನದಲ್ಲಿ ಇದ್ದ 'ಮಧುರ' ಕವಿಯು ರಚಿಸಿದ ಧರ್ಮಪುರಾಣ ಎಂಬ ಕೃತಿಯ ಪದ್ಯಗಳನ್ನು ಉದ್ಧರಿಸಿರುವುದರಿಂದ ಮಧುರನಿಗಿಂತಲೂ ಈಚಿನವನೆಂದು ವ್ಯಕ್ತವಾಗುತ್ತದೆ ಎಂದಿದ್ದಾರೆ.

ಈ ಕೃತಿಯು ಕನ್ನಡ ಕವಿತೆಯ ಸ್ವರೂಪದ ಉತ್ಕೃಷ್ಟತೆಗೆ ಕನ್ನಡಿಯಂತಿದೆ ಎಂದಿದ್ದಾರೆ. ಇದರಲ್ಲಿ ೪೫ ಅಧ್ಯಾಯಗಳು ೧೧೮೩ ಪದ್ಯಗಳನ್ನು ಹೊಂದಿರುವ ಗ್ರಂಥ ಇದಾಗಿದೆ. ಇದರಲ್ಲಿನ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ಆ ಕಾಲದಲ್ಲಿ ಬಳಕೆಯಲ್ಲಿದ್ದ ಚಿಹ್ನೆಗಳನ್ನು ಬಳಸಿ ನೀಡಿದ್ದಾರೆ. ಕೆಲವು ಕಡೆ ಚಿಹ್ನೆಗಳು ಪುನರುಕ್ತಿಯಾದ ಕಡೆ ೨ ಒಂದೇ ರೀತಿಯ ಚಿಹ್ನೆಗಳನ್ನು ನೀಡಿ ವ್ಯತ್ಯಾಸವನ್ನು ತಿಳಿಸಿದ್ದಾರೆ. ಇದು ಈ ಕೃತಿಯಲ್ಲಿ ವಿಶೇಷವಾಗಿ ಕಂಡುಬಂದಿದೆ.

---

[18] ಚಂದ್ರ ಪ್ರಭಪುರಾಣ, ಆರ್. ವಿ. ಕುಲಕರ್ಣಿ, ಕನ್ನಡ ಸಾಹಿತ್ಯ ಪರಿಷತ್, ೧೯೮೧

ಉದಾಹರಣೆಗೆ

ಪುಟ ನಾಲ್ಕರ ಪಾಠದಲ್ಲಿ "ದುರ್ವಿದಗ್ಧ" ಎಂದಿದ್ದರೆ ಅಡಿಟಿಪ್ಪಣಿಯಲ್ಲಿ ‡'ದುರ್ವಿವೇಕ' ಎಂದಿದೆ. ಪುಟ ೧೩ ರ ಪಾಠದಲ್ಲಿ 'ದುರ್ಗ್ರಹ' ಎಂದಿದ್ದು ಅಡಿಟಿಪ್ಪಣಿಯಲ್ಲಿ †† 'ವಿಗ್ರಹ' ಎಂದು. ಪುಟ ೨೧ ರಲ್ಲಿ 'ಬಾಲ್ವಗೆ' ಎಂದಿದ್ದರೆ §'ಸ್ವಾತಿಗೆ' ಎಂದಿದೆ. ಹೀಗೆ ಇನ್ನು ಅನೇಕ ಪಾಠಾಂತರಗಳನ್ನು ಈ ರೀತಿಯ ಚಿಹ್ನೆಗಳ ಮೂಲಕ ಉಲ್ಲೇಖಿಸಿದ್ದಾರೆ.

೭. **"ದುರ್ಗಸಿಂಹನ ಕರ್ಣಾಟಕ ಪಂಚತಂತ್ರ" (ಸಟಿಪ್ಪಣಂ)"** ಈ ಕೃತಿಯು **ಕರ್ಣಾಟಕ ಕಾವ್ಯ ಮಂಜರಿಯಲ್ಲಿ** ಪ್ರಕಟವಾದಂತ ಕೃತಿ. ಇದರ ಪೀಠಿಕಾ ಭಾಗದಲ್ಲಿ ಕವಿಚರಿತ್ರೆ ಇದ್ದು ದುರ್ಗಸಿಂಹನ ಎಂಬುವನು ಇದರ ಕರ್ತೃ ಎಂದು ಹೇಳಲಾಗಿದ್ದು. ಮತ್ತು ಪ್ರತಿಗಳ ವಿಚಾರವಿದ್ದು ೩ ಪ್ರತಿಗಳಿಂದ ಇದನ್ನು ಮುದ್ರಿಸಿರುವುದಾಗಿ ತಿಳಿಸಿದ್ದಾರೆ. 'ಕ' ಪ್ರತಿ ಮದರಾಸಿನ ಓರಿಯಂಟಲ್ ಲೈಬ್ರರಿಯದು. 'ಗ' ಪ್ರತಿ ಮೈಸೂರು ಶ್ರೀಮಾಹಾರಾಜರ ಅರವನೆಯ ಸ್ವರಸ್ವತೀ ಭಂಡಾರದಲ್ಲಿದದ್ದು. 'ಖ' ಪ್ರತಿ ಶ್ರೀ ವೆಂಕಟರಮಣಯ್ಯ ನವರು ಕಳುಹಿಸಿದ್ದು ಎಂದು ಸಂಕೇತಗಳ ಮೂಲಕ ತಿಳಿಸಿದ್ದಾರೆ. ಈ ಮೂರು ಪ್ರತಿಯನ್ನು ಬಳಸಿರುವುದಕ್ಕೆ ಸಾಕ್ಷಿಯಾಗಿ ಅಡಿಟಿಪ್ಪಣಿಯಲ್ಲಿ ಪಾಠಾಂತರಗಳನ್ನು ನೀಡಿದ್ದಾರೆ. ಜೊತೆಗೆ ಟೀಕೆ ಮತ್ತು ಟಿಪ್ಪಣಿಗಳನ್ನು ಹೊಂದಿರುವುದು ವಿಶೇಷವಾಗಿದೆ.

ಉದಾಹರಣೆ

೧. ಪುಟ ೧೨ ರ ಪಾಠದಲ್ಲಿ 'ಮುರ ಹರಂದ್ಯೆವಂ' ಎಂದಿದ್ದರೆ ಪಾಠಾಂತರವು 'ಪುರಹಂದೇವಂ' ಖ। ಎಂದು.

೨. ಪುಟ ೩೫ ರ ಪಾಠ ಪೋಗಲ್ ಎಂದಿದೆ ಪಾಠಾಂತರ ಪೊಗಟಿಲ್ ಕ।ಗ। ಎಂದು.

೩. ಪುಟ ೬೩ ಬೆಂದ ಬೀಜಂ ಪುಟ್ಟದಂತೆ ಎಂಬುದಕ್ಕೆ ಪಾಠಾಂತರ ಹುರಿದು ಬಿತ್ತಿದ ಬೀಜಂ ಪುಟ್ಟದಹಾಂಗೆ ಖ। ಎಂದು

೪. ಪುಟ ೧೪೭ ರ ಪಾಠ ಮೃಗಯಾವ್ಯ ಸನ ವ್ಯಾಪಾರ ಎಂಬುದಕ್ಕೆ ಪಾಠಾಂತರ ಮೃಗವ್ಯ ವ್ಯಾಪಾರವ್ಯ ಸನಂ ಖ। ಎಂದು ಕೊಟ್ಟಿದ್ದಾರೆ.

ಟಿಪ್ಪಣಿ ಮತ್ತು ಟೀಕೆ

"ದುರ್ಗಸಿಂಹನ ಕರ್ಣಾಟಕ ಪಂಚತಂತ್ರ" ವಿಶೇಷವಾಗಿ ಟಿಪ್ಪಣಿ ಮತ್ತು ಟೀಕೆ ಒಳಗೊಂಡಿರುವು ಓದುಗರಿಗೆ ಹೆಚ್ಚು ಉಪಯುಕ್ತವಾದದ್ದಾಗಿದೆ.

ಉದಾಹರಣೆಗೆ

೧. ಪುಟ ೫೪ ರಲ್ಲಿ ೨೮ನೇ ಶ್ಲೋಕ ಮತ್ತು ಟೀಕು.

ಶ್ಲೋ॥ "ಗಂತವ್ಯಾರಾಜಸಭಾದ್ರಷ್ಟವ್ಯಾರಾಜಪೂಜಿತಾಃ ಪುರುಷಾಃ

ಯದ್ಯಪಿನ ಭವೇದರ್ಥೋ ಭವೇದವರ್ಥ ಪ್ರತೀಕಾರಃ॥"

[ಟೀಕು- ನೃಪ ಸಭೆಯ ನೈದಲೆವೇಱ್ಕುಂ ನೃಪರ್ ಮನ್ನಿಸುವ ಪುರುಷರಂ ಕಾಣಲೆವೇಱ್ಕುಂ ಎತ್ತಲಾನುಮರ್ಥವಿಲ್ಲದಿರ್ದೊಡಂ ತನಗೆ ಬಂಧನರ್ಥಮಂ ಪರಿಹರಿಸಲ್ ಬಹುದು]

ಟೀ ೩ ತೊಡಗಿದ ಕೆಲಸವನ್ನು ಕೊನೆಗಾಣಿಸುವುದೆ ಮಹಾಪುರುಷ ಲಕ್ಷಣವು ಎಂದು ಅಡಿ ಟಿಪ್ಪಣಿಯಲ್ಲಿ ಅರ್ಥವನ್ನು ಕೊಟ್ಟಿರುವುದು. ಗಮನಾರ್ಹ.

೨. ಪುಟ ೧೯೪ ರಲ್ಲಿ ೧೨೧ ನೇ ವಾಕ್ಯಂ

ವಾಕ್ಯ॥ " ಸಾಹಸ್ಯೈಃ ಖ್ಲು ಶ್ರೀರ್ವಸತಿ"

ಟಿಪ್ಪಣಿ- ಸಾಹಸಂಗಳಂ ಸರಿ ನೆಲೆಗೊಳುಂ ಎಂದೂ ಮತ್ತು ಇದೇ ಕ್ರಿತಿಯ ಸಾಲುಗಳ ಸಂಖ್ಯೆ ಕೊಟ್ಟು ಟಿಪ್ಪಣಿಯಲ್ಲಿ ವಿಶಿಷ್ಟಪದಗಳ ಅರ್ಥವನ್ನು ತಿಳಸಿರುವುದು ವೇದ್ಯವಾಗಿದೆ.

೩. ಪುಟ ೧೧೩ ರಲ್ಲಿ ೧೫ ನೇ ಸಾಲಿನಲ್ಲಿ ಇಱುಂಬು – ಇಕ್ಕಟು.

೪. ಪುಟ ೨೦೩ ೫ನೇ ಸಾಲಿನಲ್ಲಿ ಉಱು – ಶಕುನದ ಪಕ್ಷಿ

೫. ಪುಟ ೨೨೮ ೧೫ನೇ ಸಾಲು ನೇರಾಣಿ–ಅಪರಂಜಿಯೆ ಚಿನ್ನ ಎಂದು ಅಡಿ ಟಿಪ್ಪಣಿಯಲ್ಲಿ ಹೇಳದೆ. ತ್ರುಟಿತವಾದ ಕಡೆಗಳಲ್ಲಿ ಇವರೂ ಕೂಡ ಇದ್ದ ಹಾಗೆಯೇ ಮುದ್ರಿಸಿದ್ದಾರೆ. ಅಡಿ ಟಿಪ್ಪಣಿಯಲ್ಲಿ + ಈ ಚಿಹ್ನೆಯನ್ನು ಬಳಸಿ ಇಲ್ಲಿ ಪದ್ಯಪಾತವಾಗಿರುವಂತೆ ತೋರುತ್ತದೆ ಎಂದಿದ್ದಾರೆ.

೧೯೭೩ ರಲ್ಲಿ **ಎನ್ ಅನಂತರಂಗಾಚಾರ್** ಅವರು ಸಂಪಾದಿಸಿ ಮೈಸೂರಿನ ಶಾರದಾ ಮಂದಿರದಿಂದ ಪ್ರಕಟಿಸಿದ್ದಾರೆ. ಇವರು ಎಂ.ಎ.ಆರ್ ಅವರು ಬಳಸಿದ್ದ ೩ ಹಸ್ತಪ್ರತಿಗಳ ಜೊತೆಗೆ ಮತ್ತೆ 'ಖ ಮ ಅ' ಎಂಬ ೩ ಹಸ್ತಪ್ರತಿಗಳನ್ನು ಸಂಪಾದಿಸಿ ಬಳಸಿಕೊಂಡಿರುವುದಾಗಿ ತಿಳಸಿದ್ದಾರೆ. ಬಳಸಿದ ಮೂರು ಪ್ರತಿಗಳಲ್ಲಿ ಖ ಎಂಬ ಪ್ರತಿ ಈ ಹಿಂದೆ ಬಳಕೆಯಾದ ಪ್ರತಿಯ ಸಂಕೇತವೇ ಆಗಿರುವುದರಿಂದ ಇವರು ಬಳಸಿರುವುದು ಮ.ಅ. ಎಂಬ ಎರಡೇ ಪ್ರತಿ ಖ ಎಂಬುದು ಮೊದಲು ಬಳಸಿದೆ ಪ್ರತಿಯೇ ಆಗಿರಬೇಕು ಎಂದೆನಿಸುತ್ತದೆ. ಆದರೂ ಇವರು ಮೊದಲು ಬಳಸಿದ ಪ್ರತಿಯನ್ನು ಸಂಪಾದಿಸಿರುವವರನ್ನು ಸ್ಮರಿಸಿದ್ದಾರೆ ಮತ್ತು ಇವರ ಪಾಠವನ್ನೇ ಅಧಿಕೃತಗೊಳಿಸಿದ್ದಾರೆ. 'ಪಂಚತಂತ್ರಾವಲೋಕನ' ಎಂದು ಟಿಪ್ಪಣಿಕೊಟ್ಟಿರುವುದು ಉತ್ತಮವಾಗಿದೆ ಪೀಠಿಕಾ ಭಾಗದಲ್ಲಿ ಕವಿ

ಕೃತಿ ವಿಚಾರದ ಬಗ್ಗೆ ತಿಳಿಸಿದ್ದಾರೆ. ಅನುಬಂದಗಳನ್ನು ನೀಡಿ ಪದ್ಯಗಳನ್ನು ಅಕಾರದಿಯಾಗಿ ಕೊಟ್ಟಿರುವುದು ಉಪಯುಕ್ತವಾಗಿದೆ.[೧೯]

ಬಿ.ಎಸ್ ಸಣ್ಣಯ್ಯನವರು ತಮ್ಮ ಕೃತಿಯಲ್ಲಿ ಎಂ.ಎ.ಆರ್.ರವರು ಪ್ರಕಟಿಸಿರುವ ಕರ್ಣಾಟಕ ಪಂಚತಂತ್ರದ ಬಗ್ಗೆ ಚರ್ಚಿಸಿದ್ದು ಇದಕ್ಕೆ ಸಂಸ್ಕೃತದ ಪಂಚಂತ್ರವೇ ಆಧಾರವಿರಬೇಕು ಅದಕ್ಕೆ ಇದನ್ನು 'ಕರ್ಣಾಕಟ ಪಂಚತಂತ್ರ' ಎಂದೇ ಹೇಳಿದ್ದಾರೆ. ಆದರೆ ಕವಿಯ ಈ ಕೃತಿಯ ಹೆಸರನ್ನು ಎಲ್ಲೂ ಹೇಳಿಲ್ಲ. ದುರ್ಗಸಿಂಹನು ' ಪಂಚರತ್ನಮುಪ್ಪೈದು ಕಥೆಗಳನ್ನಾಯ್ದುಕೊಂಡು ಪಂಚತಂತ್ರವೆಂದು ಹೆಸರಿಟ್ಟು (೧–೬೨ ವ) 'ಪೊಸತಾಗಿರೆ ವಿರಚಿಸುವೆಂ ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿಂ(೧–೬೩) 'ಪತಿವಾರಂ ಬರೆ ಪಂಚತಂತ್ರಮೆಸೆದತ್ತೀಧಾತ್ರಿಯೊಳ್' (೪–೫೧) ಎಂದೆಲ್ಲಾ ಹೇಳಿರುವುದಲ್ಲದೆ ಪ್ರತಿ ತಂತ್ರದ ಅಂತ್ಯದಲ್ಲಿ 'ದುರ್ಗಸಿಂಹ ವಿರಚಿತಮಪ್ಪ ಪಂಚತಂತ್ರದೊಳ್' ಎಂದು ತನ್ನ ಕೃತಿ ಪಂಚತಂತ್ರವೆಂದು ಸ್ಪಷ್ಟವಾಗಿ ಹೇಳಿದ್ದರೂ 'ಕರ್ಣಾತಕ ಪಂಚತಂತ್ರ' ಎಂದು ಮರು ನಾಮಕರಣ ಮಾಡುವ ಅವಶ್ಯಕತೆ ಕಂಡುಬರುವುದಿಲ್ಲ. ಪ್ರತಿ ತಂತ್ರದ ಆದಿಯಲ್ಲಿಯೂ ಶೀರ್ಷಿಕೆಯನ್ನು ಕೊಡುವಾಗ ಪ್ರಥಮ ತಂತ್ರ. ದ್ವಿತೀಯ ತಂತ್ರ ಎಂದು ಮೊದಲಾಗಿ ಎಲ್ಲ ವಿಭಾಗಗಳಲ್ಲಿಯೂ ಕವಿ ಹೇಳಿರುವುದನ್ನು ಕೈಬಿಟ್ಟಿರುವುದು ಸಾಧುವಾಗಿ ತೋರುವುದಿಲ್ಲ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. [೨೦] ಇದರ ಹಿನ್ನೆಲೆಯಲಿಯೇ ಎಂ.ಎ.ರಾಮಾನುಜಯ್ಯಂಗಾರ್ ಅವರ ಸಂಪಾದಿತ ಪಾಠವೇ ಇಂದಿಗೂ ಅಧಿಕೃತವಾಗಿರುವುದು ಇವರ ಸಂಪಾದನಾ ಶೈಲಿಯ ಶ್ರೇಷ್ಠತೆಗೆ ದ್ಯೋತಕವಾಗಿದೆ.

೮. "ಕಮಲಭವನ ಶಾಂತೀಶ್ವರ ಪುರಾಣಂ" ಈ ಗ್ರಂಥವು ಸಂಪುಟಗಳಲ್ಲಿ ಪ್ರಕಟವಾಗಿದ್ದು ಪ್ರಥಮ ಸಂಪುಟವು ೧ ರಿಂದ ೫ ಆಶ್ವಾಸಗಳನ್ನು ಒಳಗೊಂಡಿರುವುದಾಗಿ ತಿಳಿಸಿದ್ದಾರೆ.

ಈ ಗ್ರಂಥವು ಕವಿ ಚಕ್ರವರ್ತಿ ಎಂಬ ಬಿರುದು ಪಡೆದ ಜನ್ನನಿಂದ ರಚಿತವಾದದ್ದಾಗಿದ್ದು ಈತನು ಪ್ರಾಚೀನ ಕವಿಗಳಿಂದ ಕೀರ್ತಿಸಲ್ಪಟ್ಟಿರುವನು. ಈತನು ಕವಿಲೋಕದಲ್ಲಲ್ಲದೆ ನಾಡಿನಲ್ಲಿಯೂ ಗಣ್ಯನಾಗಿದ್ದು ಈ ಕೃತಿಯಲ್ಲಿ **'ಜಗನ್ನುತ ಜನ್ನ'** ಎಂದು ಸ್ಮರಿಸಿರುವನು. ಈತನು ಯಶೋಧರ ಚರಿತೆ. ಅಂತಪುರಾಣ. ಶಾಸನಗಳು ಮುಂತಾದವುಗಳನ್ನು ರಚಿಸಿದ್ದು ಚತುರ್ವಿಧ ಪಂಡಿತನಾಗಿದ್ದನು. ಈತನ ಒಂದು ಪದ್ಯದಿಂದ ವ್ಯಾಕರಣ ತರ್ಕ. ನಾಟ್ಯ. ಸಾಹಿತ್ಯ. ಮುಂತಾದ ಶಾಸ್ತ್ರಗಳನ್ನು ಅಭ್ಯಾಸಮಾಡಿದ್ದನೆಂದು ತಿಳಿದುಬರುತ್ತದೆ.

---

[19] 'ದುರ್ಗಸಿಂಹನ ಪಂಚತಂತ್ರ'. ಎನ್ ಅನಂತರಂಗಾಚಾರ್. ಶಾರದಾ ಮಂದಿರ. ಮೈಸೂರು. ೧೯೭೩

[20] ಬಿ.ಎಸ್ ಸಣ್ಣಯ್ಯ. ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ. ಚಂಪೂಕಾವ್ಯಗಳು. ಪುಟ. ೬೬

ಆರ್. ವಿ. ಕುಲಕರ್ಣಿಯವರು **ಶಾಂತೀಶ್ವರ ಪುರಾಣವನ್ನು** ಗದ್ಯಾನುವಾದದೊಡನೆ ಕನ್ನಡ ಸಾಹಿತ್ಯ ಪರಿಷತ್ತುನಿಂದ ೧೯೮೩ ರಲ್ಲಿ ಹೊರತಂದಿದ್ದಾರೆ. ಕಾವ್ಯ ಕಲಾನಿಧಿಯಲ್ಲಿ ಅಚ್ಚಾದ ಪ್ರತಿಯ ಪಾಠವನ್ನೇ ಮೂಲವಾಗಿಟ್ಟುಕೊಂಡು ಅರ್ಥಕ್ಲೇಶವಾಗದ ಹಾಗೆ ಪಾಠಗಳನ್ನು ನಿರ್ಣಯಿಸಿರುವುದಾಗಿ ತಿಳಸಿದ್ದಾರೆ. ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿ ಸಂಗ್ರಹದಲ್ಲಿದ ಒಂದು ಹಸ್ತಪ್ರತಿಯ ಸಹಾಯ ಪಡೆದಿರುವುದಾಗಿ ತಿಳಸಿದ್ದಾರೆ. ಕೆಲವು ಪದ್ಯಗಳನ್ನು ಬೇರೆ ಕೃತಿಗಳಿಂದ ತೆಗೆದುಕೊಂಡು ತಿದ್ದಿರುವುದಾಗಿ ಹೇಳಿದ್ದಾರೆ. ಉತ್ತಮ ಪೀಠಿಕೆ ಇದ್ದು ಸಮಾನ ಪದ್ಯಗಳ ಪಟ್ಟಿ, ಅಥಕೋಶ, ಪದ್ಯಗಳ ಅಕಾರದಿ ಮೊದಲಾದವುಗಳು ಕೊಟ್ಟಿರುವುದು ಉಪಯುಕ್ತವಾಗಿದೆ.[೨೧] ಹೀಗಾಗಿ ಎಂ.ಎ. ರಾಮಾನುಜಯ್ಯಂಗಾರ್ ರವರ ಸಂಪಾದಿತ ಕೃತಿಯೇ ಇಂದಿಗೂ ಅಧಿಕೃತವಾಗಿರುವುದು ಅವರ ಶ್ರೇಷ್ಠ ಸಂಪಾದನೆಗೆ ಮಾದರಿಯಾಗಿದೆ.

೬. **"ತಿರುಮಲೆಯಾರ್ಯನ ಚಿಕದೇವರಾಜ ವಿಜಯಂ"** ಈ ಗ್ರಂಥವನ್ನು ಚಿಕದೇವಮಹಾರಾಜರಿಗೆ ಆಪ್ತನಾದ ತಿರುಮಲೈಯಂಗಾರ್ಯ ಎಂಬ ಮಹಾಕವಿಯಿಂದ ರಚನೆಯಾಗಿದೆ ಎಂದು ತಿಳಿಸುತ್ತಾರೆ.

ಈ ಗ್ರಂಥದಲ್ಲಿ ದಾನದ ವಿಚಾರವು ಉಲ್ಲೇಖವಾಗಿದ್ದು ಚಿಕ್ಕದೇವಮಹಾರಾಜನು ಶ್ರೀಂಗಪಟ್ಟಣದಲ್ಲಿ ರಾಜ್ಯಬಾರ ಮಾಡುತ್ತಿದ್ದಾಗ ಈ ಕವಿಯು ಅವರಲ್ಲಿ ಮಂತ್ರಿ ಪದವಿ ಪಡೆದುಕೊಂಡಿದ್ದರೆಂದು ತಿಳಿದುಬರುತ್ತದೆ. ಮತ್ತು ಈತ ಸಂಸ್ಕೃತ ಮತ್ತು ಕನ್ನಡದಲ್ಲಿ ಅಪಾರ ಪಾಂಡಿತ್ಯವನ್ನು ಪಡೆದು ಅನೇಕ ಗ್ರಂಥಗಳನ್ನು ರಚಿಸಿರುವ ವಿವರವನ್ನು ಹೇಳಲಾಗಿದೆ. ಇದನ್ನು ಎಷ್ಟು ಪ್ರತಿಯ ಆಧಾರದ ಮೇಲೆ ಇದನ್ನು ಸಂಪಾದಸಿ ಪರಿಷ್ಕರಿಸಿ ಮುದ್ರಿಸಿದ್ದಾರೆ ಎಂಬ ವಿಚಾರವೇನು ತಿಳಿದುಬರುವುದಿಲ್ಲ.

ಇದೊಂದು ಪ್ರೌಢವಾದ ಚಂಪೂಕಾವ್ಯವಾಗಿದ್ದು ಈ ಕೃತಿಯಿಂದ ಚಂಪೂ ಶೈಲಿಯು ಪುನರುಜ್ಜೀವನಹೊಂದಿ ತಿಳಿದುಬರುತ್ತದೆ. ಇದನ್ನು ಅಚ್ಚುಕಟ್ಟಾಗಿ ಅಚ್ಚು ಮಾಡಿದ್ದಾರೆ.

ಉದಾ: ೧ ಕೆಟ್ಟುದು ಕಜ್ಜಂ ಮುನ್ನಮೆ।
ಕೆಟೊಡಮೇಂ ರಾಯನೊಲ್ದು ರಾಯಸವಿತ್ತಂ॥
ನೆಟ್ಟನೆ ನೀಮೆಟ್ಟಿಗಳೆ।
ನಿಟ್ಟೋಟಂಬಟ್ಟು ನಿಮ್ಮನಾಡಂ ಕೂಡಿಂ॥

ಈ ಪದ್ಯವು ಟ ಕಾರ ಪ್ರಾಸವಾಗಿದ್ದು ಉತ್ತಮವಾಗಿದೆ.

೨. ನುಣ್ಣನೆ ನುಡಿದೋಱುತೆ ಪಲ।
ವಣ್ಣಂಗೊಂಡೇಱಿಯಿಱಿದು ಸರಸಂಬಡೆದುಂ॥

[೨೧] ಶಾಂತೀಶ್ವರ ಪುರಾಣ. ಆರ್. ವಿ. ಕುಲಕರ್ಣಿ. ಸಾಹಿತ್ಯ ಪರಿಷತ್ತು. ಬೆಂಗಳೂರು. ೧೯೮೩

ಬಣ್ಣಿಗೆವಡಿಸುವುದಲ್ಲದೆ।
ಬಣ್ಣಿಸಿಮೇನೊಳವೆ ತಿರುಳುಮಿದಱ್ಪೊಳ್ ಪುರುಳುಂ॥

ಹೀಗೆ ಎಲ್ಲ ಪದ್ಯಗಳು ಪ್ರಾಸಬದ್ಧವಾಗಿದ್ದು ಅತ್ಯುತ್ತಮವಾಗಿ ಮೂಡಿಬಂದಿದೆ.

೧೦. **"ಮಹಾಕವಿ ರನ್ನನ ಗದಾಯುದ್ಧ'** ಪ್ರಥಮ ಮುದ್ರಣದಲ್ಲಿ ಕವಿ ರನ್ನನ ಚರಿತ್ರೆಯನ್ನು ಹೇಳಗಾಗಿದ್ದು ಈತನು ಬೆಳುಗಾರೆ ನಾಡಿನಲ್ಲಿ ಬೆಳುಗಲಿ ಐನೂರಿನಲ್ಲಿನ ಜಂಬುಖಂಡಿಯಪ್ಪತ್ತರಲ್ಲಿ ಶ್ರೇಷ್ಠವಾದ ಮುದುವೊಳಲಲ್ಲಿ ಶಾಲಿವಾಹ ಶಹ ೮೭೧ ನೆಯ ಸೌಮ್ಯ ವತ್ಸರದಲ್ಲಿ ಹುಟ್ಟಿದನು. ಈತನ ತಾಯಿ ಅಬ್ಬಲಬ್ಬೆ ತಂದೆ ಜಿನವಲ್ಲಬೇಂದ್ರ. ಈತನಿಗೆ ದೃಢಬಾಹು, ಕೀಚಣ, ಮಾರಯ್ಯ ಎಂಬುವರು ಸಹೋದರರು. ಶಾಂತಿ ಮತ್ತು ಜಕ್ಕಿ ಎಂಬ ಇಬ್ಬರು ಪತ್ನಿಯರಿದ್ದರು. ಈತನಿಗೆ ರಾಯ ಎಂಬ ಮಗ ಅತ್ತಿಮಬ್ಬೆ ಎಂಬ ಮಗಳು ಇದ್ದರು. ಈತ ಬಳೆಗಾರಕುಲಕ್ಕೆ ಸೇರಿದವನು ಇವನ ಗುರು ಅಜಿತಸೇನಾಚಾರ್ಯ ಇವನಿಗೆ ಚಾವುಂಡರಾಯನು ಆಶ್ರಯ ನೀಡಿದ್ದನು ಎಂದು ತಿಳಿದುಬರುತ್ತದೆ.

ಈ ಗ್ರಂಥದ ಪ್ರಥಮ ಮುದ್ರಣಕ್ಕೆ 'ಕ'. 'ಗ'. ಎಂಬ ೨ ಪ್ರತಿಗಳನ್ನು ಬಳಸಿರುವುದಾಗಿ ಆ ಎರಡು ಪ್ರತಿಗಳು ಅಸಮರ್ಪಕ ಪ್ರತಿಗಳೆಂದು ತಾಳ ಪತ್ರದ ಪ್ರತಿ ದೊರೆಯಲಿಲ್ಲವಾದ್ದರಿಂದ ಈ ಉದ್ಗ್ರಂಥವು ನಶಿಸಿಹೋಗುತ್ತದೆ ಎಂದು ಶುದ್ಧ ಮೂಲ ಪಾಠವನ್ನು ಊಹಿಸಿ ಬಿದ್ದ ಗ್ರಂಥಪಾತವನ್ನು ಯಥಾ ಸ್ಥಿತಿಯಲ್ಲಿ ಸೇರಿಸಿ ಮುದ್ರಿಸಬೇಕಾಯಿತು ಎಂದಿದ್ದಾರೆ. ದ್ವಿತಿಯ ಮುದ್ರಣಕ್ಕೆ 'ತ' ಎಂಬ ಪ್ರತ್ರಿಯನ್ನು ಬಳಸಿದ್ದು ತೃತಿಯ ಮುದ್ರಣದಲ್ಲಿ ನಾಲ್ಕೂ ಪ್ರತಿಗಳ ಸ್ವರೂಪನ್ನು ತಿಳಿಸಿದ್ದಾರೆ ಅದು ಈ ಕೆಳಗಿನಂತೆ ಇದೆ.

'ಕ' ಎಂಬ ಪ್ರತಿಯನ್ನು ಮೈಸೂರು ಗೌರ್ನಮೆಂಟ್ ಆರ್ಕ್ಯಾಲಜಿಕಲ್ ಡಿಪಾರ್ಟ್ ಮೆಂಟ್ ಆಫೀಸಿನಲ್ಲಿ ಪಂಡಿತರಾಗಿದ್ದ ಶ್ರೀಮಾನ್ ಬುರುಡುಗುಂಟೆ ಶ್ರೀನಿವಾಸ್ಯೆಯಂಗಾರ್ಯರು ಒಂದು ಮಾತೃಕೆಯ ಮೇಲೆ ಬರೆದು ಕಳುಹಿಸಿಕೊಟ್ಟರೆಂದು ಹೇಳಿದ್ದಾರೆ.

'ಗ' ಪ್ರತಿ ಎಂಬ ಪ್ರತಿಯು ಮೈಸೂರು ಸರ್ಕಾರದ ಓರಿಯೆಂಟಲ್ ಲೈಬ್ರೆರಿಯಲ್ಲಿ ಈಗ ಇರುವ ಮೆ॥ರೈಸ್ ಸಾಹೇಬರರು ಬರೆಯಿಸಿ ಕೊಟ್ಟರೆಂದು, ಇದು ಕ ಪ್ರತಿಯ ಯಾವ ಮಾತೃಕೆಯ ಮೇಲೆ ಹುಟ್ಟಿತೋ ಆ ಮಾತೃಕೆಯನ್ನೇ ನೋಡಿ ಪಾಠಬೇದ ಮಾಡಿರುವುದಾಗಿ ತಿಳಿಸಿದ್ದಾರೆ.

'ಖ' ಎಂಬ ಪ್ರತಿಯು ನಮ್ಮ ಸ್ವಂತ ಭಂಡಾರದಲ್ಲಿದ್ದ ಮುದ್ರಿತವಾದ, ಅಸಮಗ್ರವಾದ ಅಪ್ರಯೋಜಕವಾದ ಪ್ರತಿ ಇದರಿಂದ ವಿಶೇಷ ಉಪಯೋಗವಾಗಲಿಲ್ಲ ಎಂದಿದ್ದಾರೆ.

'ತ' ಎಂಬ ಪ್ರತಿಯು ಮದರಾಸ್ ಪ್ರಾಚ್ಯ ಕೋಶಾಗಾರದಲ್ಲಿರುವ ಬಹು ಜೀರ್ಣವಾದ ಪ್ರತಿಯಲ್ಲಿರುವ ಪಾಠಭೇದಗಳನ್ನೊಳಗೊಂಡಿರುವ ನಮ್ಮ ಪ್ರಥಮ ಮುದ್ರಣದ ಪತ್ರಿ ಎಂದು

ಗುರುತಿಸಿದ್ದಾರೆ. ಇದರಲ್ಲಿ ಕ.ಗ.ಖ ಪ್ರತಿಗಳಿಗೆ ಭಿನ್ನವಾದ ಪಾಠಗಳನ್ನೂ ಗುರುತಿಸಿದ್ದು ಇದರ ಮೂಲ ಮಾತೃಕೆಯು ಬಹುಶಃ ಉತ್ತಮವಾಗಿದು ಅದರ ಸಹಾಯವು ಇನ್ನು ಮುಂದೆ ದೊರೆಯುವಷ್ಟು ಅದು ಜೀರ್ಣವಾಗಿಹೋಗಿದೆ ಎಂದು ಹೇಳ ಶೋಕಿಸಬೇಕಾಗಿದೆ. ಆದರಿಂದ ತೃತಿಯ ಮುದ್ರಣದಲ್ಲಿ ವಿಮರ್ಶೆಗೆ ಕೈ ಹಾಕಲಿಲ್ಲ ಎಂದಿದ್ದಾರೆ.

ಇದರಲ್ಲಿ ಪಾಠಾಂತರಗಳನ್ನು ನೀಡಿದ್ದಾರೆ. ಉದಾ: ೧೯೯ನೆಯ ಪುಟದಲ್ಲಿರುವ (+) ಗುರುತಿನ ಪಾಠಬೇಧವು: ೧೨೦ ನೆಯ ಪುಟದಲ್ಲಿರುವ (–) ಎಂಬ ಪಾಠಭೇದವು ಆ ಮಾತೃಕೆಯ ಸ್ಥಿತಿಯನ್ನು ತಿಳಿಸಲು ಸಾಕಾಗಿದೆ ಎಂದಿದ್ದಾರೆ. ಅವರು ಬರೆದದನ್ನು ಸರಿಯಾಗಿ ಓದಲು ಸಾಧ್ಯವಾಗಿದ್ದರಿಂದ ತೃತಿಯ ಮುದ್ರಣಕ್ಕೆ ಬಹಳ ಸಹಾಯವಾಯಿತೆಂದೂ ಹೇಳಿದ್ದಾರೆ.

ದ್ವಿತೀಯ ಮುದ್ರಣ ೧೯೨೫ ರಲ್ಲಿ ರಾಮಾನುಜಯಂಗಾರ್ ಸ್ವತ: ಪರೀಷ್ಕರಿಸಿ ಮುದ್ರಿಸಿರುವುದಾಗಿ ತಿಳಿಸಿದ್ದಾರೆ. ಪ್ರಥಮ ಮುದ್ರಣ ಮುಗಿದು ಹೋಗಿ ೧೯೧೯ ರಲ್ಲಿ ವಿದ್ಯಾಪೀಠಗಳಲ್ಲಿ ಈ ಗ್ರಂಥವನ್ನು ಪರೀಕ್ಷಾಗ್ರಂಥವಾಗಿ ನಿಯಮಿಸ್ಲಲ್ಪಟ್ಟ ಕಾರಣ ಮತ್ತೆ ಮುದ್ರಿಸಿದುದಾಗಿ ತಿಳಿಸಿದ್ದಾರೆ. ಪ್ರಥಮ ಮುದ್ರಣಕ್ಕಿಂತ ಸ್ವಲ್ಪ ಪ್ರಮಾಣದಲ್ಲಿ ಉತ್ತಮ ಎಂದಿದ್ದಾರೆ.

ತೃತಿಯ ಮುದ್ರಣವನ್ನು ೧೯೨೭ರಲ್ಲಿ ದ್ವಿತಿಯ ಮುದ್ರಣವು ಮುಗಿದು ಹೋಗಿ ಮತ್ತೆ ಮುದ್ರಿಸಬೇಕಾಯಿತು ಆಗ ಈ ತೃತಿಯ ಮುದ್ರಣದಲ್ಲಿ ಕವಿಚರಿತ್ರೆ. ಗ್ರಂಥವಿಮರ್ಶೆಯನ್ನು ಒಳಕೊಂಡು ಪರೀಕ್ಷಾ ಗ್ರಂಥವಾಗಿ ನಿಯಮಿಸಲ್ಪಟ್ಟಕಾರಣ ತೃತಿಯ ಮುದ್ರಣವನ್ನು ಮಾಡಬೇಕಾಗಿ ಬಂದಿತು ಎಂದಿದ್ದಾರೆ. ಇದಕ್ಕೆ ನಾಲ್ಕು ಪ್ರತಿಗಳು ಸಹಾಯ ಮಾಡಿದುದಾಗಿ ಅದರ ಸ್ವರೂಪವನ್ನೂ ತಿಳಿಸಿದ್ದಾರೆ. ಭಿನ್ನಾರ್ಥ ಕೊಡುವ ಪಾಠಾಂತರ ಕೊಟ್ಟಿರುವ ಬಗ್ಗೆ. ಮತ್ತು ಕೆಲವು ಕಡೆ ಓದುಗರೆ ಸರಿಪಡಿಸಿಕೊಳ್ಳಲೆಂದು ಅಬದ್ಧಪಾಠಗಳನ್ನು ಕೊಟ್ಟಿರುವುದಾಗಿ ವ್ಯಕ್ತಪಡಿಸಿದಾರೆ.

ಹೀಗೆ ಎಷ್ಟೇ ಯೋಚಿಸಿದರು ಮೂಲ ಪಾಠದ ಅರ್ಥವು ಸರಿಯಾಗಿ ಸ್ಪುರಿಸದೇ ಅಪಭ್ರಂಶವು ನಿಸ್ಸಂಶಯವಾಗಿರುವುದೆಂದು ತಿಳಿದುಬಂದ ಕಡೆ (?) ಪ್ರಶ್ನಾರ್ಥಕ ಚಿಹ್ನೆಯನ್ನು, ಗ್ರಂಥಪಾತವಾಗಿರುವ ಕಡೆ ಸರಿಪಡಿಸಿದ ಭಾಗಕ್ಕೆ [ ] ಎಂಬ ಆವರಣ ಚಿಹ್ನೆಯನ್ನು, ಕವಿಪಾಠಗಳನ್ನು ಊಹಿಸಿ ಪೂರ್ತಿ ಮಾಡಲಾಗದ ಗ್ರಂಥಪಾತ ಭಾಗಗಳನ್ನು ಪಾತಸೂಕಕವಾದ .... ಈ ಚಿಹ್ನೆಗಳನ್ನು ತಿಳಿಸಿರುವುದಾಗಿ ಹೇಳಿದ್ದಾರೆ. ಸರಿಪಡಿಸಿದ ಭಾಗಗಳಲ್ಲಿ ಮೂಲ ಪಾಠಗಳು ಭಿನ್ನವಾಗಿದ್ದರೆ ಅವುಗಳನ್ನು ಪಾಠಾಂತರವಾಗಿ ತೋರಿಸಿರುವುದಾಗಿ ತಿಳಿಸಿದ್ದಾರೆ.

ಉದಾರಹಣೆಗಳು

ಪುಟ ೧೮ ಪಾಠ 'ಭುಜೋಗ್ರ' ಎಂದಿದ್ದರೆ ಪಾಠಾಂತರವು 'ಭುಜಾಗ್ರ' ಕ। ಎಂದೂ

ಪುಟ ೧೨೨ ಪಾಠ ಗುಲಾಯಾಮಮುಂ ಎಂಬುದಕ್ಕೆ ಪಾಠಾಂತರವು ಗುಲಾಯಮಾನಮುಂ ಕ।ಗ।

ಎಂದು ಕೊಟ್ಟಿದ್ದಾರೆ.

ದ್ವಿತಿಯ ಹಾಗೂ ತೃತಿಯ ಮುದ್ರಣದಲ್ಲಿನ ಪಾಠಾಂತರಗಳು

ಪುಟ ೨ ಪಾಠ [ನೆಗಳ್ದಿರ್ ವ್ಯಾಸವಾರ್ಲ್ಮೀ]

ಪಾ. ಕ.ಗ. ನೆಗಳ್ದಕವೀಂದ್ರವಾರ್ಲ್ಮಿಕಿ ಎಂದಿದೆ

ಪುಟ ೨೫ ಪಾಠ. ಶೌರ್ಯಶಾಳ

ಪಾ. ಕ. ಕಾರ್ಮಕಾರಿ ಎಂದಿದೆ. ಹೀಗೆ ಪ್ರತಿ ಪುಟದಲ್ಲು ಪಾಠಾಂತರಗಳನ್ನು ಕೊಟ್ಟಿದ್ದಾರೆ.

ಈ ಗ್ರಂಥವನ್ನು ರಚಿಸಲು ಸಹಾಯ ಮಾಡಿದ ಎಸ್.ಜಿ. ನರಸಿಂಹಾಚಾರ್ ಮತ್ತು ಅವರ ತಮ್ಮ ಎಸ್.ಜಿ. ಗೋವಿಂದರಾಜಯ್ಯಂಗಾರ್ ಹಾಗೂ ಎಚ್ ಎಸ್ ನಂಜುಂಡಯ್ಯ ರವರಿಗೂ ಕೃತಜ್ಞತೆನ್ನು. ಮದ್ರಾಸಿನ ಪ್ರಾಚ್ಯಕೋಶದಲ್ಲಿದ್ದ ಗದಾಯುದ್ಧದ ಮಾತೃಕೆಯನ್ನು ಕಳುಹಿಸಿಕೊಟ್ಟ ರಾಮಕೃಷ್ಣ ಕವಿಯವರಿಗೂ ಈ ಗ್ರಂಥವನ್ನು ಪರೀಕ್ಷಾ ಗ್ರಂಥವಾಗಿ ನಿಯಮಿಸಿದ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳಗೂ ವಂದನೆಯನ್ನು ಸಲ್ಲಿಸಿದ್ದಾರೆ.

೧೯೪೯ ರಲ್ಲಿ **ತೀ.ನಂ.ಶೀಕಂಠಯ್ಯ**ನವರು 'ಗದಾಯುದ್ಧ ಸಂಗ್ರಹಂ' ಎಂಬ ಶೀರ್ಷಿಕೆಯಲ್ಲಿ ಗ್ರಂಥ ಸಂಪಾದನೆ ಮಾಡಿದ್ದಾರೆ. ಇವರು ರಾಮಾನುಜ್ಯಯಂಗಾರ್ ಪ್ರಕಟಿಸಿದ 'ಅ೧ ಅ೩' ಎಂಬ ಸಂಕೇತದ ಪ್ರತಿ. ಮೂಲ ಗದಾಯುದ್ಧ ಕಾವ್ಯ. ಮೈಸೂರು ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ನಲ್ಲಿ ಗದಾಯುದ್ಧ ಕಾವ್ಯದ ಕೈಬರಹದ ಕಾಗದದ 'ನ' ಎಂಬ ಸಂಕೇತದ ಪ್ರತಿ . ಚೆನ್ನೈನಲ್ಲಿರುವ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ್ ಲೈಬ್ರರಿಯಲ್ಲಿರುವ ಗದಾಯುದ್ಧದ 'ಮ' ಎಂಬ ಸಂಕೇತದ ತ್ರುಟಿತವಾದ ಓಲೆಗರಿಯ ಪ್ರತಿಯ ನಕಲು ಮತ್ತು ಬಿ.ಎಂ. ಶ್ರೀಯವರ ಗದಾಯುದ್ಧ ನಾಟಕ 'ಟ' ಎಂಬ ಸಂಕೇತದ ಹಸ್ತಪ್ರತಿಗಳನ್ನು ಬಳಸಿಕೊಂಡು ಪಾಠಾಂತರಗಳನ್ನು ಅರ್ಥಕ್ಕನುಸಾರವಾಗಿ ತಿಳಸಿದ್ದಾರೆ. ಅವುಗಳನ್ನು ಅಡಿಟಿಪ್ಪಟಿಯಲ್ಲಿ ನಮೂದಿಸಿದ್ದಾರೆ. ನಂತರದ ಆವೃತಿಗಳಲ್ಲಿ ಕಾವ್ಯ ವಿಮರ್ಶೆ, ಶಬ್ದಗಳ ಅರ್ಥ, ಮತ್ತು ಟಿಪ್ಪಣಿಗಳ ಅನುಬಂಧಗಳನ್ನು ಕೊಟ್ಟು, ಪ್ರತಿ ೧೦ ಅಧ್ಯಾಯಕ್ಕೂ ವಿವರವಾದ ಟೀಕೆ ಟಿಪ್ಪಣಿಗಳು ಕೊಟ್ಟಿರುವುದು ಸಮರ್ಥನೀಯವಾಗಿದೆ.[೨೨]

---

[22] ರನ್ನ ಕವಿ ಗದಾಯುದ್ಧ ಸಂಗ್ರಹಂ, ತೀ.ನ.ಶ್ರೀಕಂಠಯ್ಯ, ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೪೯– ೧೧ನೇ ಮುದ್ರಣ೨೦೦೩

ಇವರು ಅಡಿ ಟಿಪ್ಪಣಿಗಳಲ್ಲಿ ಪಾಠಾಂತರಗಳನ್ನು ನೀಡಿದ್ದು ಹಿಂದಿನ ಸಂಪಾದಕರ ಪಾಠಾಂತರಗಳ ಜೊತೆಗೆ ಸ್ವೀಕೃತ ಪಾಠಗಳನ್ನು ನೀಡಿದ್ದಾರೆ.

ಉದಾ: ಪುಟ ೨೮ ರ ಪಾಠದಲ್ಲಿ 'ಲ' ಎಂದಿದ್ದರೆ ಅಡಿ ಟಿಪ್ಪಣಿಯಲ್ಲಿ ಸ್ವೀಪಾ = ಮ; ಅ(ನ,ಅ) ಎಂದು ನೀಡಿದ್ದಾರೆ.

ಪುಟ ೬೫ ರ ಪಾಠದಲ್ಲಿ [ಡಮಳ್ಗಲ್] ಎಂದೂ ಕೊಟ್ಟಿದ್ದು ಅಡಿ ಟಿಪ್ಪಣಿಯಲ್ಲಿ ಡೆಮಳರ್ (ನ, ಅ) ಎಂಬ ಪಾಠಾಂತರ ನೀಡಿದ್ದಾರೆ.

೧೯೮೫ ರಲ್ಲಿ **ಬಿ.ಎಸ್. ಸಣ್ಣಯ್ಯ** ಮತ್ತು ರಾಮೇಗೌಡರು ಈ ಎಲ್ಲಾ ಆವೃತ್ತಿಗಳನ್ನೂ ಗಮನಿಸಿ ಇನ್ನೂ ಸಮರ್ಪಕದ ಆವೃತ್ತಿಯೊಂದನ್ನು ಸಿದ್ಧಪಡಿಸಲು ಪ್ರಯತ್ನಿಸಿ ಇವರು ಈ ಹಿಂದೆ ಅಚ್ಚಾದ ಪ್ರತಿಗಳೊಂದಿಗೆ ಎರಡು ಹಸ್ತಪ್ರತಿಗಳನ್ನು ಬಳಸಿಕೊಂಡಿರುವುದಾಗಿ ತಿಳಿಸಿದ್ದಾರೆ. ಅದಲ್ಲ ಒಂದು ಶಕ ೧೨೬೪ ರ ಕಾಲ ನಮುದಿತ ಓಲೆ ಪ್ರತಿ. ಮತ್ತೊಂದು ಹಿಂದೆ ಬಳಸಿದ ಕಾಗದ ಪ್ರತಿ ಓಲೆ ಪ್ರತಿಯಲ್ಲಿ ಶಕಟರೇಫವಿದ್ದು ಸಾಕಷ್ಟು ಶುದ್ಧವಾಗಿದೆ ಎಂದಿದ್ದಾರೆ. ಹಿಂದಿನ ಸಂಪಾದಕರುಗಳು ಈ ಪ್ರತಿಯನ್ನು ಗಮನಿಸಿಲ್ಲವೆಂದು ತೋರುತ್ತದೆ ಎಂದಿರುವ ಇವರು ತೀನಶ್ರೀಯವರು ಕೊಟ್ಟ ಊಹಾ ಪಾಠಗಳು ಈ ಪ್ರತಿಯಲ್ಲಿ ದೊರೆತಿರುವುದೇ ಇದಕ್ಕೆ ಆಧಾರ ಎಂದು ತಿಳಿಸಿದ್ದಾರೆ. ಕಥಾಸಾರ ಟಿಪ್ಪಣಿಗಳಂದ ಓದುಗರಿಗೆ ಅನುಕೂಲವಾಗುವಂತೆ ಇದೆ ಎಂದಿದ್ದಾರೆ.[೨೩] ಇವರು ರಾಮಾನುಜಯ್ಯಂಗಾರ್ ರವರು ಗುರುತಿಸಿಲ್ಲದ ಪ್ರತಿಯನ್ನು ಗುರುತಿಸಿ ಸಂಪಾದಿಸಿರುವುದು ಶ್ಲಾಘನಿಯವಾಗಿದೆ. ಆದರೂ ನಂತರದ ಆವೃತ್ತಿಗಳನ್ನು ಬಳಸಿಕೊಂಡು ಅವರುಗಳನ್ನು ಸ್ಮರಿಸಿರುವುದು ಅರ್ಥಪೂರ್ಣವಾಗಿದೆ.

ಚಿದಾನಂದ ಮೂರ್ತಿಯವರು ಹೊಸತು ಹೊಸತು ಎಂಬ ಲೇಖನದಲ್ಲಿ ರನ್ನನ ಗದಾಯುದ್ಧದಲ್ಲಿನ ಒಂದು ಪದ್ಯದಲ್ಲಿ ಬರುವ ಪಾಠಾದ ಸಮಸ್ಯೆಯನ್ನು ಕುರಿತು ಡಾ. ಎಂ. ಕಲಬುರ್ಗಿಯವರು ಪ್ರಸ್ತಾಪಿಸುರುವುದರ ಬಗ್ಗೆ ಚರ್ಚಿಸಿದ್ದಾರೆ. ಅದು ಈ ರೀತಿ ಇದೆ.

"ಪಸಿವಿನೊಳನ್ನಮಂ ಪಸಿದು ಬಂದವರ್ಗ್ಗಿಕ್ಕುವ ಯುದ್ಧ ರಂಗದೊಳ್
ಕುಸಿಯದೆ ಸೂಱೆಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕ್ವೆ (?)ಮಾ" ಎಂದು ಇರುವುದಕ್ಕೆ ರಾಮಾನುಜಯ್ಯಂಗಾರ್ ೧೯೨೫ ರ ಆವೃತ್ತಿಯಲ್ಲಿ " ಸುಫಲದಲ್ಲಿ ಸುವರ್ಣಮನೀವ ಯುದ್ಧದೊಳ್ ..... ಪಮಚಿತ್ತಗೊಳಪ್ಪುಗೈದು" ಎಂದಿದೆ ಈ "ಪಸಿವಿನೊಳನ್ನಮಂ ಪಸಿದು ಬಂದವರ್ಗ್ಗಿಕ್ಕುವ" ಒಂದು ಬಗೆಯ ಅರ್ಥ ಸಂದಿಗ್ಧತೆ ಕಾಣುತ್ತದೆ ಎಂದಿರುವರು ಮುಂದೆ 'ಪಸಿವು' ಎಂಬ ಪಾಠವನ್ನೇ ಒಪ್ಪಿಕೊಂಡು "ಸುಫಲದಲ್ಲಿ" ಎನ್ನುವ ಪಾಠಾಂತರವನ್ನು

---

23 ಬಿ.ಎಸ್ ಸಣ್ಣಯ್ಯ, ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ, ಚಂಪೂ ಕಾವ್ಯಗಳು, ಪುಟ.೩೬

ಮೂಲಪಾಠವಾಗಿ ಸ್ವೀಕರಿಸಿ "ಪಸಿದು ಬಂದವರ್ಗ್ಗಿಕ್ಕುವ" ಎಂಬುದನ್ನು ತಿರಸ್ಕರಿಸಿದ್ದಾರೆ. "ಪಸಿದು ಬಂದವರ್ಗ್ಗಿಕ್ಕುವ" ಮತ್ತು " ಸುಫಲದಲ್ಲಿ ಸುವರ್ಣಮನೀವ" ಇದು ಎರಡು ಪಾಠಗಳು ಸುಲಭವಾಗಿ ಅರ್ಥವಾಗುತ್ತವೆ. ಆದರಿಂದ "ಪಸಿವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ" ಎಂದರೆ "ಹಸಿವಿನಲ್ಲಿ ಅನ್ನವನ್ನೂ ಸುಫಲದಲ್ಲಿ ಚಿನ್ನವನ್ನು ಕೋಡುವ" ಎಂದಾಗುತ್ತದೆ ಎಂದು ಹೇಳಿ ಅಲ್ಲಿ ಬರುವಂತ ಪ್ರತ್ಯಯಗಳನ್ನೂ ಗಮನಿಸಿ ದೀರ್ಘವಾಗಿ ಚರ್ಚಿಸಿದ್ದಾರೆ. ಮತ್ತು " ಸುಫಲದಲ್ಲಿ ಸುವರ್ಣಮನೀವ" ಎಂಬುದನ್ನು ಸ್ವೀಕರಿಸಲು ಕಾರಣ ಇದು 'ತ' ಪ್ರತಿಯಲ್ಲಿರುವು ಮತ್ತು ಇದು ಮದರಾಸಿನ ಪ್ರತಿ ಹಾಗೂ ಇದು ಮೂಲ ಮಾತೃಕೆಗೆ ಸಮೀಪಾವಾಗಿದೆ ಎಂದು ರಾಮಾನುಜಯ್ಯಂಗಾರ್ ರವರು ಭಾವಿಸುತ್ತಾರೆ. ಎಂದು ಹೇಳಿದ್ದಾರೆ.[೨೪]

ಈ ಎಲ್ಲ ಸಂಪಾದಕರು ಸಂಪಾದಿಸಿ ಪರಿಷ್ಕರಿಸಿ ಒಬ್ಬೊಬ್ಬರೂ ಒಂದುಂದು ನೆಲೆಯಲ್ಲಿ ಚಿಂತನೆ ಮಾಡಿ ಪ್ರಕಟಿಸಿರುವುದು ಪ್ರಸಂಸನೀಯವೇ ಅದರಲ್ಲೂ ತಿ.ನಂ.ಶ್ರೀಯವರು ಪರಿಷ್ಕರಿಸಿದ ಗ್ರಂಥವು ಹೆಚ್ಚು ಉಪಯುಕ್ತವಾಗಿದ್ದು ದೋಷಗಳನ್ನು ಪರಿಹರಿಸುವಲ್ಲಿ ಸಮರ್ಥವಾಗಿದೆ ಎನ್ನಬಹುದು. ಈ ಎಲ್ಲ ವಿದ್ವಾಂಸರುಗಳು ಮತ್ತೆ ಪರಿಶೀಲಿಸಿ ಅವುಗಳಲ್ಲಿನ ಹೊಸ ವಿಚಾರಗಳು ಅದರ ಬಗ್ಗೆ ಟೀಕೆ ಮುಂತಾದವುಗಳನ್ನು ಗುರುತಿಸಲು ಅವಕಾಶ ಕಲ್ಪಿತವಾದದ್ದೇ ಎಂ.ಎ. ರಾಮಾನುಜಯ್ಯಂಗಾರ್ ರವರು ಸಂಪಾದಿಸಿದ ಕೃತಿಯೇ ಆಧಾರದ ಮೇಲೆ ಎಂದರೆ ತಪ್ಪಾಗಲಾರದು. ಗದಾಯುದ್ಧದ ಮೂರನೇ ಮುದ್ರಣವು ಅಂದಿನ ಕಾಲದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಪಠ್ಯ ಪುಸ್ತಕವಾಗಿತ್ತು.

೧೧. **"ಹರಿಹರದೇವನ ಗಿರಿಜಾಕಲ್ಯಾಣಂ"** ಇದು ೧೯೦೫ ಕಾವ್ಯಕಲಾನಿಧಿಯಲ್ಲಿ ಪ್ರಕಟಗೊಂಡಿದೆ ಇದರ ಉಪೋದ್ಘಾತದಲ್ಲಿ ಪ್ರತಿಗಳ ವಿಚಾರ ಮತ್ತು ಕವಿಚರಿತ್ರೆಯನ್ನು ನೀಡಿದ್ದಾರೆ. ಇದರಲ್ಲಿ ಕವಿ ಹರಿಹರನ ದೇವನ, ಹರೀಶ್ವರದೇವ, ಹರಿಗ, ಹರಿಯಣ್ಣ ಪಂಡಿತ ಎಂಬ ಹೆಸರುಗಳು ಉಂಟೆಂದು ಇತನು ಶೈವ ಮತದವನಾಗಿದ್ದು ಬಸವರಾಜ ಪುರಾಣ, ಪದ್ಮರಾಜಪುರಾಣ ಇನ್ನು ಮುಂತಾದ ಕೃತಿಗಳನ್ನು ರಚಿಸಿರುವುದಾಗಿ ತಿಳಿಸಿದ್ದಾರೆ.

ಈ ಕೃತಿಯನ್ನು ೩ ಪ್ರತಿಗಳ ಆಧಾರದ ಮೇಲೆ ಮುದ್ರಿಸಿರುವುದಾಗಿ ತಿಳಿಸಿದ್ದಾರೆ. ಒಂದು ಪ್ರತಿ ಮೈಸೂರಿನ ಓರಿಯಂಟಲ್ ಲೈಬ್ರರಿಯದು, ಇನ್ನೊಂದು ೧೮೮೭ರಲ್ಲಿ ಬೆಂಗಳೂರುನಲ್ಲಿ ಲಕ್ಷ್ಮಿ ವಿಲಾಸ ಪ್ರೆಸಿನಲ್ಲಿ ಅಚ್ಚಾದ ಪ್ರತಿ, ಮತ್ತೊದು ಎಸ್. ಆರೆ ಕರಿಬಸವಶಾಸ್ತ್ರಿಗಳು ಕಳುಹಿಸಿಕೊಟ್ಟಂತ ಪ್ರತಿ ಈ ಮೂರೂ ಪ್ರತಿಗಳನ್ನು ಬಳಸಿಕೊಂಡು ಪರಿಷ್ಕರಿಸಿ ಪಾಠಾಂತರಗಳನ್ನೂ ನೀಡಿ ಪ್ರಕಟಿಸಿದ್ದಾರೆ.

---

[24] ಹೊಸತು ಹೊಸತು: ಲೇಖನ: ರನ್ನನ ಒಂದು ಪದ್ಯದ ಸರಿಯಾದ ಒಂದು ಪಾಠ ಮತ್ತು ಅರ್ಥ. ಎಂ. ಚಿದಾನಂದ ಮೂರ್ತಿ, ಪುಟ. ೧೮೭-೧೯೩.

ಈ ಕೃತಿಯನ್ನು ಇವರಿಗೂ ಮೊದಲು **೧೮೮೭ ರಲ್ಲಿ ಹೆಸರುಘಟ್ಟದ ಹೊನ್ನಪ್ಪನವರು** ಪ್ರಕಟಿಸಿದ್ದು, ನಂತರ ಇದೇ ಕೃತಿಯು ಅನೇಕ ವಿದ್ವಾಂಸರು ಐದಾರು ಬಾರಿ ಸಂಪಾದಿಸಿ ಪ್ರಕಟಿಸಿರುವುದನ್ನು ಗಮನಿಸಬಹುದು.

ಶಿ.ಚೆ. ನಂದೀ ಮಠರವರು 'ಗಿರಿಜಾಕಲ್ಯಾಣ'ವನ್ನು ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಿಂದ ೧೯೪೩ ರಲ್ಲಿ ಹೊರತಂದಿದಾರೆ. ಇದನ್ನು ಪ್ರಕಟಿಸುವುದಕ್ಕೆ ಸಾಹಾಯ ಮಾಡಿದವರನ್ನು ಪೀಠಿಕಾ ಭಾಗದಲ್ಲಿ ಸ್ಮರಿಸಿರುವುದಾಗಿ ತಿಳಿಸಿದ್ದಾರೆ. ೧೯೭೮ ರಲ್ಲಿ ಮರುಮುದ್ರಣ ಮಾಡಿರುವುದರಲ್ಲಿ ತಿಳಿದುಬರುವುದೇನೆಂದರೆ ಇದನ್ನು ಪರಿಷ್ಕರಿಸುವುದಕ್ಕೆ ೧೪ ಹಸ್ತಪ್ರತಿಗಳನ್ನು ಬಳಸಿಕೊಂಡಿದ್ದು ೧೭೭೦ ರ ಪ್ರತಿಯೇ ಪ್ರಾಚೀನ ಕಾಲವನ್ನು ನಮೂದಿತವಾದ ಹಸ್ತಪ್ರತಿಯಾಗಿದೆ ಎಂದು ತಿಳಿಸಿದ್ದಾರೆ. ಕವಿಕಾವ್ಯ ವಿಚಾರ ವಿಮರ್ಶೆಯನ್ನು ೨೧ ಪುಟಗಳಲ್ಲಿ ನೀಡಿದ್ದು ಹೆಚ್ಚಿನ ಪಾಠಾಂತರಗಳೇನು ಕಂಡುಬರುವುದಿಲ್ಲ. ಅರ್ಥಕೋಶ ಮತ್ತು ಪದ್ಯಗಳ ಅಕಾರದಿಯನ್ನು ಕೊಟ್ಟಿದ್ದಾರೆ. ೧೯೫೦ ರಲ್ಲಿ **ನಂದೀಮಠ** ಅವರೇ **'ಗಿರಿಜಾಕಲ್ಯಾಣ ಸಂಗ್ರಹ'**ವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ೧೨೫ ಪುಟದ ಪಠ್ಯವಿದ್ದು. ಇದರಲ್ಲಿ 'ನಿವೇದನ' ಎಂಬ ಒಂದೇ ಪುಟ ಮಾತ್ರವಿದ್ದು ಬೇರೆಯಾವ ವಿಚಾರವು ಇರುವುದಿಲ್ಲ.[೨೫] ಇವರಿಗೆ ಎಂ. ಎ. ರಾಮಾನುಜಯ್ಯಂಗಾರ್ ರವರು ಸಂಪಾದಿಸಿದ ಪ್ರತಿಗಿಂತ ಪ್ರಾಚೀನ ಪ್ರತಿ ದೊರಕಿದ್ದು ಅದನ್ನು ಬಳಸಿ ಮುದ್ರಿಸಿರುವುದು ಉತ್ತಮವಾಗಿದೆ.

ಎಂ. ಎ. ರಾಮಾನುಜಯ್ಯಂಗಾರ್ ರವರ ಪ್ರಕಟಿಸಿದ ನಂತರ ವಿದ್ವಾಂಸರುಗಳಿಗೆ ದೊರೆತ ಪ್ರತಿಗಳಿಂದ ಹೆಚ್ಚಿನ ಮಾಹಿತಿ ದೊರೆತಿದ್ದು ಅದನ್ನು ಅವರು ಓದುಗರಿಗೆ ಕೊಟ್ಟು ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವ ಆಸಕ್ತಿಯಿಂದ ಮತ್ತೆ ಪರಿಶೀಲಿಸಿ ಪರಿಷ್ಕರಿಸಿ ಮುದ್ರಿಸಿರುವುದು ಪ್ರಶಂಸನೀಯ.

---

[25] 'ಗಿರಿಜಾಕಲ್ಯಾಣ'. ಶಿ.ಚೆ. ನಂದೀ ಮಠ. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ. ಧಾರವಾಡ. ೧೯೪೩.

೨. ಷಟ್ಪದಿ ಗ್ರಂಥಗಳು

ಷಟ್ಪದಿ ಮಾಧ್ಯಮದಲ್ಲಿ ಅನೇಕ ಪ್ರಸಿದ್ಧ ಕಾವ್ಯಗಳು ರಚಿತವಾಗಿವೆ. ಇದಕ್ಕೆ ಉತ್ತುಂಗ ಸ್ಥಾನಗಳಿಸಿರುವವರು ಪ್ರಸಿದ್ಧ ಕವಿ ರಾಘವಾಂಕ. ಈತನು ಸಾಹಿತ್ಯ ಲೋಕದಲ್ಲಿ ಷಟ್ಪದಿಯ ಬಹ್ಮ ಹೆಸರು ಪಡೆದಂತ ಕವಿ. ಈ ಷಟ್ಪದಿಯ ಛಂದವು ಮಾನ್ಯತೆಯನ್ನು ಪಡೆದು ಸರಳತೆ ಮಧುರತಗಳ ಮಾಧ್ಯಮವಾಗಿ ಮುಂದಿನ ಕವಿಗಳು ಷಟ್ಪದಿಯಲ್ಲಿಯೇ ಕಾವ್ಯ ರಚನೆಮಾಡುವಂತೆ ಪ್ರೇರಣೆಯಾಯಿತು. ಇಂತಹ ಕೃತಿಗಳನ್ನು ಸಂಪಾದಿಸಿ ಮುದ್ರಿಸಿ ಜನರನ್ನು ತಲುಪುವಂತೆ ಮಾಡಿದವರು ಸಂಪಾದನಾಕಾರರು. ಎಂತಹ ಶ್ರೇಷ್ಟ ಗ್ರಂಥಗಳನ್ನು ಸಂಪಾದಿಸಲು ವಿದ್ವತ್ ಪೂರ್ಣವಾದ ಪಾಂಡಿತ್ಯ ಹೊಂದಿದ್ದ ಸಂಪಾದಕರಲ್ಲಿ ಎಂ.ಎ. ರಾಮಾನುಜಯ್ಯಂಗಾರ್ ರವರು ಒಬ್ಬರು. ಇವರು ಸಂಪಾದಿಸಿದ ಶ್ರೇಷ್ಟ ಗ್ರಂಥಗಳೆಂದರೆ, ರಾಘವಾಂಕನ 'ಹರಿಶ್ಚಂದ್ರಕಾವ್ಯ' , ಗುಬ್ಬಿ ಮಲ್ಲಣಾರ್ಯನ 'ಭಾವ ಚಿಂತಾರತ್ನಂ', ಭಾಸ್ಕರನ 'ಜೀವಂಧರ ಚರಿತೆ'. ಮಂಗರಸನ 'ಜಯನೃಪಕಾವ್ಯ'. ಕನಕದಾಸನ 'ನಳಚರಿತ್ರೆ', ಗುರುಲಿಂಗ ವಿಭುವಿನ 'ಭಿಕ್ಷಾಟನ ಚರಿತೆ' ಸವ್ಯಾಖ್ಯಾನ. ಕುಮಾರ ವಾಲ್ಮೀಕಿಯ 'ಮೈರಾವಣನ ಕಾಳೆಗ'. ತಿರುಮಲೆವೈದ್ಯನ 'ಉತ್ತರ ರಾಮಾಯಣ' ಮಹಾಲಕ್ಷ್ಮಿಯ 'ಶ್ರೀರಾಮ ಪಟ್ಟಾಭಿಷೇಕಂ'. ಗೋಪಕವಿಯ 'ನಂದೀ ಮಾಹಾತ್ಮ್ಯಂ'. ಕೋನಯ್ಯನ 'ಗಯ ಚರಿತ್ರೆ' ಒಟ್ಟು ೧೧ ಗ್ರಂಥಗಳನ್ನು ಸಂಪಾದಿಸಿಕೊಟ್ಟಿದ್ದಾರೆ.

ಈ ಗ್ರಂಥಗಳಲ್ಲಿ ಸಾಮಾನ್ಯವಾಗಿ ಚಂಪೂ ಗ್ರಂಥಗಳಲ್ಲಿದ್ದಂತೆಯೇ ಒಳಪುಟಗಳಲ್ಲಿ ಪೀಠಿಕೆ. ಉಪೋದ್ಘಾತ. ಅವತಾರಿಕೆ. ಮುನ್ನುಡಿ ಮತ್ತು ಭೂಮಿಕೆಗಳು ಇದ್ದು ಅವುಗಳಲ್ಲಿ ಕವಿಯ ಕಾಲ. ಕೃತಿ. ಸ್ಥಳದ ವಿಚಾರಗಳು ಕೆಲವು ಗಂಥಗಳಲ್ಲಿ ಕಾಲು ಪುಟದಷ್ಟಿದ್ದು ಕಲವು ಗ್ರಂಥಗಳಲ್ಲಿ ದೀರ್ಘವಾಗಿ ಇರುವುದು ಗಮನಾರ್ಹವಾಗಿದೆ.

ಈ ಗ್ರಂಥಗಳಲ್ಲಿ ವಿಶೇಷವಾಗಿ ಶೋಧನ ಪತ್ರಗಳನ್ನು ನೀಡಿರುವುದು ಗರ್ಮನಾರ್ಹ. ಅವುಗಳಲ್ಲಿ ಪುಟಸಂಖ್ಯೆ, ಪಂಕ್ತಿ ಸಂಖ್ಯೆ, ಅಶುದ್ಧ, ಶುದ್ಧ ಎಂದು ಪಟ್ಟಿ ಮಾಡಿದ್ದಾರೆ. ಹಾಗೆಯೇ ಟೀಕೆ ಟಿಪ್ಪಣಿಗಳು ಈ ಗ್ರಂಥಗಳಲ್ಲಿ ಕಂಡುಬರುತ್ತದೆ.

ಈ ಗ್ರಂಥಗಳನ್ನು ದೊರೆತ ಪ್ರತಿಗಳ ಬಗೆಗೆ ಮಾಹಿತಿಯನ್ನು ನೀಡಿದ್ದು. ಹಾಗೆ ಸಂಪಾದಿಸಿದ ಪ್ರತಿಗಳನ್ನು ಶೋಧಿಸಿ, ಪರಿಷ್ಕರಿಸಿ, ಸಾಧ್ಯವಾದ ಮಟ್ಟಿಗೆ ಮೂಲ ಪಾಠಕ್ಕೆ ಸರಿ ಹೊಂದುವಂತೆ ತಿದ್ದಿ ಅವುಗಳಿಗೆ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ನೀಡಿದ್ದಾರೆ. ಪ್ರತಿಗಳಲ್ಲಿ ಕಂಡುಬರುವ ವ್ಯತ್ಯಾಸವನ್ನು, ಒಂದು ಪ್ರತಿಯಲ್ಲಿ ದೊರೆತ ಅಧಿಕಪಾಠವನ್ನು ಗುರುತಿಸಿ ಗ್ರಂಥದ ಅಡಿಟಿಪ್ಪಣಿಯಲ್ಲಿ ತಿಳಸಿದ್ದಾರೆ.

ಅದೇ ರೀತಿ ಅಡಿಟಿಪ್ಪಣಿಯಲ್ಲಿ ಪಾಠಾಂತರಗಳಲ್ಲದೆ ವಿಶೇಷವಾದ ವಿಶಿಷ್ಟ ಪದಗಳಿಗೆ ಅರ್ಥಗಳನ್ನು ತದ್ಭವ ರೂಪಗಳನ್ನು, ವ್ಯಾಕರಣ ವಿಚಾರಗಳನ್ನು ಮತ್ತು ವಿಶಿಷ್ಟ ಪದಗಳನ್ನು ಪದವಿಭಾಗ ಮಾಡಿ ಅವುಗಳಿಗೆ ಅರ್ಥಗಳನ್ನು ನೀಡಿದ್ದಾರೆ. ಕೆಲವು ಪದ ಪ್ರಯೋಗಗಳನ್ನು ಕೊಟ್ಟು ಆ ಪದಗಳಿಗೆ ಅರ್ಥಗಳನ್ನು ಕೊಡುವುದರ ಜೊತೆಗೆ ಬೇರೆ ನಿಘಂಟಿನ ಉಲ್ಲೇಖ ಮಾಡುತ್ತಾರೆ. ಈ ಕೃತಿಗಳಲ್ಲಿ ಬಳಕೆಯಾಗಿರುವ ವಿಶಿಷ್ಟಪದಗಳ ಉಲ್ಲೇಖವು ಬೇರೆ ಕೃತಿಯಲ್ಲಿ ಬಳಸಿರುವುದನ್ನು ಗುರುತಿಸಿ ಉಲ್ಲೇಖಿಸಿದ್ದಾರೆ.

ಅ. ಷಟ್ಪದಿ ಗ್ರಂಥಗಳಲ್ಲಿನ ವಿಶೇಷ ವಿಚಾರ ಮತ್ತು ವಿಮರ್ಶೆ

೧. **'ಕನಕದಾಸನ ನಳಚರಿತ್ರೆ'** ಈ ಗ್ರಂಥವು ಭಾಮಿನಿ ಷಟ್ಪದಿಯಲ್ಲಿದ್ದು ಕುಮರವ್ಯಾಸ ಭಾರತದಂತೆಯೂ. ಲಕ್ಷ್ಮೀಶನ ಜೈಮಿನಿ ಭಾರತದಂತೆಯೂ ಅತಿ ಪ್ರಸಿದ್ಧವಾದ ಕಾವ್ಯ ಎಂದು ಹೇಳಿದ್ದಾರೆ. ಇದರ ಗ್ರಂಥಕರ್ತನ ಬಗ್ಗೆ ಅನೇಕ ಗೊಂದಲಗಳಿದ್ದು ಕನಕದಾಸನೇ ರಚಿಸಿದಾನೆಂದು ಪ್ರತೀತಿ ಎಂದೂ ಇದಕ್ಕೆ ಪ್ರಬಲವಾದ ಯಾವ ಆಧಾರವೂ ದೊರೆತಿಲ್ಲ ಎಂದು ಪಾಶ್ಚ್ಯಾತ್ಯ ವಿದ್ವಾಂಸರಾದ ರೈಸ್ ರವರು ಕೂಡ ಅನುಮಾನ ಪಟ್ಟಿದ್ದಾರೆ. ಒಂದು ಪ್ರತಿಯಲ್ಲಿ "ವರಪುರದ ಚನ್ನಿಗರಾಯ" ಎಂದೂ ಮತ್ತೊಂದರಲ್ಲಿ "ಸುರಪುರದ ಚನ್ನಿಗರಾಯ" ಎಂದಿರುವುದೇ ಇದಕ್ಕೆ ಕಾರಣವೆಂದು ಸಂಪಾದಕರು ತಿಳಿಸುತ್ತಾರೆ.

ಇದು ಎರಡು ಪ್ರತಿಗಳ ಸಹಾಯದಿಂದ ಮುದ್ರಿಸಿರುವುದಾಗಿ ಇಳಿಸಿರುವ ಸಂಪಾದಕರು ಅದೇ ಪೀಠಿಕೆಯಲ್ಲಿ ಮುಂದುವರೆದು 'ಸುರಪುರ' 'ವರಪುರ' ಎಂಬ ವ್ಯತ್ಯಾಸ ಪಾಠಗಳನ್ನು ಹೇಳುವಾಗ " ನನ್ನಲ್ಲಿರುವ ಓಲೆಯ ಪ್ರತಿಯಲ್ಲಿಯೂ ಮೈಸೂರಲ್ಲಿ ಅಚ್ಚಾಗಿರುವ ಪ್ರತಿಯಲ್ಲಿ "ವರಪುರ ಚನ್ನಿಗರಾಯ" ಎಂಬ ಪಾಠವಿದೆ. ಮದರಾಸಿನಲ್ಲಿ ಅಚ್ಚಾಗಿರುವ ಪುಸ್ತಕದಲ್ಲಿಯೂ ಮತ್ತೊಂದು ಕೈಬರಹದ ಪ್ರತಿಯಲ್ಲಿಯೂ "ಸುರಪುರದ ಚನ್ನಿಗರಾಯ" ಎಂದಿದೆ ಎಂದು ಹೇಳಿದ್ದಾರೆ. ಆದ್ದರಿಂದ ಎರಡು ಪ್ರತಿ ಬಳಸಿದ್ದಾರೋ ಅಥವಾ ನಾಲ್ಕು ಪ್ರತಿಬಳಸಿದ್ದಾರೊ ಎಂಬುದು ಸ್ಪಟವಾಗಿಲ್ಲ. ಇದರಲ್ಲಿ ಯಾವುದೇ ಪಾಠಾಂತರಗಳನ್ನು ನೀಡಿರುವುದಿಲ್ಲ.

ದೇ. ಜವರೇಗೌಡರು 'ನಳಚರಿತ್ರೆ' ಯನ್ನು ಎಚ್.ಎಂ. ಶಂಕರನಾರಾಯಣರಾವ್ ಅವರು ಸಂಪಾದಿಸಿದ ಪ್ರತಿಯನ್ನು ಮತ್ತು ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ನ ಎರಡು ಓಲೆ ಪ್ರತಿಗಳನ್ನು ಬಳಸಿಕೊಂಡು ೧೯೮೬ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ೩೧ ಪುಟಗಳ ದೀರ್ಘವಾದ ಪೀಠಿಕೆಯಲ್ಲಿ ನಳೋಪಾಖ್ಯಾನದ ವಿವರ ಮತ್ತು ಪ್ರಸ್ತುತ ಕೃತಿಯ ಕಥಾಪರಿಚಯವನ್ನು ನೀಡಿದ್ದಾರೆ. ಇದು ಇಧರಲ್ಲಿನ ಒಂದು ವಿಶೇಷತೆಯನ್ನು ತೋರಿಸುತ್ತದೆ. ಕೊನೆಯಲ್ಲಿ ಪ್ರತಿಗಳ ಬಗ್ಗೆ ವಿವರವನ್ನು

ಕೋಡುತ್ತಾರೆ. ಅವರು ಕೆ.೮೪ ನೆಯ ಸಂಖ್ಯೆ ಪ್ರತಿಗೆ 'ಕ'. ಎಂದೂ ಕೆ ೫೫೭ ನೆ ಪ್ರತಿಗೆ 'ಚ' ಎಂದೂ ಶಂಕರನಾರಾಯಣರ ಮುದ್ರಣ ಪ್ರತಿಗೆ 'ಗ' ಎಂದು ಕೊಟ್ಟಿದ್ದು ಡಾ. ಎಲ್ ಬಸವರಾಜು ರವರ ನೆರವನ್ನು ಪ್ರತಿಗಳುಹಿಸಿಕೊಟ್ಟ ದೇವೀರಪ್ಪ ರವರನ್ನು ಸ್ಮರಿಸಿಕೊಂಡಿದ್ದಾರೆ. ಬಳಸಿದ ಮೂರು ಪ್ರತಿಗಳಲ್ಲಿನ ವ್ಯತ್ಯಾಸವನ್ನು ಗುರುತಿಸಿ ಅಡಿಟಿಪ್ಪಣಿಯಲ್ಲಿ ಪಾಠಾಂತರ ತೋರಿಸಿದ್ದಾರೆ.

ಉದಾ: ಪುಟ ೫೧ ರ ೨೪ನೇ ಪದ್ಯದಲ್ಲಿ ನೀಡಿರುವ ಪಾಠ ' ಬೊಗಸೆಗಗಂಗಳ' ಎಂದಿರುವುದಕ್ಕೆ ಅಡಿಟಿಪ್ಪಣಿಯಲ್ಲಿ 'ಬುಗುರಿ ಮೂಲೆ' (ಕ) ಎಂದೂ

ಪುಟ ೮೬ರ ೩೮ನೇ ಪದ್ಯದಲ್ಲಿ ಪಾಠವು ಬಿಸುಸುಯ್ದು ಎಂದಿದ್ದರೆ ಪಾಠಾಂತರವು 'ಚಿಂತಿಸಿದ'(ಗಚ) ಎಂದು ಇದೆ. [೨೬]

ಇದನ್ನೆಲ್ಲ ಗಮನಿಸಿದರೆ ಸಂಪಾದಕರು ಹೆಚ್ಚಿನ ಶ್ರಮವಹಿಸಿ ಪರಿಷ್ಕರಿಸಿ ಮಾಡಿರುವ ಕೆಲಸ ಮೆಚ್ಚುಗೆಯನ್ನು ಗಳಸುವಂತಹದೇ ಆಗಿದೆ. ಇದಕ್ಕೆ ಮೂಲ ಪ್ರತಿಯಾಗಿ ಯಾವದನ್ನು ಬಳಸಿಕೊಂಡಿದ್ದಾರೆ ಅಥವಾ ಇವರು ಪಾಠಗಳಲ್ಲಿ ನೀಡಿರುವುದು ಸಂತ ಶಬ್ದಗಳೋ ತಿಳಯದಾಗಿದೆ. ತುಂಬಾ ಅಚ್ಚುಕಟ್ಟಾಗಿ ಅಚ್ಚಾಗಿದೆ. ಎಂ.ಎ. ರಾಮಾನುಜಯ್ಯಂಗಾರ್ ರವರ ಸಂಪಾದಿತ ಕೃತಿಯ ರೀತಿಯಲ್ಲಿಯೇ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಇವರ ಈ ಪ್ರಯತ್ನ ಉತ್ತಮವಾಗಿದೆ ಆದರೂ ಎಂ.ಎ. ರಾಮಾನುಜಯ್ಯಂಗಾರ್ ರವರ ಕೃತಿಯೇ ಇಂದಿಗೂ ಅಧಿಕೃತವಾಗಿರುವುದು ಕಂಡುಬರುತ್ತದೆ.

೨. "ಕುಮಾರ ವಾಲ್ಮೀಕಿಯ ಮೈರಾವಣನ ಕಾಳಗ" ಈ ಗ್ರಂಥವು ಭಾಮಿನಿ ಷಟ್ಪದಿಯಲ್ಲಿ ನಾಲ್ಕು ಸಂಧಿಗಳನ್ನು ಹೊಂದಿದ್ದು ಇದರ ಕರ್ತೃ ನರಹರಿ ಈತನ ಗುರುವು ವಿದ್ಯಾಶಂರೋತ್ತಮರು ಈತನು "ಬುಧವಂಶಜನು" ಎಂದು ಹೇಳಕೊಂಡಿದ್ದು ತನ್ನ ಗುರುವಿವನ್ನು 'ಪರಮಹಂಸ' ಎಂಬ ವಿಶೇಷಣವನ್ನು ಕೊಟ್ಟಿರುವುದರಿಂದ ಆ ಗುರುವು ಸನ್ಯಾಸಿಯಾಗಿಯೂ 'ತೊರವೆಯ ಹರಿ' 'ತೊರವೆಯ ರಾಯ ರಘುನಾಥ' ಎಂಬುದಾಗಿ ರಾಮಚಂದ್ರನಿಗೆ ವಿಶ್ಲೇಷಿಸಿರುವುದರಿಂದ ಈತನ ಸ್ಥಳ ಷೋಲಾಪುರ ಜಿಲ್ಲೆಯ ತೊರವೆ ಎಂಬ ಗ್ರಾಮ ಆ ಊರಿನ ದೇವರು ಇವನ ಇಷ್ಟದೈವ ಇರಬೇಕು ಎಂದು ಹೇಳದ್ದಾರೆ.

ಈ ಕೃತಿಯಲ್ಲಿ ವಿಶೇಷವೆಂದರೆ ಶೋಧನ ಪತ್ರವನ್ನು ನೀಡಿರುವುದು. ಇಲ್ಲಿ ಸಂಖ್ಯೆಗಳು ಪದ ಸಂಖ್ಯೆಗಳನ್ನು ತಿಳಸುತ್ತವೆ. ಇದರಲ್ಲಿನ ಸಂಧಿಗಳಲ್ಲಿ ಶೋಧಿತವಾದ ಪದಗಳನ್ನು ನೀಡಿದ್ದಾರೆ.

ಉದಾ: ಸಂಧಿ ೨. ೨೩ ರನ್ನ ಬೋದಿಗೆ. ೮೩ ಸಂಧ್ಯಾಂತದಲ್ಲಿ ಸಂಧಿ ೩ ರಲ್ಲಿ ೨೨ ಹರಬ್ರಹ್ಮಾದಿ. ೬೪ ಹನುಮಂತ. ಇನ್ನು ಮುಂತಾದ ಶೋಧನ ಪದಗಳನ್ನು ಸೂಚಿಸಿದ್ದಾರೆ.

---

[26] ನಳಚರಿತ್ರೆ, ದೇ. ಜವರೇಗೌಡರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಬೆಂಗಳೂರು. ೧೯೮೫

೩. **" ಕೊನಯ್ಯನ ಗಯ ಚರಿತ್ರೆ"** ಇದನ್ನು ಕಾಶ್ಯಪ ಗೋತ್ರಕ್ಕೆ ಸೇರಿದ **ಕೋನಯ್ಯ** ಎಂಬುವವನು ಈ ಗ್ರಂಥವನ್ನು ರಚಿಸಿರುವುದಾಗಿ ಈತನ ತಂದೆ ಹೊತ್ತೂರಿನ ಬೆಟ್ಟದರಸ ಇವರ ಕುಲದೇವರು ತಿರುಪತಿಯ ವೆಂಕಟಾಚಲ ಸ್ವಾಮಿ ಎಂದು ತಿಳಿದುಬರುತ್ತದೆ.

ಕವಿಯ ಹೆಸರು ಕೋನಯ್ಯ ಕೋನಯ್ಯ= ಕೋ+ಅಯ್ಯ: ತಮಿಳಿನಲ್ಲಿ 'ಕೋನ್' ಎಂಬ ಪದವು ಸ್ವಾಮಿ ಎಂಬ ಅರ್ಥವನ್ನು ಕೊಡುತ್ತದೆ. ಅಯ್ಯ ಎಂಬುದು ಆರ್ಯಶಬ್ದಕ್ಕೆ ತದ್ಭವ ರೂಪವಾಗಲಾಗಿ, ಗೌರವಾಚಿಯಾಗಿರುತ್ತದೆ. ಎಂದು ಚರ್ಚಿಸಿದ್ದಾರೆ. ಈತನ ಬಗ್ಗೆ ಬೇರೆ ಬೇರೆ ಕೃತಿಯಲ್ಲಿ ಉಲ್ಲೇಖವಿರುವುದನ್ನು ತಿಳಿಸಿದ್ದಾರೆ. ಇದು ಕನ್ನಡ ಪದವೂ ಆಗಿದ್ದು ಶಾಸನೋಲ್ಲೇಖವಾಗಿದ್ದು ಎಂ.ಎ.ರಾಮಾನುಜಯ್ಯಂಗಾರ್‌ರವರ ವಿವರಣೆಗೆ ಸರಿಯಾಗಿದೆ ಎನ್ನಬಹುದು.

ಈ ಗ್ರಂಥಕ್ಕೆ ಕೃಷ್ಣಾರ್ಜುನ ಸಾಗರ ಎಂದು ಮತ್ತೊಂದು ಹೆಸರಿರುವುದಾಗಿ ೧.೧೫ ರಲ್ಲಿ ಕವಿಯು 'ಕೃಷ್ಣಾರ್ಜುನ ಸಾಗರವ ಪೇಳುವೆನು' ಎಂದು ನಂತರ ೨.೧೪ ರಲ್ಲಿ "ಹರಿಧನಂಜಯ ಚರಿತವನು ನಿಮಗೆ ಪ್ರೇಮದಿಂದರುಹುವೆನು" ಎಂದು ಸೂತ ಪೌರಾಣಿಕನಿಂದಲೂ ಹೇಳಿಸಿರುವನು. ಆದ್ದರಿಂದ ಮೇ। ರೈಸ ರವರು ಎರಡು ಗ್ರಂಥಗಳು ಬೇರೆ ಎಂದು ಹೇಳಿರುವುದು ಭ್ರಮೆ ಎಂದಿದ್ದಾರೆ.

ಇದು ೩ ಪ್ರತಿಗಳ ಸಹಾಯದಿಂದ ಮುದ್ರಿತವಾಗಿದ್ದು.

೧. ಕಾವ್ಯ ಕಲಾನಿಧಿ ಭಂಡಾರದ ಪುಸ್ತಕ

೨. ಮೈಸೂರು ಸರ್ಕಾರದ ಓರಿಯಂಟಲ್ ಲೈಬ್ರೇರಿಯ ಪುಸ್ತಕ

೩. ಮ॥ರಾ॥ ಮಾಗಡಿ ಸ್ಕೂಲ್ ಮಾಸ್ಟರ್ ಕೆ ರಾಮಸ್ವಾಮಿ ಅಯ್ಯಂಗಾರ್ ರವರ ಪುಸ್ತಕ

ಇವೆಲ್ಲವೂ ಬರೆದ ಪುಸ್ತಕಗಳು: ಬಹಳ ಅಶುದ್ಧವಾದುವು ಪ್ರತಿಗಳನ್ನು ಕೊಟ್ಟು ದಯಮಾಡಿದವರಿಗೆ ನಮ್ಮ ವಿನಂತೆ ಇದೆ. ಎಂದು ಭೂಮಿಕೆಯ ಕೊನೆಯಲ್ಲಿ ಉಲ್ಲೇಖಿಸಿದ್ದಾರೆ.

೪. **"ಗುಬ್ಬಿ ಮಲ್ಲಣಾರ್ಯ ವಿರಚಿತಂ ಭಾವಚಿಂತಾರತ್ನಂ"** ಇದು ದ್ವಿತೀಯ ಮುದ್ರಣ. ಪ್ರಥಮ ಮುದ್ರಣವನ್ನು ೧೯೦೧ ರಲ್ಲಿ ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್. ಜಿ ನರಸಿಂಹಾಚಾರ್ ಮುದ್ರಿಸಿ ಕಾವ್ಯಮಂಜರಿಯಲ್ಲಿ ಪ್ರಕಟಿಸಿರುವುದಾಗಿ ತಿಳಿಸಿದ್ದಾರೆ.

ಈ ಗ್ರಂಥ ರಚನೆಯ ಕಾಲವನ್ನು ತಿಳಿಸುವ ಪದ್ಯವೊಂದರಲ್ಲಿ " ಬಾಣಗುಣ ವಾರ್ಧಿ ವಿಧುಸಂದ ಶಕ" ಎಂಬುದಕ್ಕೆ ಶಕ ೧೪೩೫ ಎಂಬ ಅರ್ಥವು ಸಮಂಜಸವಾಗಿರುವುದರಿಂದಲೂ ಈ ಗ್ರಂಥವು ಕ್ರಿ.ಶ. ೧೫೧೩ ರಚಿತವಾಗಿರಬೇಕೆಂದು ಹೇಳುತ್ತಾರೆ.

ಇದರ ಮುದ್ರಣಕ್ಕೆ ಎಷ್ಟು ಪ್ರತಿಗಳನ್ನು ಬಳಸಿದ್ದಾರೆ ಎಂಬುದನ್ನು ತಿಳಿದುಬರುವುದಿಲ್ಲ. ಇದರಲ್ಲಿ ಎರಡು ಕಡೆ ಮಾತ್ರ ಪದ್ಯ ಬಳಸಿ ಪಾಠಾಂತರವನ್ನು ಕೊಟ್ಟಿದ್ದಾರೆ. ಅವುಗಳೆಂದರೆ ೯ ನೇ ಸಂಧಿಯ

ಪುಟ ೮೫ ರ ೫೮ ನೇ ಪದ್ಯದ ಉತ್ತರಾರ್ಧದಲ್ಲಿ

"ಜಾಣನಾನಾಗಲಿಂಗಾಹ್ವಯಸುತಂ ಶಿವ।
ಪ್ರಾಣಲಿಂಗಪ್ಪನಾತ್ಮಜ ಚೇರಮಾಂಕಗ।
ಕ್ಷೀಣವೆನೆ ಮಲ್ಲಣಾರ್ಯಂ ನಿರೂಪಿಸಿದನೀ ಭಾವಚಿಂತಾರತ್ನಂ॥

ಎಂದಿದ್ದು ಅಡಿ ಟಿಪ್ಪಣಿಯಲ್ಲಿ

"ಜಾಣನಿಂನಾಗಲಿಂಗಯ್ಯಗಳಸುತ ಶಿವ।
ಪ್ರಾಣಿಗಂಗಪ್ಪನಣುಗಂ ಚೇರಮಾಂಕಗ।
ಕ್ಷೀಣವೆನೆ ಮಲ್ಲಣಾಚಾರ್ಯಂ ನಿರೂಪಿಸಿದ ಭಾವಚಿಂತಾರತ್ನಮಂ॥ ಎಂದು ಪಾಠಾಂತರ ವನ್ನು ಕೊಟ್ಟಿದ್ದಾರೆ.

ಮತ್ತೆ ಅದೇ ಸಂಧಿಯ ಪುಟ ೮೬ ಕಡೆಯ ಪುಟ ಪದ್ಯ ೬೨ ರಲ್ಲಿ "ಜನಿತೋಸ್ರಮಾಲಿ" ಎಂದೂ ಅಡಿ ಟಿಪ್ಪಣಿಯಲ್ಲಿ "ಜನಿಕೋಶ ಮಾಲಿ" ಎಂದು ಪ್ರಾಠಾಂತರ ಕೊಟ್ಟಿದ್ದಾರೆ. ಇಡೀ ಗ್ರಂಥಕ್ಕೆ ಈ ಎರಡೇ ಪಾಠಾಂತರ ಇರುವುದು ಗಮನಾರ್ಹ.

ಮಹದೇವಪ್ಪನರು ಭಾವಚಿಂತಾರತ್ನವನ್ನು ೬ ಓಲೆ ಪ್ರತಿ. ೨ ಕಾಗದ ಹಸ್ತಪ್ರತಿಗಳಿಂದ ಮತ್ತೊಮ್ಮೆ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಇದರ ಮುಖಪುಟದಲ್ಲಿ ಶೀರ್ಷಿಕೆ **'ಭಾವಚಿಂತಾರತ್ನ'** ಎಂದಿದೆ. ಒಳ ಪುಟದಲ್ಲಿ **'ಭಾಚಿಂತಾರತ್ನ ಸಂಗ್ರಹ'** ಎಂದು ಇರುವುದು ಕಂಡುಬರುತ್ತದೆ. ಪೀಠಿಕೆಯಲ್ಲಿ ಕವಿ ಕೃತಿಗಳ ವಿಚಾರ ನೀಡಿದ್ದು ದೊರೆತ ಪಾಠಾಂತರಗಳನ್ನೆಲ್ಲ ಕೊಟ್ಟಿದ್ದಾರೆ. ಇದರ ಪೂರ್ವದ ಪ್ರತಿಯಲ್ಲಿನ ಸಾಮಾನ್ಯ ಪಾಠಾಂತರಗಳನ್ನು ಇವರ ಪ್ರತಿಯಲ್ಲಿ ಕೈಬಿಟ್ಟಿದ್ದಾರೆ. ೯ ಸಂಧಿಗಳನ್ನು ೧೦ ವಿಭಾಗ ಮಾಡಿ ೨೬೦ ಪದ್ಯಗಳಿಗೆ ಇಳಿಸಿದ್ದಾರೆ. ಇದರಲ್ಲಿ ಅನುಬಂಧಗಳನ್ನು ಕೊಟ್ಟಿರುವುದನ್ನು ನೋಡಬಹುದು. ಇದು ೧೯೪೫ ರಲ್ಲಿ ಮುದ್ರಣಗೊಂಡ ಈ ಪ್ರತಿ ೧೯೬೩ ರಲ್ಲಿ ಮರು ಮುದ್ರಣ ಹೊಂದಿದೆ. ಇದು ಚಿಕ್ಕದಾದರೂ ಉತ್ತಮ ಕಾವ್ಯವಾಗಿರುವುದರಿಂದ ಸಂಗ್ರಹಿಸಿದ ಅವಶ್ಯಕತೆ ಇರಲಿಲ್ಲವೆನ್ನಿಸುತ್ತದೆ ಎಂದು ಬಿ.ಎಸ್. ಸಣ್ಣಯ್ಯನವರು ತಮ್ಮ ಗ್ರಂಥದಲ್ಲಿ ತಿಳಿಸಿದ್ದಾರೆ. ಅಚ್ಚಾದ ಪ್ರತಿಯಲ್ಲಿ ಸಾಮಾನ್ಯ ಪಾಟಗಳಿದ್ದು ಇವರು ಬಳಸಿಕೊಂಡಿಲ್ಲ ಎಂದಿದ್ದಾರೆ. ಅಚ್ಚಾದ ಪ್ರತಿ ಎಂದರೆ ಬಹುಷಃ ಎಂ.ಎ. ರಾಮಾನುಜಯ್ಯಂಗಾರ್ ಅವರ ಪ್ರತಿಯೇ ಇರಬಹುದು. ಅದನ್ನು ಇವರು ನೇರವಾಗಿ ತಿಳಿಸಿದ್ದಾರೆ.[೨೭]

[೨೭] ಬಿ.ಎಸ್ ಸಣ್ಣಯ್ಯ. ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ. ಷಟ್ಪದೀ ಕಾವ್ಯಗಳು. ಪುಟ.೧೫೬

೫. "ಗೋವಿಂದ ಕವಿಯ ನಂದಿ ಮಹಾತ್ಮ್ಯ" ಈ ಗ್ರಂಥವು ವಾರ್ಧಕ ಷಟ್ಪದಿಯಲ್ಲಿದ್ದು ೫೦ ಸಂಧಿಗಳನ್ನು ಒಳಗೊಂಡಿದೆ. ನೈಮಿಶಾರಣ್ಯ ವಾಸಿಗಳಾದ " ಶೌನಕ ಪ್ರಮುಖರು ಪುಣ್ಯಜನಕೇತಿಹಾಸಂ ಕೇಳ್ವಭ್ಭೆಯಿಂದ ಸೂತ ಪೌರಾಣಿಕನ ಸ್ಮರಿಸಲಾಕ್ಷಣಂ" ಆತಂ ಬಂದು ನಂದಿಮಾಹರ್ಮ್ಯವನ್ನು ಹೇಳಿದನೆಂದು ಹೇಳಿ ಗ್ರಂಥವನ್ನು ಪ್ರಾಂಭಿಸಿರುವುದಾಗಿ ತಿಳಿಸಿದ್ದಾರೆ. ಇದರ ಮೂಲ ಪ್ರತಿಯು ಮದ್ರಾಸ್ ಗವರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರೇರಿ ಯಲ್ಲಿ ದೊರೆತದ್ದು ಎಂದು ಹೇಳಿರುವುದರಿಂದ ಬಹುಷಃ ಇದು ಒಂದೇ ಪ್ರತಿಯಿಂದ ರಚಿತವಾಗಿರಬೇಕು ಎಂದು ಕಂಡುಬರುತ್ತದೆ.

ಈ **'ನಂದೀ ಮಹಾತ್ಮ್ಯೆ'**ಯನ್ನು **'ಜಿ.ಜಿ.ಮಂಜುನಾಥ್'** ರವರು ೪ ಪ್ರತಿಗಳನ್ನು ಬಳಸಿ ೧೯೮೧ ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಇದರಲ್ಲಿ ಸುದೀರ್ಘ ಪೀಠಿಕಾ ಭಾಗವಿದ್ದು ಪಾಠಾಂತರಗಳೇನು ಕಂಡುಬರುವುದಿಲ್ಲ. ಅಕ್ಷರ ಸ್ಖಲಿತ್ಯಗಳನ್ನೇ ಪಾಠಾಂತರಗಳನ್ನಾಗಿ ಕೊಡಲಾಗಿದೆ. ವಿಶೇಷವಾದ ಅನುಬಂಧ ನೀಡಿದ್ದಾರೆ.[೨೮]

೧೨ ಸಂಧಿಗಳ ಅಚ್ಚಿನ ಪ್ರತಿಯನ್ನು ಬಳಸಿರುವುದಾಗಿ ತಿಳಿಸಿದ್ದು ಅದರಲ್ಲಿ ಎಂ.ಎ ರಾಮನುಜಯ್ಯಂಗಾರ್ ರವರು ಸಂಪಾದಿಸಿದ ಪ್ರತಿಯೂ ಇದ್ದಿರಬಹುದು ಆದರೆ ಇವರು ಅದನ್ನು ಉಲ್ಲೇಖಿಸಿಲ್ಲ. ಅಚ್ಚುಕಟ್ಟಾಗಿ ಅಚ್ಚಾಗಿ ಪ್ರಕಟವಾಗಿದೆ. ಇದಕ್ಕೆ ಎಂ.ಎ. ರಾಮಾನುಜಯಂಗಾರ್ ಅವರ ಪ್ರತಿಯೇ ಅಧಿಕೃತವಾಗಿದೆ ಎನ್ನಬಹುದು.

೬. "ಕವಿ ಗುರುಲಿಂಗವಿಭು ವಿರಚಿತ ಬಿಕ್ಷಾಟನ ಚರಿತೆ" ಈ ಗ್ರಂಥವು ಸಂಸ್ಕೃತದ "ಬಿಕ್ಷಾಟನ ಕಾವ್ಯ" ಎಂಬ ಪ್ರಸಿದ್ಧವಾದ ಕಾವ್ಯದ ಆಧಾರದ ಮೇಲೆ ರಚಿತವಾಗಿರಬೇಕೆಂದು ಕೆಲವು ಶ್ಲೋಕಗಳನ್ನು ಆರಿಸಿಕೊಂಡು ಬರೆದಂತಿದೆ ಎಂದು ಹೇಳಿದ್ದಾರೆ. ಇದು ವಾರ್ಧಿಕ ಷಟ್ಪದಿಯಲ್ಲಿ ಬರೆದಿದ್ದು ಇದರಲ್ಲಿ ೩ ಸಂಧಿಗಳನ್ನು ಹೊಂದಿದ್ದು ಇದೊಂದು 'ಶೃಂಗಾರ ಕಾವ್ಯ' ಎಂದು ಹೇಳಿದ್ದಾರೆ.

ಇದನ್ನು ನಾಲ್ಕು ಪ್ರತಿಗಳ ಸಹಾಯದಿಂದ ಮುದ್ರಿಸಿರುವುದಾಗಿ ತಿಳಿಸಿದ್ದಾರೆ. ಅವುಗಳಲ್ಲಿ ಎರಡು ಟೀಕಾ ಸಮೇತವಾದವು ಮತ್ತೆರಡು ಬರೀ ಮೂಲಮುಳ್ಳದ್ದು. ಮೂಲ ಪ್ರತಿಗಳಲ್ಲಿ ತಮಗೆ ತೋರಿದ ಹಾಗೆ ಪದ್ಯಗಳನ್ನು ತಿದ್ದಿರುವುದಾಗಿ ಅಲ್ಲದೆ ಸ್ವಕೃತವಾದ ಹೊಸ ಪದ್ಯಗಳನ್ನು ಬರೆದು ಸೇರಿಸಿರುವುದಾಗಿ ಹೇಳಿದ್ದಾರೆ. ಈ ನಾಲ್ಕು ಪ್ರತಿಗಳಲ್ಲಿ ಮೂರನ್ನು ಮ।ರಾ। ಮಹದೇವ ಶಾಸ್ತ್ರಿಗಳು ಕಳುಹಿಸಿಕೊಟ್ಟರೆಂದು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾರೆ. ಕೆಲವು ಪಾಠಾಂತರಗಳನ್ನು ಗುರುತಿಸಿದ್ದಾರೆ.

---

[28] ನಂದೀ ಮಹಾತ್ಮ್ಯೆ. ಜಿ.ಜಿ.ಮಂಜುನಾಥ್. ಕನ್ನಡ ಅಧ್ಯಯನ ಸಂಸ್ಥೆ. ಧಾರವಾಡ. ೧೯೮೧

ಉದಾ: ಪುಟ ೧೯ ರಲ್ಲಿ ಪಾಠ "ನೋಡುವೆಂದು ನಡೆತಂದು" ಎಂದಿದ್ದರೆ

ಪಾಠಾಂತರ : "ನೇಳ್ಪಸಂಭ್ರಮವದೇವೊಗಳ್ವೆನು"

ಪುಟ ೪೫ ರಲ್ಲಿ 'ಮಮತೆಯಲಿ ನೆನೆನೆನೆದು ಹಾರೈಸುವಂತೆ'

† 'ಹಾರೈಸುವಂತೆ ರಮಣರು ಲಾಲಿಸಿದರಾದಂತಿಪ್ರಿಯದೆ' ಎಂದಿದೆ

ಪುಟ ೬೫ " ಗಲ್ಲ ಸಂಭ್ರಮಿಸುತ ವನಜನೇತ್ರೆಯರ'

ಪಾ. 'ಗೆಲ್ಲ ಸಂಭ್ರಮಿಸುತಾವನಜವಕ್ತ್ರೆಯರು. ಎಂದು ಹೇಳಿದ್ದಾರೆ'.

ಟೀಕೆ ಟಿಪ್ಪಣಿ

"ಕವಿ ಗುರುಲಿಂಗವಿಭು ವಿರಚಿತ ಬಿಕ್ಷಾಟನ ಚರಿತೆ"ಯ ಲ್ಲಿ ಪ್ರಾಚೀನ ಟೀಕೆ ಯನ್ನು ಒಳಗೊಂಡಿದ್ದು ಈ ಟೀಕು ಬರೆದವನು ಬಗ್ಗೆ ಹೇಳುತ್ತಾ ಬಹುಶ್ರುತನು, ಬಹು ಸಮರ್ಥನಾದವನು ಇದನ್ನು ರಚಿಸಿರಬೇಕು ಎಂದು ಹೇಳುತ್ತಾರೆ. ಈ ಟೀಕು ಪ್ರಸಿದ್ಧವಾದ ರಘುವಂಸೌರಿಗಳಿಗಿರುವ ಪೆದ್ದ ಭಟ್ಟನೆಂದು ಪ್ರಸಿದ್ಧನಾದ ಕೋಲಚೆಲಮಲ್ಲಿನಾಥ ಸೂರಿಯ ಟೀಕೆಗೆ ಸರಿಸಮವಾಗಿದೆ. ಸಾಮಾನ್ಯವಾಗಿ ಕನ್ನಡದ ಪದ್ಯಗಳಿಗೆ ಹೇಗೆ ಅರ್ಥವನ್ನು ಯೋಚಿಸಬೇಕೆಂಬುದನ್ನು ಈ ಟೀಕಿನಿಂದ ಕಲಿಯಬೇಕಗಿದೆ ಎಂದು ಟೀಕಿನ ವಾಕ್ಯ ಶೈಲಿಯೂ ಬಹುರಮಣೀಯವಾಗಿದೆ. ಎಂದು ತಿಳಿಸಿದ್ದಾರೆ.

ಉದಾ: ಪುಟ ೧೩ † ಒಳಪೊಕ್ಕು ತರಿಯೆಂಬ – ಮರದ ಮರೆಯಿಂದ

ಟೀಕೆ † ಒಳಪೊಕ್ಕು ಮರೆಯೆಂಬ ಮೃಗವನ್ನು ಹಿಡಿ ಎಂದೂ ಅರ್ಥವಾಗಬಹುದು.

ಬಿಕ್ಷಾಟನ ಚರಿತೆ ನ್ನು **ಬಿ.ವಿ.ಶಿರೂರ**ರವರು ಗದ್ಯಾನುವಾದ ಮಾಡಿ ೧೯೮೨ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಿದ್ದಾರೆ. ಇದನ್ನು ಪ್ರಕಟಿಸಲು ಎಂ.ಎ.ರಾಮಾನುಜಯ್ಯಂಗಾರ್ ರವರು ಪ್ರಕಟಿಸಿರುವ ಕೃತಿಯನ್ನೇ ಆಧಾರವಾಗಿ ಬಳಸಿದ್ದು ಇದರಲ್ಲಿ ಕವಿಯ ವಿಚಾರವೇ ಕಂಡುಬರುವುದಿಲ್ಲ. ಬೇರೆ ಪ್ರತಿಗಳಾದ ಕನ್ನಡ ಅಧ್ಯಯನ ಪೀಠದಲ್ಲಿನ ತಾಡೋಲೆಯ ಪಾಠಗಳನ್ನು ಬಳಸಿಕೊಂಡಿರುವುದಾಗಿ ತಿಳಿಸಿದ್ದಾರೆ.[೨೯]

೭. **"ಶ್ರೀರಾಮ ಪಟ್ಟಾಭಿಷೇಕಂ"** ಇದನ್ನು ಮಹಾಲಕ್ಷ್ಮಿ ಎಂಬ ಮಹಿಳೆ ರಚಿಸಿರುವುದಾಗಿ ತಿಳಿಸಿದ್ದಾರೆ. ಈಕೆಯು ತಾನು "ಚಾವಡಿ ರಂಗಭಟ್ಟನ ಆತ್ಮಜೆ" ಎಂದೂ ಉಡುಪಿಯವಳೆಂದೂ " ಕನ್ನಡಿತಿ ಚೆಂಗಳದೇವಿಯ" ಇಚ್ಛಾನುಸಾರ ಬರೆದಿರುವುದಾಗಿ ತಿಳಿಸಿದಾರೆ. ಈ ಕೃತಿಯ ರಚನಕಾರ ಮದ್ದಣ ಎಂಬ ಕಾವ್ಯನಾಮದಿಂದ ಪ್ರಸಿದ್ಧಿ ಪಡೆದ ಮ।ರಾ। ನಂದಳಿಗೆ ಲಕ್ಷ್ಮೀನಾರಣಪ್ಪನವರು ಎಂದು

[29] ಬಿಕ್ಷಾಟನ ಚರಿತೆ, ಬಿ.ವಿ.ಶಿರೂರ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೨

ವಿದ್ವಾಂಸರುಗಳು ಸ್ಪಷ್ಟಪಡಿಸಿದ್ದಾರೆ. ವಿಷೇಶವಾಗಿ ಪುಟಗಳ ಮತ್ತು ಸಂಧಿಗಳ ಸಂಖ್ಯೆಯನು ನೀಡಿ ಶೋಧನ ಪತ್ರವನ್ನು ಕೊಟ್ಟಿದ್ದಾರೆ.

ಉದಾ:

೧. ಪುಟ ೨ ಪಙ್ತಿ ೨೧ ಅಶುದ್ಧ ನಮುದಿತದೆ ಶುದ್ಧ ಸಮಚಿತದೆ

೨. ಪುಟ ೨೪ ಪಙ್ತಿ ೨೯ ಕೀಲ್ಸಿರಿಯ ಕೀಲ್ವಿರಿಯ

- ರಲ್ಲಿ ಎಂ.ಎ. ರಾಮಾನುಜಯ್ಯಂಗಾರ್ ೪೮ ಪುಟಗಳ ಸುದೀರ್ಘ ಟೀಕೆಯೊಂದಿಗೆ ಇದರ ದ್ವಿತೀಯ ಮುದ್ರಣವನ್ನು ಪ್ರಕಟಿಸಿದ್ದಾರೆ.

ಈ ಗ್ರಂಥವನ್ನು ಪ್ರಕಟಿಸಲು ಎಷ್ಟು ಪ್ರತಿ ಬಳಸಿದ್ದಾರೆ ಎಂಬುದಕ್ಕೆ ಸರಿಯಾದ ಮಾಹಿತಿ ದೊರೆತಿಲ್ಲ. ಆದರೆ ಈ ಪ್ರತಿಯನ್ನು ಉಡುಪಿಯ ಮ।ರಾ। ನಂದಳಿಗೆ ಲಕ್ಷ್ಮೀನಾರಣಪ್ಪನವರು ಕಳಿಹಿಸಿಕೊಟ್ಟರೆಂದು ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.

ಪ್ರಥಮ ಮುದ್ರಣದಲ್ಲಿನ ಪಾಠಾಂತರಗಳು

ಉದಾ:

ಪುಟ ೭ ರಲ್ಲಿ **$** * * * *

ಅಡಿಟಿಪ್ಪಣಿಯಲ್ಲಿ ಪಾ: ಇಲ್ಲಿ ಗ್ರಂಥಪಾತವಾಗಿದೆ

ಟೀಕೆ ಟಿಪ್ಪಣಿ

"ಶ್ರೀರಾಮ ಪಟ್ಟಾಭಿಷೇಕಂ" ದಲ್ಲಿ ೪೮ ಪುಟಗಳಲ್ಲಿ ಸಂದಿಯಲ್ಲಿನ ಪ್ರತಿ ಪದ್ಯಕ್ಕೂ ಟೀಕೆ ರಚಿಸಿದ್ದಾರೆ.

ಉದಾಹಣೆಗೆ:

ನಾಂದೀ ಸಂಧಿ

ಪದ್ಯ ೧ ಕವಿಯು ಈ ಪದ್ಯದಲ್ಲಿ ಶ್ಲೇಷೆಯಿಂದ ಕಥಾ ನಾಯಕನಾಗಿಯೂ ವಿಷ್ಣುವಿನ ಅವತಾರವಾಗಿಯೂ ಇರುವ ಶ್ರೀರಾಮನನ್ನೂ, ತನಗೆ ಉಪಾದ್ಯದೇವತೆಯಾದ ಶಿವನನ್ನೂ ಕುರಿತು ಪ್ರಾರ್ಥನೆ ಮಾಡುತ್ತಾಳೆ.

ಪೀಠಿಕಾ ಸಂಧಿ

ಈ ಪದ್ಯದ ಪೂರ್ವಾಧ ಉತ್ತರಾರ್ಧಗಳು ಒಂದೇ ಆಗಿರುವುದರಿಂದ ಅರ್ಧಸಮ ಯಮಕವೆಂಬ ಶಬ್ದಾಲಂಕಾರಕ್ಕೆ ಉದಾಹರಣೆ ಎಂದು ತಿಳಿಸಿರುವುದರಿಂದ ಈ ಕೃತಿಯಲ್ಲಿ ಅಲಂಕಾರಗಳನ್ನು ಗಮನಿಸಿರುವುದು ಕಂಡುಬರುತ್ತದೆ. ಜೊತೆಗೆ ಇನ್ನೂ ವಿಶೇಷ ಸೂಚನೆಗಳನ್ನೂ ಈ ಟೀಕೆಯಲ್ಲಿ ಹೇಳಿದ್ದಾರೆ.

ಮೂರನೆ ಸಂಧಿ ಸೂಚನೆ ಅಷ್ಟಾಹಿಕುಲಪೋಷನು – ನಾಗಗಳ ಎಂದು ಕುಲಕ್ಕೂ ಪೋಷಕನಾದ * * * ಇಲ್ಲಿ ಐದು ಪದ್ಯಗಳು ಪಾತವಾಗಿ ಹೋಗಿವೆ ಎಂದು ಹೇಳದ್ದಾರೆ. ಈ ಸಂಧಿಯಲ್ಲಿ ೬ ಪದ್ಯದಿಂದ ಪ್ರಾರಂಭವಾಗುವುದರಿಂದ ೬ ಪದ್ಯದಿಂದಲ್ಲೇ ಟೀಕೆಯನ್ನು ಬರೆದಿದ್ದಾರೆ.

ಹೀಗೆ ಇನ್ನೂ ವಿಶೇಷವಾದಂತಹ **ಪದಗಳಿಗೆ ಅರ್ಥ**

ಉದಾ: ಪುಟ ೧೮ ರ ೧೯ ನೇ ಪದ್ಯದಲ್ಲಿ ಕೊಡನಣುಗ–ಕುಂಭಸಂಭವನಾದ ಅಗಸ್ತ್ಯ **ಪದವಿಭಾಗ ಕ್ರಮ** ಉದಾ: ಪುಟ ೨೦ ರ ೨೬ ನೇ ಪದ್ಯದಲ್ಲಿ ಕಟ್ಟೆಸಕದಿಂ= ಕಡಿದು+ ಎಸಕಂ – ಮಹಾಸಾಹಸದಿಂದ

ವ್ಯಾಕರಣ ವಿಚಾರ ಪುಟ ೨೩ರ ೬೩ ಪದ್ಯ ಸೈ ಪಿಡಿದು–ಚೆನ್ನಾಗಿ ಹಿಡಿದುಕೊಂಡು: ಸೈ ಎಂಬ ಉಪಸರ್ಗವು ಆಧಿಕ್ಯಾರ್ಥದಲ್ಲಿ ದಾತುಗಳ ಹಿಂದೆ ಸೇರುವುದುಂಟು. ಉಪ್ಪರಂ ಎಂಬುದು ಅವ್ಯಯ. ಸನ್ನೆಯ ಕ್ಕೆ ತತ್ಸಮ ಸನ್ನಾಹಾ ಎಂದೂ

ವೃತ್ತ ಲಕ್ಷಣದಲ್ಲಿ ಲಕ್ಷ್ಯ ಲಕ್ಷಣ ಸಮನ್ವಯವನ್ನು ಷಟ್ಪದಿಗಳ ಪಾದಗಳಲ್ಲಿ ಬರುವ ಮಾತ್ರೆಯ. ಲಘುಗುರು ವಿನ್ಯಾಸದಿಂದ ಪ್ರಸ್ತಾರ ಹಾಗಿ ಉದಾರಹಣೆ ಸಹಿತ ತೋರಿಸಿದ್ದಾರೆ.

ಪ್ರೊ. ಜಿ. ವೆಂಕಟಸುಬ್ಬಯ್ಯ ನವರು ಶ್ರೀ ರಾಮ ಪಟ್ಟಾಭಿಷೇಕಂ ಎಂಬ ಕೃತಿಯನ್ನು ೧೯೮೭ ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟಿಸಿದ್ದಾರೆ. ಇವರ ಬಳಿ ಮುದ್ದಣನ ೩ ಕೃತಿಗ ಪ್ರಥಮ ಮುದ್ರಣವೇ ಇದ್ದು ಅದಕ್ಕೂ ಕವಿಯ ಹಸ್ತಪ್ರತಿ (ಈಗ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ) ಮುದ್ರಿತ ಪ್ರತಿಗೂ ಬಹಳ ವ್ಯತ್ಯಾಸವಿದ್ದು ಅದನ್ನು ಅವುಗಳನ್ನು ಪರಿಶೀಲಿಸಿ ಮುದ್ರಿಸಿರುವುದಾಗಿ ತಿಳಸಿದ್ದಾರೆ. ರಾಮಾನುಜಯ್ಯಂಗಾರ್ ರವರು ಇದನ್ನು ಮುದ್ರಿಸುವಾಗ ಅನೇಕ ಕಡೆ ತಿದ್ದು ಪಾಟು ಮಾಡಿದ್ದು ಕೆಲವು ಕಡೆ ಅಶ್ಲೀಲವೆಂದೂ ಅನಗತ್ಯವೆಂದೂ ಬಿಟ್ಟಿರುವುದು ಗೋಚರವಾಗಿ ಇವರು ಮೂಲಪಾಠವನ್ನೇ ಮುದ್ರಿಸಿರುವುದಾಗಿ ತಿಳಸಿದ್ದಾರೆ. ಬಿಟ್ಟ ಭಾಗಗಳನ್ನು ಸೇರಿಸಿ ಕವಿ ಸ್ಪಷ್ಟವಾಗಿ ತಪ್ಪಿದ್ದಾನೋ ಅಲ್ಲಿ ಸರಿಯಾಗಿ ಶಬ್ದ ಸ್ವರೂಪವನ್ನು ಪಾಠದಲ್ಲಿ ಮುದ್ರಿಸಿ ಪಕ್ಕದಲ್ಲಿ ಹಸ್ತಪ್ರತಿಯಲ್ಲಿರುವಂತೆ [ ] ಇಂಥ ಕಂಸಗಳಲ್ಲಿ ಸೂಚಿಸಿದೆ ಎಂದಿದ್ದಾರೆ.[೩೦]

ಮುದ್ದಣ ಲಕ್ಷ್ಮೀನಾರಾಯಣಪ್ಪ ಇಬ್ಬರೂ ಒಬ್ಬರೇ ಎಂದು ತಿಳದರೂ ಪದ್ಯಗಳ ಕಡೆಯಲ್ಲಿ ಮಹಾಲಕ್ಷ್ಮಿ ಎಂದು ಇರುವುದು ಅದರ ಕವಿ ಹೆಸರೆ ಎಂದು ಮುದ್ರಿಸಿದ್ದಾರೆ. ಇದರ ಬಗ್ಗೆ ಹಲವಾರು ಚರ್ಚೆಗಳು ನಡೆದಿದ್ದು ೭–೮ ಕಾರಣವನ್ನು ನಿರೂಪಿಸಿ ಅದಕ್ಕೆ ಯಾವುದೇ ಪ್ರತಿಕ್ರಿಯೆಗಳು ಬರದ ಕಾರಣ ಮಹಾಲಕ್ಷ್ಮಿ ಹೆಸರನ್ನೇ ಮುದ್ರಿಸಿರುವುದಾಗಿ ತಿಳಸಿದ್ದಾರೆ.[೩೧]

---

30 ಶ್ರೀರಾಮಾಪಟ್ಟಾಭಿಷೇಕಂ ಮುದ್ದಣ ಭಂಡಾರ, ಪ್ರೊ..ಜಿ.ವೆಂಕಟಸುಬ್ಬಯ್ಯ, ಸಂಪುಟ–೧

31 ಸಾಹಿತ್ಯೋಪಾಸಕರು– ರಾಮಾನುಜಯ್ಯಂಗಾರ್ ರವರ ಸ್ವತಂತ್ರಕೃತಿಗಳು, ಎಂ.ಆರ್. ನರಸಿಂಹನ್ ಪುಟ ೩೦೫

೮. **"ರಾಘವಾಂಕನ ಹರಿಶ್ಚಂದ್ರಕಾವ್ಯ"(ವಾರ್ಧಿಕ)** ಇದರ ಕಾಥಾರಂಭದ ಕೃತಿಯು ನನಗೆ ಲಭ್ಯವಾಗಿದ್ದು ಹೆಚ್ಚಿನ ವಿವರಗಳೇನೂ ಇದರಿಂದ ದೊರೆತಿಲ್ಲ.

ಇದರಲ್ಲಿ ಕೆಲವು ವಿಶೇಷತೆಗಳಿವೆ ಅವುಗಳನ್ನು ಇಲ್ಲಿ ಗುರುತಿಸಲಾಗಿದೆ

೧೧೮ ರಲ್ಲಿ † * * * * *

†ಈ ಕಡೆ ಒಂದು ಮಾತೃಕೆಯಲ್ಲಿ " ಅಂತು ಅಷ್ಟಮಸ್ಥಳಂ ಸಂಪೂರ್ಣಂ" ಎಂದು ಇರುವುದಲ್ಲದೆ ಇಲ್ಲಿಂದ ಮುಂದಕ್ಕೆ " ಒಂಭತ್ತನೆ ಸ್ಥಲಂ" ಎಂದು ಆರಂಭಿಸಿ

ಸೂಚನೆ " ಕೌಶಕಂಗಖಿಳ ಸಾಮ್ರಾಜ್ಯಮಂ ನೆರೆ ಸಾಲಿಟ।

ಯೋಸರಿದರಸ ವನವಾಸಕ್ಕೆ ನಡೆತರಲು।

ಗಾಸಿಮಾಡುವೆನೆಂದು ಮುನಿಕೃತಕಮಂ ನೆನೆಯೆ ಕಳೆದ ಸತ್ಯರದೇವನು॥

ಎಂಬ ಸೂಚನೆಯ ಪದ್ಯವೊಂದಿದೆ ಮತ್ತು ಈ ಮಾತೃಕೆಯ ಪ್ರಕಾರ ೯ನೆಯ ಸ್ಥಳವು ಸೂಚನೆಯ ಪದ್ಯವು ಆ ಕಡೆಇಲ್ಲ. ಎಂದು ಗುರುತಿಸಿದ್ದಾರೆ.

೧೯೭ † ಈ ಕಡೆ ಒಂದು ಪ್ರತಿಯಲ್ಲಿ ಮಾತ್ರ "ಹದಿಮೂಱನೆಯ ಸಂಧಿ" ಎಂದು ಬಂದಿದೆ ಆದರು ಸೂಚನೆಯ ಪದ್ಯಾರ್ಥವಿಲ್ಲ. ಎಂದು ಈರೀತಿ ಅನೇಕಕಡೆಗಳಲ್ಲಿ ಅಡಿ ಟಿಪ್ಪಣಿಯಲ್ಲಿ ಸೂಚಿತವಾಗಿದೆ.

ಇದರಲ್ಲಿ ಪಾಠಾಂತರಗಳನ್ನು ಅಡಿ ಟಿಪ್ಪಣಿಯಲ್ಲಿ ನೀಡಿದ್ದಾರೆ. ಪುಟ ೫೯ ರಲ್ಲಿ † "ಪುಣ್ಯಗರ್ಭಮತಿ ಶೈವಸುಖೋದಯದಲ್ಲಿ ಮೇನೆಯಾ।

ಇದರ ಪಾಠಾಂತರವು ಗರ್ಭ ಮೂರ್ಜಿತವಿಶಾಲಖೋದರದಲ್ಲಿ ಎಂದಿದೆ.

ಪುಟ ೧೪೫ 'ರಕ್ಕಸರಸಂ ನಿರುತಿ ನಿರುತವೆಲೆದನುಜೇಂದ್ರಾ।

ಪಾಠಾಂತರವು ಕರ್ಕಶಕ್ಕೆ ಸನವನೆ ನಿರುತಿ ನಿರುಪಂದನುಜಾ।

ಪುಟ ೧೮೭ "ಮೆನಲ್ ಮಿಗೆ' ಪಾಠಾಂತರ 'ಮೆನುತ್ತವೆ' ಎಂದು ನೀಡಿದ್ದಾರೆ.

ರಾಘವಾಂಕನ **ಹರಿಶ್ಚಂದ್ರ ಕಾವ್ಯ ಸಂಗ್ರಹವನ್ನು ಟಿ.ಎಸ್ ವೆಂಕಣ್ಣಯ್ಯ ಮತ್ತು ಎ.ಆರ್ ಕೃಷ್ಣಶಾಸ್ತ್ರಿಗಳು** ಸಂಪಾಸಿದಿ ೧೯೫೦ ರಲ್ಲಿ ಬಿ.ಎಂ.ಶ್ರೀಯವರ ಮುನ್ನುಡಿಯೊಂದಿಗೆ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. ಇದರಲ್ಲಿ ಸುದೀರ್ಘವಾದ ೬೭ ಪುಟಗಳ ಪೀಠಿಕಾ ಭಾಗದಲ್ಲಿ ಶೃತಿ, ಪುರಾಣ, ಇತಿಹಾಸಗಳಲ್ಲಿ ಕಥೆ ಹೇಗೆ ಮೂಡಿಬಂದಿದೆ ಎಂಬುದನ್ನು ತೋರಿಸಿ ಸಂಕ್ಷಿಪ್ತವಾದ ಕಾವ್ಯ ವಿಮರ್ಶೆ ಮಾಡಿರುವುದು ಕಂಡುಬರುತ್ತದೆ.

ಇದಕ್ಕೆ ಐದು ಪ್ರತಿಗಳನ್ನು ಬಳಸಿಕೊಂಡಿರುವುದಾಗಿ ತಿಳಿಸಿದ್ದು ೪ ಓಲೆ ಪ್ರತಿಗಳಾದ ಕ.ಖ.ಗ.ಘ ಎಂಬ ಸಂಕೇತ ಪ್ರತಿಗಳು ಮತ್ತು ಇನ್ನೊಂದು ಎಂ.ಎ. ರಾಮಾನುಜಯ್ಯಂಗಾರ್ ರವರ ಮುದ್ರಿತ ಪ್ರತಿ 'ಪ' ಎಂಬ ಸಂಕೇತದ್ದು. ಮತ್ತೊಂದು 'ಘ' ಎಂಬ ಸಂಕೇತದ ಮೈಸೂರು ಓರಿಯಂಟಲ್ ಲೈಬ್ರರಿಯ ಪ್ರತಿ. ಇವುಗಳಲ್ಲಿ ಕ. ಖ ಪ್ರತಿಯ ಪಾಠಗಳನ್ನೇ ಹೆಚ್ಚಾಗಿ ಬಳಸಿರುವುದಾಗಿ ತಿಳಿಸಿದ್ದಾರೆ. ರಾಘವಾಂಕನು ರಚಿಸಿದ ಮೂಲಕೃತಿ ಇದೇಯೇನೋ ಎನ್ನುವಷ್ಟರ ಮಟ್ಟಿಗೆ ಸಂಗ್ರಹಕಾರ್ಯ ಯಶಸ್ವಿಯಾಗಿದೆ ಎನ್ನುತ್ತಾರೆ. ಅಲ್ಲಲ್ಲಿ ಪಾಠಂತರಗಳನ್ನು ನೀಡಿದ್ದು, ಕೊನೆಯಲ್ಲಿ ಶಬ್ದಕೋಶವನ್ನು ಕೊಟ್ಟಿ ಅಚ್ಚುಕಟ್ಟಾಗಿ ಮುದ್ರಿಸಿದ್ದಾರೆ. ಇವರ ಈ ಗ್ರಂಥಕ್ಕೆ ರಾಮಾನುಜಯ್ಯಂಗಾರ್ ರವರ ಗ್ರಂಥವೇ ಮೂಲ ಎಂದು ಅವರೆ ತಿಳಿಸಿರುವುದರಿಂದ ಎಂ.ಎ. ರಾಮಾನುಜಯ್ಯಂಗಾರ್ ಅವರ ಸಂಪಾದನೆಯ ಶ್ರೇಷ್ಠತೆಗೆ ಎರಡುಮಾತಿಲ್ಲ ಎನ್ನಬಹುದು.[೩೨]

ರಾಘವಾಂಕ ವಿರಚಿತ **ಹರಿಶ್ಚಂದ್ರಕಾವ್ಯಂ** ಎಂಬುದನ್ನು ಎನ್ ಬಸವರಾಧ್ಯ ಮತ್ತು **ಪಂಡಿತ ಎಸ್. ಬಸಪ್ಪ** ನವರು ಸೇರಿ ೧೯೫೫ರಲ್ಲಿ ಪ್ರಥಮ ಮುದ್ರಣವನ್ನು ಮತ್ತು ೧೯೬೯ರಲ್ಲಿ ದ್ವಿತೀಯ ಮುದ್ರಣವನ್ನು ಮೈಸೂರಿನ ಶಾರದಾ ಮಂದಿರದಿಂದ ಪ್ರಕಟಿಸಿದ್ದಾರೆ. ಇವರ ಈ ಸಂಪಾದಿತ ಕೃತಿಯಲ್ಲಿ ೪೭ ಪುಟಗಳ ಪೀಠಿಕೆ ಇದ್ದು ಇದರಲ್ಲಿ ಇತರ ಕೃತಿಗಳ ಆಧಾರದ ಮೇಲೆ ಕವಿ ಜೀವನ ಚರಿತ್ರೆ. ಸ್ಥಳ. ಕಾಲದ ಬಗ್ಗೆ ಚರ್ಚಿಸಲಾಗಿದೆ. ಜೊತೆಗೆ ಕಥೆಯ ಪೂರ್ವವೃತ್ತಾಂತ. ಪುರಾಣಗಳಲ್ಲಿ ಕಂಡುಬರುವ ಕಥಾ ವ್ಯತ್ಯಾಸಗಳು. ಅನುವಾದ ಗ್ರಂಥಗಳು ಮತ್ತು ಕಾವ್ಯವಿಮರ್ಶೆಯನ್ನೂ ಒಳಗೊಂಡಿದೆ. ಇದೆಲ್ಲದರ ಜೊತೆಗೆ ಬಹುಮುಖ್ಯವಾದ ವಿಷಯಗಳೆಂದರೆ ಕಾವ್ಯದಲ್ಲಿ ಬಳಕೆಯಾಗಿರುವ ಶಬ್ದರೂಪಗಳು. ಪರಿಷ್ಕರಣಕ್ಕೆ ಉಪಯೋಗಿಸಿಕೊಂಡಿರುವ ಪ್ರತಿಗಳ ಸಂಕ್ಷಿಪ್ತ ಚರಿತ್ರೆ ಮತ್ತು ಸ್ಥಲ-ಸಂಧಿ. ಪರಿಶಿಷ್ಟ ಮತ್ತು ಅರ್ಥಕೋಶದ ಬಗ್ಗೆ ಸಂಕ್ಷಿಪ್ತ ವಿವರವನ್ನು ನೀಡಿದ್ದಾರೆ. ಇದರ ಕೊನೆಯಲ್ಲಿ ಪದ್ಯಗಳ ಅಕಾರದಿಯನ್ನು ನೀಡಿದ್ದಾರೆ.

ಈ ಗ್ರಂಥಕ್ಕೆ ಇವರು ಬಳಸಿಕೊಂಡ ೬ ಪ್ರತಿಯ ವಿವರ ಕೊಟ್ಟಿರುವುದು ಬಹಳ ವಿಶಿಷ್ಟವಾಗಿದೆ ಇದು ಉತ್ತಮವಾಗಿದ್ದು ಪ್ರತಿಗಳು ಎಲ್ಲಿಂದ ದೊರೆತವು, ಹೇಗೆ ದೊರೆಯಿತು. ಎಂಬ ಮಾಹಿತಿಯನ್ನು ಉತ್ತಮವಾಗಿ ನೀಡಿದ್ದಾರೆ. ಇವರು ಈ ೬ ಪ್ರತಿಯನ್ನು ಸರ್ವಶ್ರೇಷ್ಟವಲ್ಲ ಎಂದಿದ್ದು ಆಯ ಪ್ರತಿಗಳನ್ನು ಅಗತ್ಯವಿರುವ ಕಡೆ ಬಳಸಿಕೊಳ್ಳಲಾಗಿದೆ ಎಂದಿದ್ದಾರೆ. ಎಲ್ಲ ಪ್ರತಿಗಳ ಪಾಠವನ್ನು ಅಡಿ ಟಿಪ್ಪಣಿಯಲ್ಲಿ ನೀಡಿದ್ದು [ ] ಈ ರೀತಿಯ ಚೌಕಾಕಾರದ ಕಂಸದಲ್ಲಿ ಉಪಯೋಗಿಸಿರುವುದು ಸಂಪಾದಕರ ಪಾಠ ಎಂದಿದ್ದಾರೆ. ಸ್ಪಷ್ಟವಾಗಿಲ್ಲದರ ಕಡೆಗಳಲ್ಲಿ ಪ್ರಶ್ನಾರ್ಥಕ ಚಿಹ್ನೆ ಮತ್ತು ಇನ್ನು ಕೆಲವು ವಿಶೇಷ ಚಿಹ್ನೆಗಳನ್ನು

32 'ಹರಿಶ್ಚಂದ್ರ ಕಾವ್ಯ ಸಂಗ್ರಹ'. ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರೀ. ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು, ೧೯೫೦.

ಬಳಸಿರುವುದು ಗಮನಾರ್ಹವಾಗಿದೆ.[೩೩] ಇವರು ಬಳಸಿರುವ ೬ ಪ್ರತಿಯಲ್ಲಿ ರಾಮಾನುಜಯ್ಯಂಗಾರ್ ಪ್ರತಿಯನ್ನು ಬಳಸಿಕೊಂಡಿದ್ದು ಅದರ ೧೪ ಸ್ಥಲಗಳಲ್ಲಿ ಗ್ರಂಥಪಾಠ ಸಾಧಾರಣವಾಗಿದ್ದು, ಕಾವ್ಯ ಸಂಪೂರ್ಣವಾಗಿ ಮುದ್ರಿತವಾಗಿದೆ ಮತ್ತು ಶಕಟರೇಫ ಪ್ರಯೋಗಮಾಡಿದ್ದಾರೆ ಎಂದು ಗುರುತಿಸಿದ್ದಾರೆ.

೯ **"ತಿರುಮಲೆ ವೈದ್ಯನ ಉತ್ತರ ರಾಮಾಯಣಂ"** ಈ ಕೃತಿಯ ಬಗ್ಗೆ ಸಾಕಷ್ಟು ಚರ್ಚೆಗಳು ಇದ್ದು ಇರರಲ್ಲಿ ೨೦ ಸಂಧಿ, ೧೦೨೧ ಪದ್ಯಗಳಿವೆ ಎಂದು ವಾಲ್ಮೀಕಿ ಮಹರ್ಷಿ ಪ್ರಣೀತವಾದ ಉತ್ತರರಾಮಾಯದ ಆಧಾರದ ಮೇಲೆಯೇ ಈ ಗ್ರಂಥವು ರಚಿತವಾಗಿದೆ ಎಂದು ತಿಳಿಸಿರುವುದಾಗಿ ಹೇಳಿದ್ದಾರೆ. ಈ ಗ್ರಂಥದಲ್ಲಿ ವಿಶೇಷವಾಗಿ ಅಲಂಕಾರಾಡಂಬರಗಳು ಇಲ್ಲದಿರುವುದರಿಂದ ಷಟ್ಪದಿ ಗ್ರಂಥಗಳನ್ನು ಅಭ್ಯಾಸಮಾಡುವವರಿಗೆ,ಇದು ಅತ್ಯಂತ ಉಪಯೋಗ ಎಂದಿದ್ದಾನೆ. ಎರಡು ಪ್ರತಿಗಳಿಂದ ಮುದ್ರಿಸಿದ್ದು
೧. ಓಲೆಪತ್ರಿ: ಆ ಪ್ರತಿಯ ಕೊನೆಯಲ್ಲಿ ದುರ್ಮತಿ ಸಂತ್ಸರದ ಆಷಾಢ ಶುದ್ಧ ೫ ಮಂಗಳವಾರದ ದಿವಸ ಬರೆಯಲ್ಪಟ್ಟಿತು ಎಂದಿದೆ. ಆದರಿಂದ ಇದು ಸುಮಾರು ೭೦ ರ ವರ್ಷಕ್ಕೆ ಹಿಂದಿನ ಪ್ರತಿಯಾಗಿದೆ ಎಂದಿದ್ದಾರೆ.
೨. ಕಾಗದದ ಪ್ರತಿ : ಇದು ಗೌರ್ನಮೆಂಟ್ ಓರಿಯಂಟಲ್ ಲೈಬ್ರೆರಿಯದು ಎಂದು ತಿಳಿಸಿ ಈ ಪ್ರತಿಯನ್ನು ಕಳುಹಿಸಿಕೊಟ್ಟ ಕ್ಯೂರೇಟರ್ ಮಹದೇವಶಾಸ್ತ್ರೀಗಳಿಗೂ. ಗ್ರಂಥವನ್ನು ಬರೆದು ಅಲ್ಲಲ್ಲಿ ಬಿದ್ದಿದ್ದ ಸ್ಖಾಲಿತ್ಯಗಳನ್ನು ಪರಿಶೋಧಿಸಿಕೊಟ್ಟುದಕ್ಕಾಗಿ ಮ॥ ರಾ॥ ಎಸ್.ಜಿ. ಗೋವಿಂದರಾಜಯ್ಯಂಗಾರ್ಯರಿಗೂ ಕೃತಜ್ಞನತೆಯನ್ನು ಸಲ್ಲಿಸಿದ್ದಾರೆ. ಇದನ್ನು ಪರಿಶೋಧಿಸಿ ಗ್ರಂಥಪಾತಗಳನ್ನು ಸ್ಖಾಲಿತ್ಯಗಳಿದ್ದು ಯಾವುದೇ ಪಾಠಾಂತರವು ಕಂಡುಬಂದಿಲ್ಲ.

ಇದು ಈವರೆಗೆ ಪುನರ್ ಮುದ್ರಣ/ ಪುನರ್ ಸಂಪಾದನೆ ಆಗಿಲ್ಲದಿರುವುದರಿಂದ ಇದೇ ಅಧಿಕೃತತೆಯನ್ನು ಪಡೆದಿರುವುದು ಎಂ.ಎ.ರಾಮಾನುಜಯ್ಯಂಗಾರ್ ಅವರ ಗ್ರಂಥಸಂಪಾನೆಯ ಮಹತ್ವಕ್ಕೆ ಉದಾಹರಣೆಯಾಗಿದೆ.

[33] 'ಹರಿಶ್ಚಂದ್ರ ಕಾವ್ಯ ರಾಘವಾಂಕ ವಿರಚಿತ' ಎಸ್. ಬಸವಾರಾಧ್ಯ ಮತ್ತು ಪಂಡಿತ ಎಸ್. ಬಸಪ್ಪ. ಶಾರದಾ ಮಂದಿರ. ಮೈಸೂರು, ೧೯೬೯.

೩. ಕೀರ್ತನೆಗಳು

ಕನ್ನಡ ಸಾಹಿತ್ಯದಲ್ಲಿ ದಾಸ ಸಾಹಿತ್ಯ ಎಂದು ಗುರುತಿಸಬಹುದಾದ ಭಕ್ತಿ ವೈರಾಗ್ಯಗಳನ್ನು ಜಗತ್ತಿಗೆ ಸಾರಿದ ಕೃತಿ ಎಂದರೆ ಕೀರ್ತನೆಗಳು. ಇಂತಹ ಕೀರ್ತನೆಗಳನ್ನು ದಾಸವರೇಣ್ಯರು ರಚಿಸಿದಂತಹ ಕೃತಿಗಳನ್ನು ವಿದ್ವಾಂಸರು ಪ್ರಕಟಿಸಿ ಜನಸಾಮಾನ್ಯರನ್ನು ಮುಟ್ಟುವಂತೆ ಮಾಡಿದ್ದಾರೆ. ಇಂತಹ ಕೀರ್ತನೆಗಳನ್ನು ಸಂಪಾದಿಸಿ ಪ್ರಕಟಿಸಿದವರಲ್ಲಿ ಎಂ.ಎ.ರಾಮಾನುಜಯ್ಯಂಗಾರ್ ರವರೂ ಒಬ್ಬರು. ಚಿಕದೇವರಾಯನ 'ಗೀತಗೋಪಾಲ ಪ್ರಬಂಧ' ಎನ್ನುವ ಕೀರ್ತನೆಯನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

೧ **"ಶ್ರೀ ಗೀತಗೋಪಾಲ" ಇದನ್ನು** ಚಿಕದೇವ ಮಹಾರಾಜರಿಂದ ರಚಿಸಲ್ಪಟ್ಟ "ದಿವ್ಯಪ್ರಬಂಧಗಳು" ಎಂಬ ಗ್ರಂಥದಿಂದ ಆರಿಸಲ್ಪಟ್ಟಿದ್ದು ಎಂದು ತಿಳಿಸಿದ್ದಾರೆ.

ಈ ಗ್ರಂಥದಲ್ಲಿ ಪೂರ್ವ ಉತ್ತರ ಎಂದು ಎರಡು ಭಾಗಗಳು ಹೊಂದಿದ್ದು ಏಳೇಳು ಖಂಡಗಳದ್ದು ಪ್ರತಿ ಖಂಡಕ್ಕೂ " ಸಪ್ತಪದಿ" ಎಂಬ ಹೆಸರನ್ನು ಕೊಟ್ಟಿದಾರೆಂದು ಉಲ್ಲೇಖಿಸಿದ್ದಾರೆ. ಇದು ಸಂಗೀತ ಸರಣಿಯಲ್ಲಿ ಹೇಳಲ್ಪಟಿದೆಯೆಂದು ತಿಳಿಸುತ್ತಾರೆ.

ಪ್ರತಿಯೊಂದು ಕೀರ್ತನೆಯು ಪಲ್ಲವಿ ಚರಣಗಳನ್ನು ಹೊಂದಿದ್ದು ಹಾಡಲು ಅನುಕೂಲವಾಗುವುದಕ್ಕೆ ತಾಳ. ರಾಗಗಳನ್ನು ನಮೂದಿಸಿದ್ದು ಆಯಾ ಕೀರ್ತನೆಗಳ ತಾತ್ಪರ್ಯವನ್ನು ಒಂದೊಂದು ಕಂದಗಳಲ್ಲಿ ಕೊಟ್ಟಿರುವ ವಿಚಾರವನ್ನು ಉಲ್ಲೇಖಿಸುತ್ತಾರೆ.

ಟೀಕೆ ಮತ್ತು ಪಾಠಂತರಗಳನ್ನು ನೀಡಿರುವುದಾಗಿ ಹೇಳಿದ್ದಾರೆ. ಆದರೆ ಕೃತಿಯಲ್ಲಿ ಕಂಡುಬರುವುದಿಲ್ಲ.

ಎಷ್ಟು ಪ್ರತಿಗಳನ್ನು ಬಳಸಿ ಮುದ್ರಿಸಿದ್ದಾರೆ ಎಂಬ ವಿಚಾರವನ್ನು ತಿಳಿಸಿಲ್ಲ.

ಪುಟ ೨೧ ರಲ್ಲಿ ರಾಗದ ಬಗ್ಗೆ ಹೇಳಿದ್ದಾರೆ ಅದು "ರಾಗ-ಕನ್ನಡನಾಳ್" ಎಂದು ಪಾಠದಲ್ಲಿದೆ ಅಡಿ ಟಿಪ್ಪಣಿಯಲ್ಲಿ "ನೀಲಾಂಬರಿ" ಎಂದು ಒಂದು ಪ್ರತಿಯಲ್ಲಿದೆ ಎಂದಿದ್ದಾರೆ.

ಈ ಕೃತಿಯ ರಚನಾಕಾರರ ಬಗ್ಗೆ ಸಾಕಷ್ಟು ಚರ್ಚೆಗಳು ಮೂಡಿ ಬಂದು ಇತ್ತೀಚಿನ ವಿದ್ವಾಂಸರೊಬ್ಬರು ಇದನ್ನು ತಿರುಮಲಾರ್ಯನೆ ಇದರ ರಚನಕಾರ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಇದು ಚಿಕದೇವರಾಜನನ್ನು ಸ್ತುತಿಸುವಂತ ಕೀರ್ತನೆಯಾದುದರಿಂದ ರಾಜನ್ನು ತನ್ನ ಸ್ತುತಿಯನ್ನು ತಾನೇ ಮಾಡಿಕೊಳ್ಳಲಾರ ಆದ್ದರಿಂದ ಇದು "ತಿರುಮಲೆಯಾರ್ಯರ ದಿವ್ಯಕೃತಿಯನಿದ ಪಾಡುವೆನು"[೩೪] ಎಂದು ಈ ಕೀರ್ತನೆಯಲ್ಲಿಯೆ ಸ್ಪಷ್ಟವಾಗಿ ಹೇಳಿರುವುದೆ ಇದಕ್ಕೆ ಸಾಕ್ಷಿಯಾಗಿದೆ.

'ಗೀತಗೋಪಾಲ'ವು ಏಳು ಸಪ್ತಪದಿಗಳಲ್ಲಿ ರಚಿತವಾದ ಭಕ್ತಿಗೀತಗಳ ಸಂಗ್ರಹ. " ಹರಿಸಂಕೀರ್ತನಮೊಂದೇ ಪರಗತಿಗನುಕೂಲಮೆಂದು ನಿರವಿಸಿ ನೆಗಟ್ದಿಂ. ತೊಡರ್ದಿರೆ ನುಡಿ

---

[34] ಕನ್ನಡ ಸಾಹಿತ್ಯ ಚರಿತ್ರೆ: ಒಡೆಯರಕಾಲದ ಬ್ರಾಹ್ಮಣ ಸಾಹಿತ್ಯ: ರಂ.ಶ್ರೀ. ಮುಗಳಿ ಪುಟ ೨೩೮

ನುಣ್ಣರಗಳ ಬೆಡಂಗು ಮನಮೊಲ್ದು ಗೀತಗೋಪಾಲವೆಸರ್ವಡೆದು" " ಒಳ್ಗನ್ನಡಗಬ್ಬ ಮನೊಡರಿಸಿ ಚಿಕದೇವರಾಯನುನ್ನತಿವೆತ್ತಂ" ಎಂದು ಹೇಳಿದಂತೆ ಒಂದು ಕ್ರಮಬದ್ಧವಾಗಿ 'ಗೀತಗೋಪಾಲ'ವನ್ನು ರಚಿಸಲಾಗಿದೆ.

ಆನೇ ಘಟ್ಟದ ಕೀರ್ತನ ಸಾಹಿತ್ಯ ಪರಂಪರೆಯ ಸೃಷ್ಟಿಗೆ ಗೀತಗೋಪಾಲವೇ ಮೂಲವಾಗಿದೆ ಎಂಬುದು ಎಲ್ಲ ವಿದ್ವಾಂಸರ ಮತ.[೩೫]

ಆ. ಸಾಂಗತ್ಯದ ಕೃತಿಗಳು

ಇದೊಂದು ಜನಸಾಮಾನ್ಯರನ್ನು ತಲುಪಿದ ಸರಳ ಸುಲಭ ಶೈಲಿಯ ಪ್ರಕಾರ. ಕೀರ್ತನೆಗಳಂತೆಯೇ ಸರಳವಾಗಿ ರಚಿತವಾಗಿರುವಂತದ್ದು. ಇಂತಹ ಕೃತಿಗಳನ್ನು ವಿದ್ವನ್ಮಣಿಗಳು ಸಂಪಾದಿಸಿ ಪ್ರಕಟಿಸಿದ್ದಾರೆ. ಎಂ.ಎ. ರಾಮಾನುಜಯ್ಯಂಗಾರ್ ರವರು ಕನಕದಾಸನ 'ಮೋಹನ ತರಂಗಿಣಿ', ಪ್ರಧಾನಿ ತಿರುಮಲಾರ್ಯನ 'ಕರ್ಣ ವೃತ್ತಾಂತ ಕಥೆ', ಸಂಚಿಹೊನ್ನಮ್ಮನ 'ಹದಿಬದೆಯ ಧರ್ಮ', 'ಕೃಷ್ಣಗೋಪೀವಿಲಾಸ ಅಥವಾ ಕೃಷ್ಣಬಾಲಲೀಲೆ' 'ನಂಜಕವಿಯ ಕಪೋತವಾಕ್ಯಂ' ಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

೧. **"ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ"** ೧೮೯೩ ರಲ್ಲಿ ಪ್ರಥಮ ಮುದ್ರಣ. ೧೯೩೫ ರಲ್ಲಿ ದ್ವಿತಿಯ ಮುದ್ರಣವನ್ನು ಎಂ ಎ ರಾಮಾನುಜಯ್ಯಂಗಾರ್ ರವರು ಕವಿಚರಿತೆ. ಹಳಗನ್ನಡ ಕಠಿನ ಪದಗಳ ಅರ್ಥ ಸಹಿತದೊಂದಿಗೆ ಪ್ರಕಟಿಸಿದ್ದಾರೆ.

ಪೀಠಿಕೆಯಲ್ಲಿ ಕವಿಚರಿತ್ರೆ ಮತ್ತು ಗ್ರಂಥ ಪ್ರಶಸ್ತಿಬಗ್ಗೆ ಚರ್ಚಿಸುತ್ತಾ ಈ ಗ್ರಂಥವನ್ನು ಚಿಕದೇವ ಮಹಾರಾಜನ ಸಂಚಿಯ ಊಳಿಗದವಳಾಗಿದ್ದ ಹೊನ್ನಮ ಎಂಬುವಳು ಎಂದು ಹೇಳಿದೆ. ಇವಳು ಚಿಕ್ಕ ವಯಸ್ಸಿನಲ್ಲಿಯೇ ಅಂತಃಪುರಕ್ಕೆ ಸೇರಿದ್ದರಿಂದ ಮಹಾರಾಜರ ಪಟ್ಟಮಹಿಷಿಯು ಮಹಾರಾಜರ ಮೂಲಕ ಅಳಸಿಂಗಾರಾಚಾರ್ಯರಲ್ಲಿ ವಿದ್ಯಾಭಾಸಕ್ಕೆ ಅವಕಾಶ ಕಲ್ಪಿಸಿದುದಾಗಿ ತಿಳಿಯುತ್ತದೆ. ಇವಳ ವಿಚಾರವಾಗಿ ಹೆಚ್ಚೇನು ತಿಳಿದುಬರುವುದಿಲ್ಲ.

ಈ ಗ್ರಂಥವು ಸಾಂಗತ್ಯವೆಂಬ ವೃತ್ತದಲ್ಲಿ ಬರೆದಿದೆ ಇದಕ್ಕೆ 'ಸಂಗತಿ: ಎಂದೂ ಹೆಸರುಂಟು ಇದು ಹಾಡಲು ಸುಲಭವಾಗಿದ್ದು ಈ ವೃತ್ತದ ಲಕ್ಷಣವನ್ನು ನಾಗವರ್ಮನ ಛಂತಶ್ಯಾಸ್ತ್ರದಲ್ಲಿ ಹೇಳಿಲ್ಲ. ಈ ಗ್ರಂಥವನ್ನು ಹೊಸಗನ್ನಡ ರೂಪದಲ್ಲೇ ರಚಿಸಿರುವುದಾಗಿ ಹೇಳಿದ್ದಾಳೆ. ಈ ಗ್ರಂಥದ ಕಾಲ ಸುಮಾರು ಕ್ರಿ.ಶ ೧೬೭೦ ರಿಂದ ೧೭೯೦ ಎಂದು ಹೇಳಲಾಗಿದೆ.

---

[35] ಹರಿದಾಸರು ಕಂಡ ರಾಮಾನುಜರ ದರ್ಶನ. ಡಾ.ನಾಗೀತಾಚಾರ್ಯ. ನಾರಾಯಣಶರ್ಮ ಸಂಸ್ಕೃತಿ ಕೇಂದ್ರ. ಬೆಂಗಳೂರು. ೨೦೧೦

ಇದರಲ್ಲಿನ ಶೋಧಿತ ಭಾಗದ ಪಟ್ಟಿಯನ್ನು ಪುಟ ಸಂಧಿ ಪದಗಳ ಸಂಖ್ಯೆಯನ್ನು ಕೊಟ್ಟು ಕಥಾರಂಭದ ಮೊದಲ್ಲೇ ಸೂಚಿಸಿದ್ದಾರೆ.

ಉದಾ:

ಪುಟ ೫, ಸಂಧಿ ೧, ಪದ ೪೨ ತಮ್ಮಿನಿಯರ ಎಂದು, ಪುಟ ೧೪, ಸಂಧಿ ೩, ಪದ ೪೧ ಗೆಳಸು ಎಂದೂ, ೪೧ ಪುಟಗಳವರೆಗೂ ಕೊಟ್ಟಿದ್ದಾರೆ.

ಟೀಕೆ ಟಿಪ್ಪಣಿ

"ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ" ಇದರಲ್ಲಿ ವಿಶೇಷ ಟಿಪ್ಪಣಿಯನ್ನು ಕೃತಿಯ ಕೊನೆಯಲ್ಲಿ ಮತ್ತು ೪೭ ಪುಟದಿಂದ ಪ್ರತಿ ಸಂಧಿಯ ಪದಗಳಿಗೂ ಹಳಗನ್ನಡದ ಕಠಿನ ಪದಗಳ ಅರ್ಥವನ್ನು ನೀಡಿದ್ದಾರೆ.

ಟಿಪ್ಪಣಿಯ ವಿಶೇಷ: ಒಂಭತ್ತನೆಯ ಸಂಧಿಯ ೪೫ ರಿಂದ ೪೮ ಪದರಲ್ಲಿ ಕವಿಯು ಶ್ರೀವೈಷ್ಣವ ಮತದ ಪ್ರಕಾರ ಮುಕ್ತಿಯು ದೊರಕಬೇಕಾದರೆ ಅನುಸರಿಸಬೇಕಾದ ಸಾಧನಗಳನ್ನು ಸಂಗ್ರಹವಾಗಿ ತಿಳಿಸಿರುತ್ತಾಳೆ

ಉದಾ: ನಿತ್ಯ ನೈಮಿತ್ತಿಕ ಕರ್ಮಗಳನ್ನು ಶ್ರೀಕಾಂತನ ಊಳಿಗವೆಂದು ಮಾಡಬೇಕು. ವೈಷ್ಣವ ದೀಕ್ಷೆಗೆ ಬೇಕಾದ ಐದು ಸಂಸ್ಕಾರಗಳನ್ನು ಹೊಂದಬೇಕು ಎಂದು ಇನ್ನು ಮುಂತಾಗಿ ತಿಳಿಸಿದ್ದಾಳೆ.

ಪದಗಳ ಅರ್ಥ

ಉದಾ: ಪೀಠಿಕಾ ಸಂಧಿ. ಗಾಡಿಕಾತಿ–ಸೌಂದರ್ಯದಿಂದ ಮೆರೆಯುವವಳು. ೨ನೇ ಸಂಧಿ ಇಂಗಡಲು ಇನಿತು+ಕಡಲು ಪಾಲ್ಗಡಲು ಎಂದು ಪದವಿಭಾಗವನ್ನು ತಿಳಿಸುತ್ತಾಳೆ. ೫ನೇ ಸಂಧಿ ಪಸದನಗಳು–ವಸ್ತ್ರ ಒಡವೆ ಮುಂತಾದವು : ತತ್ಸಮ ಪ್ರಸಾಧನ ಎಂದೂ ಇನ್ನೂ ಮುಂತಾಗಿ ತಿಳಿಸಿದ್ದಾಳೆ.

ಬಿ.ಎಂ.ಶ್ರೀಕಂಠಯ್ಯನವರು ಹದಿಬದೆಯ ಧರ್ಮವನ್ನು ೧೯೪೮ ರಲ್ಲಿ ಡಿ.ಚಂಪಾಬಾಯಿ ಅವರ ಸಹಾಯಕತ್ವದಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ. ಇದಕ್ಕೆ ಬಿ.ಎಂ.ಶ್ರೀಯವರೇ ಮುನುಡಿ ಬರೆದಿದ್ದು ೪೨ ಪುಟಗಳ ಪೀಠಿಕೆ ಇದೆ. ಈ ಕೃತಿಯನ್ನು ಪ್ರಕಟಿಸಲು ಮೈಸೂರು ಸರ್ಕಾರದ ಓರಿಯಂಟಲ್ ಲೈಬ್ರರಿಯ ಪ್ರತಿ, ಮದರಾಸು ಸರ್ಕಾರದ ಓರಿಯಂಟಲ್ ಲೈಬ್ರರಿಯ ಪ್ರತಿ ಮತ್ತು ಮೈಸೂರು ವಿಶ್ವವಿದ್ಯಾಲಯದ ಪ್ರತಿಗಳನ್ನು ಬಳಸಿ ಮುದ್ರಿಸಿರುವುದಾಗಿ ತಿಳಿಸಿದ್ದಾರೆ. ಇದರಲ್ಲಿ ಕೆಲವು ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ನೀಡಿದ್ದಾರೆ. ಮೊದಲಬಾರಿಗೆ ಈ ಕೃತಿಯನ್ನು ಎಂ.ಎ. ರಾಮಾನುಜಯ್ಯಂಗಾರ್ ಅವರು ಬೆಳಕಿಗೆ ತಂದು ಕೀರ್ತಿಶೇಷರಾಗಿದ್ದಾರೆ ಎಂದು ಹೇಳಿದ್ದಾರೆ.[೩೬]

---

[36] ಹದಿಬದೆಯ ಧರ್ಮ. ಬಿ.ಎಂ.ಶ್ರೀಕಂಠಯ್ಯ ಮತ್ತು ಡಿ ಸಂಪಾಬಾಯಿ. ಮೈಸೂರು ವಿಶ್ವವಿದ್ಯಾಲಯ. ೪ನೇ ಮುದ್ರಣ. ೧೯೭೭

೨. "ಕರ್ಣವೃತ್ತಾಂತ ಕಥೆ" ಈ ಕೃತಿಯು ಅಸಮಗ್ರವಾಗಿದ್ದು ಇನ್ನು ನಾಲ್ಕು ಸಂಧಿಗಳು ಇದ್ದಿರಬೇಕೆಂದು ಹೇಳುತ್ತಾರೆ. ಈ ಗ್ರಂಥವನ್ನು ಮೈಸೂರು ಸಂಸ್ಥಾನದ ಪ್ರಧಾನಿ ತಿರುಮಲಾರ್ಯನಿಂದ ರಚಿತವಾಗಿದ್ದು ಕವಿಯ ಬಗ್ಗೆ ದೀರ್ಘವಾಗಿ ಚರ್ಚಿಸಿದ್ದು ರಾಜಒಡೆಯರಿಗೆ ಗುರುಗಳಾಗಿದ್ದ ವ್ಯಕ್ತಿಯೇ ಇದರ ಕರ್ತೃ ಎಂದು ಸ್ಪಷ್ಟಪಡಿಸುತ್ತಾರೆ. ಕವಿಯ ಪೂರ್ವಿಕರು ಮಂಡ್ಯ ಮತ್ತು ಮೇಲುಕೋಟೆಯಲ್ಲಿ ದಾನ ದತ್ತಿಗಳನ್ನು ಪಡೆದು ನೆಲಸಿದ್ದರ ಬಗ್ಗೆಯೂ ಹೇಳಲಾಗಿದ್ದು ನಂತರ ರಾಜಒಡೆಯರು ಶ್ರೀರಂಗಪಟ್ಟಣದಲ್ಲಿ ರಾಜ್ಯಾಡಳಿತ ನಡೆಸುತ್ತಿದ್ದಾಗ ತನ್ನ ಆಸ್ಥಾನಕ್ಕೆ ಈ ಕವಿಯನ್ನು ಪ್ರಧಾನಿಯಾಗಿ ಮಾಡಿದ ವಿಚಾರವನ್ನು ತಿಳಿಸುತ್ತಾರೆ.

ಈ ಗ್ರಂಥವನ್ನು ಸಾಂಗತ್ಯ ವೃತ್ತದಲ್ಲಿ ಬರಯಲಾಗಿದ್ದು ಇದರ ಬಂಧವು ಪ್ರೌಢವಾಗಿಯೂ ರಮ್ಯವಾಗಿಯೂ ಇದೆಯೆಂದು ಇದರಲ್ಲಿ ಮಹಾಭಾರತದ ಶಾಂತಿಪರ್ವದ ಮೊದಲ ೧೨ ಅಧ್ಯಾಯಗಳ ಪದ್ಯಾನುವಾದವು ಬಹು ರಮಣೀಯವಾಗಿದೆ ಎಂದು ಉಲ್ಲೇಖಿಸಿದ್ದಾರೆ. ಇದನ್ನು ಎರಡು ಮೂರು ತರದಲ್ಲಿ ಹಾಡುತ್ತಾರೆ ಎಂದು ಪ್ರಶಂಸಿಸಿದ್ದಾರೆ. ಅಸಮಗ್ರವಾದ ಒಂದೇ ಮಾತೃಕೆಯ ಆಧಾರದಿಂದ ಮುದ್ರಿಸಲ್ಪಟ್ಟಿದ್ದು ಎಂದು ತಿಳಿಸುತ್ತಾರೆ.

ಟೀಕೆ ಟಿಪ್ಪಣಿ

"ಕರ್ಣವೃತ್ತಾಂತ ಕಥೆ" ಯಲ್ಲಿ ೧೪ ಪುಟಗಳಲ್ಲಿ ೧೨ ಸಂಧಿಗಳ ಎಲ್ಲ ಪದ್ಯಗಳಿಗೂ ಟಿಪ್ಪಣಿಯನ್ನು ನೀಡಿದ್ದಾರೆ. ಇದರಲ್ಲಿ ಪದಗಳಿಗೆ ಅರ್ಥ, ವ್ಯಾಕರಣ ವಿಚಾರ, ದೇಸೀಪದಗಳ ಪರಿಚಯ, ತಾತ್ಪರ್ಯ ಮುಂತಾದ ಇನ್ನು ಅನೇಕ ವಿಶೇಷ ವಿಚಾರಗಳನ್ನು ಕೊಟ್ಟಿದ್ದಾರೆ.

ಉದಾಹರಣೆಗೆ :

ಅರ್ಥಕ್ಕೆ; ಶ್ರೀಶ – ಲಕ್ಷ್ಮೀಪತಿಯಾದ ವಿಷ್ಣು, ನಿರುಪಾಧಿ– ಎಲ್ಲೆ ಇಲ್ಲದ, ಗಣನೆಗೆ ಮೀರಿರುವ, ಬಲ್ಲರ– ಜ್ಞಾನಿಗಳ, ಅಣುಗನು– ಪ್ರೀತಿಪಾತ್ರನಾದ ಮೊಗು.

ವ್ಯಾಕರಣಕ್ಕೆ: ಇಂಬಣ್ಣ= ಇನಿದು +ಪಣ್– ಮಧುರವಾದ ಹಣ್ಣನ್ನು, ತನಿತು+ಕಂಪು– ಹೆಚ್ಚಾದ ವಾಸನೆ, ಕೆಂಬರಲು =ಕೆಚ್ಚನೆ + ಪರಲು – ಕೆಂಪುಮಣಿ, ತಂಬೆಲರೆ– ತೆಂಕಣ(ದಕ್ಷಿಣದಿಕ್ಕಿನ) + ಎಲರ್ ಗಾಳಿ = ತೆಂಕ+ಎಲರ್ ತೆಂಕೆಲರ್, ದಳ್ಳುರಿ = ದಳ್ಳಿತು – ವೇಗವಾದ +ಉರಿ ,

ದೇಸೀಪದಕ್ಕೆ; ದೀವಿ–ತ್ಸ –ದ್ವೀಪ, ಬಿದಿ ತ್ಸ– ವಿಧಿ, ಜಸ–ತ್ಭ ಯಶಸ್

ತಾತ್ಪರ್ಯಕ್ಕೆ: ತೆತ್ತಿಗ – ನಮ್ಮೊಡನೆ ಚೆನ್ನಾಗಿ ಸೇರಿಕೊಂಡಿರುವ ಸೇವಕನು, ಪುಗಲೆಡೆ – ಆಶ್ರಯ, ಸಕಲವಿಧದಲ್ಲಿಯೂ ಸಹಾಯಮಾಡುವವನು ಎಂದು ತಾತ್ಪರ್ಯ.

ಕಟ್ಟಾಸುರ– ಕಡಿದು+ಕೂರವಾದ,+ಅಸುರ–ರಾಕ್ಷಸ ಕೃತ್ಯ: ಕ್ರೂರರಾದ ರಾಕ್ಷಸರಂತೆ: ಎಂದು ತಾತ್ಪರ್ಯ.

೩. **"ಕೃಷ್ಣ ಗೋಪೀವಿಲಾಸಂ"** ಇದೊಂದು ಸಾಂಗತ್ಯವಾಗಿದ್ದು ನನಗೆ ದೊರೆತ ಗ್ರಂಥವು ನೇರವಾಗಿ ಕವಿತಾ ಭಾಗದಿಂದ ಮುದ್ರಿತವಾಗಿದೆ. ಆದ್ದರಿಂದ ಯಾವುದೇ ಮುನ್ನುಡಿಯಾಗಲೀ, ಪೀಠಿಕೆಯಾಗಲಿ ಮತ್ತು ಇದನ್ನು ಯಾರು ರಚಿಸಿದರು, ಇದರ ಮೂಲ ಯಾವುದು ಎಂಬುದು ತಿಳಿದುಬರುವುದಿಲ್ಲ.

ರಾಮಾನುಜಯ್ಯಂಗಾರ್ ರವರು ಈ ಎಲ್ಲಾ ಸಾಂಗತ್ಯಗಳನ್ನು ಸಂಪಾದಿಸಿ, ಪರಿಷ್ಕರಿಸಿ ಅಚ್ಚುಕಟ್ಟಾಗಿ ಮುದ್ರಿಸಿ ಪ್ರಕಟಿಸಿರುವುದು ಅವರ ಪಾಂಡಿತ್ಯ ಪೌಂಡಿಮೆಯನ್ನು ಕಾಣಬಹುದಾಗಿದೆ.

೫. ಗದ್ಯ ಗ್ರಂಥಗಳು

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಚಂಪೂಕಾವ್ಯಗಳ ನಂತರದ ಸ್ಥಾನವನ್ನು ಗದ್ಯಗ್ರಂಥಗಳು ಪಡೆದುಕೊಂಡಿವೆ. ಶಾಸನ ಮತ್ತು ಕಾವ್ಯಗಳಲ್ಲಿ ಗದ್ಯ ಅಥವಾ ವಚನ ಭಾಗಗಳು ಕಂಡುಬರುತ್ತವೆ ಆದರೆ ಪೂರ್ಣವಾಗಿ ರಚಿತವಾಗಿರುವುದು ಕನ್ನಡ ಸಾಹಿತ್ಯದಲ್ಲಿಯೇ ಪ್ರಥಮ ಗದ್ಯ ಕೃತಿ ಎನಿಸಿಕೊಂಡ ಶಿವಕೋಟ್ಯಾಚಾರ್ಯನ ವಡ್ಡಾರಾಧನೆ. ಇನ್ನು ಮುಂತಾದ ಕೃತಿಗಳನ್ನು ನಂತರದಲ್ಲಿ ರಚಿಸಿರುವುದು ಕಂಡುಬರುತ್ತದೆ. ಅಂತಹ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದವರಲ್ಲಿ ಎಂ.ಎ. ರಾಮಾನುಜಯ್ಯಂಗಾರ್ ರವರು ತಿರುಮಲೆಯಾರ್ಯನ 'ಚಿಕದೇವರಾಯ ವಂಶಾವಳಿ': ಹಳಗನ್ನಡ. 'ಚಿಕುಪಾಧ್ಯಾಯನ ವಿಷ್ಣುಪುರಾಣ. ೧. ೪. ೫ ನೆ ಅಂಶಗಳು'. 'ಕನ್ನಡ ವಚನ ಕಾದಂಬರಿ' – ಪೂರ್ವಭಾಗ ಬಾಳಲೋಚನನ 'ಬತ್ತೀಸಪುತ್ತಳಿ ಕಥೆಗಳು'. ಮುದ್ದಣ್ಣನ 'ಶ್ರೀರಾಮಾಶ್ವಮೇಧಂ': ಹಳಗನ್ನಡ 'ಅದ್ಭುತರಾಮಾಯಣಂ' (ಸಟಿಪ್ಪಣಂ) ಗಂಳಂತ ಶ್ರೇಷ್ಠ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

೧. **"ಅದ್ಭುತ ರಾಮಾಯಣಂ"** ಈ ಕೃತಿಯಲ್ಲಿ ಕವಿಕೃತಿ ಬಗ್ಗೆ ಚರ್ಚಿಸಿದ್ದು ಕರ್ತೃ ಯಾರೆಂಬು ತಿಳಿಯುವುದಿಲ್ಲವೆಂದೂ ಇದು ಸಂಸ್ಕೃತದಲ್ಲಿರುವ "ಅದ್ಭುತ ರಾಮಾಯಣ"ವೆಂಬ ಪುರಾಣದ ವಚನ ರೂಪವಾದ ಕಥೆ. ಇದನ್ನು ಕನ್ನಡಕ್ಕೆ ಅನುವಾದ ಮಾಡಿದವರ ಬಗ್ಗೆ ತಿಳಿದುಬಂದಿಲ್ಲ. ಆದರೆ ಗ್ರಂಥದ ಕೊನೆಯಲ್ಲಿ " ತಿರುಗನ್ನಡಿಗನಡಿದಾವರೆಯ ಬಂಡುಣಿಗಳಪ್ಪ ಕನ್ನಡಗಬ್ಬಿಗರ ಮುನಿಯಾಱಿಗದವನೊರ್ವಂ ಕನ್ನಡಿಗಂ" ಎಂದು ಕವಿಯು ಹೇಳಿಕೊಳ್ಳುವುದರಿಂದ ಈತ ಕನ್ನಡ ದೇಶದ ಬ್ರಾಹ್ಮಣವಾಗಿರಬಹುದು. ಈ ಗ್ರಂಥವು ಉಡುಪಿಯ ಕಡೆ ದೊರೆತದ್ದರಿಂದ ಈ ಕವಿಯು ಬಹುಶಃ ಅಲ್ಲಿಯವನಾಗಿರಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ಗ್ರಂಥವನ್ನು ಹಳಗನ್ನಡದಲ್ಲೇ ರಚಿಸಲ್ಪಟ್ಟಿರುವುದರಿಂದ "ಪೊಂಡು", "ತಬ್ಬಲಿ" "ಅವುಗಳ" "ಹಾಯ್ಕಿದಳ್" "ಕಲಿಯಂತೆ" "ಎಣ್ಣದಿರಿ" ಮೊದಲಾದ ಹೊಸಗನ್ನಡ ಪದಗಳೂ ಮತ್ತು ಪ್ರಯೋಗಗಳೂ ಸಿಕ್ಕಿರುವುದರಿಂದ ಈ ಕವಿಯು ಸುಮಾರು ೧೫೦ ವರ್ಷಗಳಗೆ ಈಚೆ ಇದ್ದವನೆಂದೂ

ತೋರುತ್ತದೆ ಎಂದು ಸಂಪಾದನಕಾರರು ಅಭಿಪ್ರಾಯಪಟ್ಟಿದ್ದಾರೆ. ಶುದ್ಧಾಶುದ್ಧ ಪತ್ರಿಕೆಯನ್ನು ಕೊಟ್ಟಿದ್ದು ಅದರ ಉದಾಹರಣೆಗಳನ್ನು ನೋಡಬಹುದಾಗಿದೆ.

ಪುಟ ೮ ಪಙ್ತಿ ೧೦ ಅಶುದ್ಧ- ಅಲರ್ಪೊಡೆಯ, ಶುದ್ಧ – ಅಲವೊಡೆಯ

ಪುಟ ೬೭ ಪಙ್ತಿ ೨೧ ಅಶುದ್ಧ -ಪಲ್ಗಿಱ. ಶುದ್ಧ – ಪಲ್ಗಿಱ ಕುಂದಾಪುರದ ಗೌರ್ನಮೆಂಟ್ ಬೋರ್ಡ್ ಹೈಸ್ಕೂಲ್ ಮಾಸ್ಟರಾದ ಮ॥ರಾ॥ ನಂದಳಿಕೆ ಲಕ್ಷ್ಮೀನಾರಣಪ್ಪನವರಿಗೆ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.

ಎಷ್ಟು ಪ್ರತಿಗಳಾಗಿ ಮುದ್ರಿಸಿದ್ದಾರೆ ಎಂದು ತಿಳಿದುಬರುವುದಿಲ್ಲ ಆದರೆ ಈ ಪ್ರತಿಯನ್ನು ಕುಂದಾಪುರದ ಗೌರ್ನಮೆಂಟ್ ಬೋರ್ಡ್ ಹೈಸ್ಕೂಲ್ ಮಾಸ್ಟರಾದ ಮ॥ರಾ॥ ನಂದಳಿಕೆ ಲಕ್ಷ್ಮೀನಾರಣಪ್ಪರವರು ಕಳುಹಿಸಿಕೊಟ್ಟರೆಂದು ಹೇಳಿದ್ದಾರೆ.

ಟೀಕೆ ಟಿಪ್ಪಣಿ

"ಅದ್ಭುತ ರಾಮಾಯಣಂ" ವನ್ನು ಈ ಗ್ರಂಥವು ೧೬ ಆಶ್ವಾಸಗಳನ್ನೊಳಗೊಂಡ ಕೃತಿಯಾಗಿದೆ. ಇದರಲ್ಲಿ ಪ್ರತಿ ಆಶ್ವಾಸಕ್ಕು ಟಿಪ್ಪಣಿ ನೀಡಿರುವುದು ವಿಶೇಷವಾಗಿದೆ. ಈ ಟಿಪ್ಪಣಿಯಲ್ಲಿ ಪ್ರತಿ ಅಶ್ವಾಸದ ಪುಟಗಳ ಸಂಖ್ಯೆಯನ್ನು ಕೊಟ್ಟು ಅವುಗಳಲ್ಲಿ ಬರುವ ವ್ಯಾಕರಣ, ಪದವಿಭಾಗ, ಛಂದಸ್ಸು, ಅಲಂಕಾರ, ಪದಗಳ ಅರ್ಥ, ತದ್ಭವ ಪದಗಳ ಬಳಕೆ, ಮತ್ತು ಬೇರೆ ಕವಿಗಳ ಉಲ್ಲೇಖ ಇನ್ನು ಮುಂತಾದ ಉಪಯುಕ್ತ ಮಾಹಿತಿಯನ್ನು ಟಿಪ್ಪಣಿಯಲ್ಲಿ ನೀಡಿದ್ದಾರೆ.

ಉದಾ: **ಪ್ರಥಮಾಶ್ವಾಸಂ** ದ ಪುಟ ೧ ರಲ್ಲಿ ತಿರೆ- ತದ್ಭವ, ಸ್ಥಿರಾ. ಭೂಮಿ. ೬ ಕುತ್ತ- ರೋಗ ಇಂಚರ= ಇನಿದು+ಸರ, ಮಧುರಧ್ವನಿ

ಉದಾ: ಪುಟ ೨ ರಲ್ಲಿ ಬೇರೆ ಕೃತಿಯ ಉಲ್ಲೇಖ " ಸುಲಲಿತಮೆಂಬಂದದಿಂದೋದಿ ತೋರ್ದಿ" ಕಾದಂಬರಿ ೬೩ ಎಂದು ಹೇಳಿದ್ದಾರೆ.

ದ್ವಿತೀಯಾಶ್ವಾಸಂ ಪುಟ ೬ ೩. ಸಗ್ಗಿಗರ್ – ಸ್ವರ್ಗದಲ್ಲಿರುವವರು, ದೇವತೆಗಳು. ೫ ಅಸಡ್ಡೆ-ಧ್ಥ. ಅಶ್ರದ್ಧೆ. ೧೮ ಪಾಱುಂಬಳೆ- ಚಕ್ರ. ೧೯ ಚಕ್ರಿಶಾಯಿ-ಸರ್ಪದ ಮೇಲೆ ಮಲಗಿರುವವನು.

ಚತುರ್ಥಾಶ್ವಾಸಂ ದಲ್ಲಿ ಪುಟ ೧೫ ರಲ್ಲಿ ಅವ್ಯಯ ವಿಚಾರ ಹೇಳುತ್ತ ಉಸಿಕಂ-(ಅವ್ಯಯ) ಸುಮ್ಮನೆ, ಪುಟ ೧೭ ರಲ್ಲಿ ಧಾತು ವಿಚಾರತಿಳಿಸುತ್ತಾ " ಹಾಯ್ಕದಳ್" ಈ ಧಾತು ಪ್ರಾಚೀನಗ್ರಂಥಗಳಲ್ಲಿ ದೊರೆತಿಲ್ಲ, ಷಟ್ಪದಿಗಳಲ್ಲಿದೆ. ಎಂದು ಹೇಳಿದ್ದಾರೆ. ಇಂತಹ ಇನ್ನು ಅನೇಕ ವಿಚಾರಗಳನ್ನು ಹಳಗನ್ನಡ ಅಭ್ಯಾಸ ಮಾಡುವರಿಗೆ ಅನುಕೂಲವಾಗುವಂತೆ ಟಿಪ್ಪಣಿಯನ್ನು ಕೊಟ್ಟಿದ್ದಾರೆ.

ಸಪ್ತಮಾಶ್ವಾಸಂ ಪುಟ ೩೫. ಧ್ಯಾಂಕ್ಷಶತ್ರು-ಕಾಗೆಗಳ ಶತ್ರು, ಗೂಗೆ, ೧೩ ಸಂಪ್ಲವ-ಪ್ರಳಯ

ದ್ವಾದಶಾಶ್ವಾಸಂ ಪುಟ ೫೭ ೧೧ ಪಯಿಂಛಾಸಿರ-ಹತ್ತು ಸಾವಿರ. ೨೦ ಮಱನುಡಿ- ಅದೃಶ್ಯವಾಕ್ಕು.

ಷೋಢಶಾಶ್ವಾಸಂ ಪುಟ ೭೪ ಮಸಣ ಧ್ಞ. ಸ್ಮಶಾನ, ಮರುಳ್ – ಪಿಶಾಚಿ,

ಪುಟ ೭೫ ಕಕ್ಕಸ ಧ್ಞ – ಕರ್ಕಶ, ಪೊಡೆ – ಹೊಟ್ಟೆ

ಶ್ರೀರಾಮ ಪಟ್ಟಾಭಿಷೇಕಂ ಮತ್ತು ಶ್ರೀರಾಮಾಶ್ವಮೇಧಂ ಕೃತಿಗಳನ್ನು ಮುದ್ದಣ ಎಂಬ ಕಾವ್ಯ ನಾಮದಿಂದ ನಂದಳಿಕೆ ಲಕ್ಷ್ಮೀನಾರಾಯಣಪ್ಪನವರು ರಚಿಸಿದ್ದು ಎಂಬುದರ ಆಧಾರದ ಮೇಲೆ ಅದ್ಭುತ ರಾಮಾಯಣವನ್ನು ಇವರೆ ರಚಿಸಿದ್ದಾರೆಂದು ವಿದ್ವಾಂಸರುಗಳು ತಿಳಸಿದ್ದಾರೆ.

೨. **"ಶ್ರೀರಾಮಾಶ್ವಮೇಧಂ" ಅನ್ನು** ಇದನ್ನು ಮಹಾಲಕ್ಷ್ಮೀ ಎಂಬ ಮಹಿಳೆ ರಚಿಸಿರುವುದಾಗಿ ತಿಳಸಿದ್ದಾರೆ. ನನಗೆ ದೊರೆತ ಗ್ರಂಥದಲ್ಲಿ ನೇರ ಕಥಾರಂಭದಿಂದ ಮುದ್ರಿತವಾಗಿದ್ದು ಇದೊಂದು ಹಳಗನ್ನಡ ಗದ್ಯಕಾವ್ಯವಾಗಿದೆ. ಇದರಲ್ಲಿ ಇನ್ನಾವುದೇ ವಿಚಾರಗಳು ತಿಳಯುವುದಿಲ್ಲ.

ಪ್ರೋ. ಜಿ. ವೆಂಕಟಸುಬ್ಬಯ್ಯ ನವರು ಮುದ್ದಣ ಭಂಡಾರದ ೨ ನೇ ಸಂಪುಟದಲ್ಲಿ ಅದ್ಭುತರಾಮಾಯಣಂ ಮತ್ತು ರಾಮಾಶ್ವಮೇಧಂ ಎಂಬ ಕೃತಿಯನ್ನು ೧೯೮೭ ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟಿಸಿದ್ದಾರೆ.

ರಾಮಾಶ್ವಮೇಧವು ಮುದ್ರಣವಾಗುವ ಹೊತ್ತಿಗೆ ನಂದಳಿಕೆಯ ಲಕ್ಷ್ಮೀನಾರಣಪ್ಪನೇ ಮುದ್ದಣನಿರಬೇಕೆಂಬ ವದಂತಿ ಪ್ರಚಾರಕ್ಕೆ ಬಂದಿತ್ತು. ಅದು ರಾಮಾನುಜಯ್ಯಂಗಾರ್ ರವರ ಕಿವಿಗೂ ಮುಟ್ಟಿತ್ತು ಅವರು ನಂದಳಿಕೆ ಲಕ್ಷ್ಮೀನಾರಣಪ್ಪನವರಿಗೆ ಬರೆದ ಪತ್ರ ಅದಕ್ಕೆ ಬಂದ ಉತ್ತರ. ಸಂಪಾದಕರ ತೀರ್ಮಾನ ಇವು ಈಗ ಚರಿತ್ರೆಯ ಅಂಶಗಳಾಗಿವೆ ಆದರೂ ಅವುಗಳ ಪ್ರತ್ಯಕ್ಷ ಪರಿಚಯಕೋಸ್ಕರ ರಾಮಾಶ್ವಮೇಧ್ದ ಮೊದಲ ಮುದ್ರಣದ ಮೊದಲೆರಡು ಪುಟಗಳನ್ನು ಯಥಾವತ್ತಾಗಿ ಇಲ್ಲಿ ಮುದ್ರಿಸಿದೆ. ಇದರಿಂದ ಅವ್ಂದು ಪ್ರಚಾರದಲ್ಲಿದಾ ಕವಿ ವಿಷಯವಾದ ವಿವರಗಳು ಸ್ವಲ್ಪ ಮಟ್ಟಿಗಾದರು ಓದುಗರ ಗಮನಕ್ಕೆ ಬರುತ್ತದೆ ಎಂದು ಹೇಳದ್ದಾರೆ.

ಈ ಸಂಪುಟದಲ್ಲಿರುವ ವಿಶೇಷವೇನೆಂದರೆ ರಾಮಾಶ್ವಮೇಧದ ಕವಿ ಮುದ್ದಣನ ಹಸ್ತಾಕ್ಷರದಲ್ಲಿರುವ ಪ್ರತಿಯನ್ನು ಪರಿಶೀಲಿಸಿ ಅಲ್ಲಿರುವಂತೆಯೇ ಗ್ರಂಥವನ್ನು ಮುದ್ರಿಸಲು ಮಾಡಿರುವ ಪ್ರಯತ್ನ. ಈ ಪ್ರಸ್ತಾವನೆಯಲ್ಲಿ ಮೊದಲು ಅದ್ಭುತ ರಾಮಾಯಣವನ್ನೂ ರಾಮಾಶ್ವಮೇದವನೂ ಕುರಿತು ಪೀಠಿಕಾ ರೂಪವಾಗಿ ಸ್ವಲ್ಪ ವಿವರಣೆಯನ್ನೂ ನೀಡಿ ಮುದ್ದಣನ ಈ ಹಸ್ತಪ್ರತಿಗೂ ಮುದ್ರಿತ ಪುಸ್ತಕಕ್ಕೂ ಇರುವ ವ್ಯತ್ಯಾಸದ ಕಡೆಗೆ ಗಮನವನ್ನು ಸೆಳೆಯಲು ಯೋಚಿಸಲಾಗಿದೆ. ಮುದ್ದಣ ಬಗ್ಗೆ ವಿಸ್ತಾರವಾದ ವಿಮರ್ಶೆಯು ಲೇಖನಗಳು, ಗ್ರಂಥಗಳು ಪ್ರಕಟವಾಗಿದ್ದರೂ ಈ ಹಸ್ತಪ್ರತಿ ಸಂಪೂರ್ಣವಾಗಿ ಮುದ್ರಿಸಲು ಸಾಧ್ಯವಾಗಿರಲಿಲ್ಲ. ಎಂದು ಹೇಳದ್ದಾರೆ. [೩೭]

---

[37] ಶ್ರೀರಾಮಾಪಟ್ಟಾಭಿಷೇಕಂ ಮುದ್ದಣ ಭಂಡಾರ, ಪ್ರೊ..ಜಿ.ವೆಂಕಟಸುಬ್ಬಯ್ಯ, ಸಂಪುಟ–೨

"ಶ್ರೀರಾಮಾಶ್ವಮೇಧಂ" ಕೃತಿಯ ಬಗ್ಗೆ ಡಾ. ಚಿದಾನಂದ ಮೂರ್ತಿಯವರು ದೀರ್ಘವಾಗಿ ಚರ್ಚಿಸಿದ್ದಾರೆ.[೩೮] ಎಂ.ಎ. ರಾಮಾನುಜಯ್ಯಂಗಾರ್ ರವರು ದೊರೆತ ಪ್ರತಿ ಕವಿಪ್ರತಿ ಎಂದು ತಿಳಿಯದೆ ಬಹಳವಾಗಿ ತಿದ್ದಿ ೧೯೦೧ ರಲ್ಲಿ ಪ್ರಕಟಿಸಿರುವುದಾಗಿ ತಿಳಿಸಿ ಮತ್ತೆ ಅದನ್ನು ೧೯೩೨ ರಲ್ಲಿ ಮೂಲ ಪ್ರತಿಯನ್ನೇ ಇಟ್ಟುಕೊಂಡು ತಾವು ತಿದ್ದಿದ್ದನ್ನು ೧೯೦೧ ರ ಪಾಠವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿದರು. ಆದರೆ ನಂತರ ಅದನ್ನು ಕಾವ್ಯಾಲಯ ಪ್ರಕಾಶನದವರು ಪುನರ್ ಮುದ್ರಣ ಮಾಡುವಾಗ ತಪ್ಪಿದ್ದಂತೆ ಹಳೆಯ ಪ್ರತಿಯನ್ನೇ ಮುದ್ರಿಸಿದ್ದು ವಿಪರ್ಯಾಸವೇ ಸರಿ ಎಂದಿದ್ದಾರೆ.

೧೯೩೨ ರ ಪ್ರತಿಯಲ್ಲಿ ಈಗಲೂ ಪಾಠ ಪರಿಷ್ಕರಣಕ್ಕೆ ಅವಕಾಶವಿರುವುದಾಗಿ ಗುರುತಿಸಿ ಕೆಲವು ಉದಾಹರಣೆಗಳನ್ನು ನೀಡಿದ್ದಾರೆ.

" ಕುಚಂಗಳಾಣೆ" ಎಂಬುದು " ಕಚಂಗಳಾಣೆ" ಎಂದು ತಿದ್ದು ಪಾಠವಾಗಿದೆ. 'ನಾಂಬನೆಗೆ ಪರಿತಂದು' ಎನ್ನುವಲ್ಲಿಯು 'ನಾಥನೆಡೆಗೆ ಪರಿತಂದು' ಎಂದು ಇವುಗಳ ವ್ಯತ್ಯಾಸವನ್ನು ಚರ್ಚಿಸಿದ್ದಾರೆ. ಹಾಗೆಯೇ ಪ್ರತಿ ಮಾಡಿಕೊಳ್ಳುವಾಗ ಉಂಟಾದ ದೋಷದ ಪರಿಣಾಮವಾಗಿ ಆದವುಗಳನ್ನು ಗುರುತಿಸಿದ್ದಾರೆ.

ಡಾ. ಚಿನಾಂದ ಮೂರ್ತಿಗಳು ದೋಷಗಳನ್ನು ಗುರುತಿಸಿ ತಿದ್ದುವುದರ ಬಗ್ಗೆ ತಿಳಿಸಿರುವುದು ಸರಿಯಾದರೂ ರಾಮಾನುಜಯ್ಯಂಗಾರ್ ರವರು ಪ್ರಾಚೀನ ಕೃತಿಗಳನ್ನು ಸಂಪಾದಿಸುವಾಗ ದೊರೆತಂತ ಪ್ರತಿಗಳನ್ನು ಪರಿಷ್ಕರಿಸಿ ಸರಿತಪ್ಪುಗಳನ್ನು ಗುರುತಿಸಿ ಪಾಠಾಂತರಗಳನ್ನು ಕವಿಯ ಪಾಠದ ಮೂಲಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಿ ಹೆಚ್ಚು ಸ್ವತಂತ್ರ ವಹಿಸಿರುವುದು ಶ್ಲಾಘನೀಯ. ಆದರೆ ಅದು ಕವಿಯ ಮೂಲ ಪ್ರತಿ ಎಂದು ತಿಳಿಯದೇ ಆದ ತಪ್ಪು ಎಂಬುದು ಸ್ಪಷ್ಟವಾಗುತ್ತದೆ.

೩. "ತಿರುಮಲಾರ್ಯನ ಚಿಕದೇವರಾಯ ವಂಶಾವಳಿ" ಇದು ದೀರ್ಘವಾದ ಮುನ್ನುಡಿ ಹೊಂದಿದ್ದು ಕವಿ ಕೃತಿಯ ವಿಚಾರ, ಮೈಸೂರು ದೇಶದ ಚರಿತ್ರೆಗಳ ವಿವರ, ಮುಖ್ಯವಾಗಿ ರಾಜ ಒಡೆಯರಿಗೆ ಶ್ರೀರಂಗಪಟ್ಟಣವು ಸೇರಿದ ವಿಚಾರ, ಮಹಾರಾಜರ ವಂಶವೃಕ, ಪಟ್ಟದಕ್ರಮ, ಶಾಸನಗಳು . ಮೈಸೂರಿನಲ್ಲಿ ನಡೆದ ಯುದ್ಧಗಳ ವಿವರ, ಮುಂತಾದಗಳ ಬಗ್ಗೆಗೆ ಹೇಳಿರುವುದೇ ಸಮಂಜಸವೆಂದೂ ಸ್ಥಿರಪಡಿಸಬಹುದು ಎಂದಿದ್ದಾರೆ. ಈ ಗ್ರಂಥವನ್ನು ಚಿಕ್ಕದೇವರಾಜ ಒಡೆಯ ಮುಖ್ಯಮಂತ್ರಿಗಳಾದ ತಿರುಮಲೈಯಂಗಾರ್ಯರು ಸುಮಾರು ಕ್ರಿ.ಶ ೧೬೭೦ ರಲ್ಲಿ ಬರೆದಂತೆ ತೋರುತ್ತದೆ ಎಂದು ಉಲ್ಲೇಖಿಸಿದ್ದಾರೆ.

---

[38] ಹಸ್ತಪ್ರತಿ ಶಾಸ್ತ್ರ: ಪಾಠ ಪರಿಷ್ಕರಣ ಮತ್ತು ಉನ್ನತ ವಿಮರ್ಶೆ: ಡಾ. ಚಿನಾಂದ ಮೂರ್ತಿ, ಪುಟ ೧೭೩,೧೭೪

ಈ ಕವಿಯು ಸಂಸ್ಕೃತದಲ್ಲಿಯೂ, ಕನ್ನಡದಲ್ಲಿಯೂ, ಗ್ರಂಥಗಳನ್ನು ರಚಿಸಿರುವುದಾಗಿ ಹೇಳಿದ್ದಾರೆ. ಚಿಕದೇವರಾಯಭಿನ್ನಪ, ಚಿಕದೇವರಾಯ ವಂಶಾವಳಿ, ಚಿಕದೇವರಾಜ ವಿಜಯ, ಗೀತಗೋಪಾಲ, ಇನ್ನು ಮುಂತಾದ ಕೃತಿಗಳನ್ನು ಈತನೇ ರಚಿಸಿರುವುದಾಗಿ ಪ್ರಮಾದವಿದೆ ಎಂದು ಗುರುತಿಸುತ್ತಾರೆ.

ಈ ಗ್ರಂಥದ ಕೊನೆಯಲ್ಲಿ ನಕ್ಷತ್ರ ಚಿಹ್ನೆ ಮತ್ತು ಗ್ರಂಥಪಾತ ಸೂಚಕವನ್ನು ಸುಚಿಸಿ ಅಡಿಟಿಪ್ಪಣಿಯಲ್ಲಿ * ಈಕಡೆ ಮುಗಿದಿಲ್ಲವೆಂದು ತೋರುತ್ತದೆ. ನಮಗೆ ದೊರೆತ ಮಾತೃಕೆಗಳಲ್ಲಿ ಗ್ರಂಥವು ಇಷ್ಟೇ ಇದೆ. ಎಂದು ಉಲ್ಲೇಖಿಸಿದ್ದಾರೆ. ಇದರ ಮೊದಲೆರಡು ಮುದ್ರಣಗಳ ಬಗ್ಗೆಗೆ ಮಾಹಿತಿ ಇರುವುದಿಲ್ಲ.

ಇದರಲ್ಲಿ ಕೆಲವು ಭಾಗಗಳಿಗೆ ಮೂಲ ಮಾತೃಕೆಗಳಲ್ಲಿ ಇಲ್ಲದೆ ವಿಷಯ ವಿವರಣೆಗಳನ್ನು ಅಲ್ಲಲ್ಲಿ ಹೊಸದಾಗಿ ಬರೆದು ಸೇರಿಸಿರುವುದಾಗಿ ತಿಳಿಸಿದ್ದಾರೆ.

೧೯೧೯ರಲ್ಲಿ ತಿರುಮಲಾರ್ಯ ವಿರಚಿತ ಚಿಕ್ಕದೇವರಾಯ ವಂಶಾವಳಿ ಎಂಬ ಗದ್ಯಾನುವಾದವನ್ನು ಮ.ಭಾ.ಭೋಯಿಯವರು ಪ್ರಕಟಿಸಿದ್ದಾರೆ. ಇವತು ೧೩ ಪುಟಗಳ ಉಪೋದ್ಘಾತದಲ್ಲಿ ಕವಿಯ ಬಗ್ಗೆ ಚರ್ಚಿಸಿದ್ದು. ತಿರುಮಲಾರ್ಯನು ಚಿಕ್ಕದೇವರಾಯನ್ನು ಹುಟ್ಟಿದ ವರ್ಷವೇ ಅಂದರೆ ೧೩೪೫ ಕ್ಕೆ ಸರಿಹೊಂದುವಂತೆ ಪಾರ್ಥಿವ ಸಂವತ್ಸರದಲ್ಲಿ ಚಿಕ್ಕದೇವರಾಯನಿಗಿಂತ ಸ್ವಲ್ಪ ಮುಂಚೆ ಹುಟ್ಟಿದ್ದು ಚಿಕ್ಕದೇವರಾಯ ೧೭೦೪ರಲ್ಲಿ ತೀರಿಕೊಂಡ ನಂತರ ಆತನ ಮಗ ಕಂಠೀರವ ನರಸರಾಜನ ಕಾಲದಲ್ಲಿ ತಿರುಮಲಾರ್ಯನು ಮಂತ್ರಿಯಾಗಿದ್ದನೆಂದೂ ಇತನ ಇತರ ಕೃತಿಗಳಿಂದ ತಿಳಿದುಬರುವುದಾಗಿ ತಿಳಿಸಿದ್ದಾರೆ. ಎಂ. ಎ. ರಾಮಾನುಜಯ್ಯಂಗಾರರ ಅಪ್ರತಿಮ ವೀರಚರಿತೆಯಲ್ಲಿ ಬರುವ ಯುದ್ಧಗಳ ವರ್ಣನೆ. ಚಿಕ್ಕದೇವರಾಯ ಪಟ್ಟಕ್ಕೆ ಬಂದ ವಿಚಾರಗಳೆಲ್ಲವನ್ನೂ ಗಮನಿಸಿದರೆ ಈ ಕೃತಿಗಳನ್ನು ತಿರುಮಲಾರ್ಯನೇ ರಚಿಸಿರುವುದಾಗಿ ಸ್ಪಷ್ಟವಾಗುತ್ತದೆ ಎಂದು ಚರ್ಚಿಸಿದ್ದಾರೆ.[೩೯]

೪. "ಚಿಕುಪಾಧ್ಯಾಯನ ವಿಷ್ಣುಪುರಾಣ" ಕ್ರಿ.ಶ ೧೯೧೪ ರಲ್ಲಿ ರಾಮಾನುಜಯ್ಯಂಗಾರ್ ರವರು ಪರಿಷ್ಕರಿಸಿ ಕರ್ಣಾಟಕ ಕಾವ್ಯ ಕಲಾನಿಧಿಯಲ್ಲಿ ಪ್ರಥಮಾಂಶವನ್ನೂ, ೧೯೧೧ ರಲ್ಲಿ ಚತುರ್ಥಾಂಶವನ್ನು ೧೯೧೦ ರಲ್ಲಿ ಪಂಚಮಾಂಶವನ್ನು ಪ್ರಕಟಿಸಿದ್ದಾರೆ.

ಈ ಗ್ರಂಥದ ಕರ್ತೃ ಚಿಕದೇವರಾಜ ಒಡೆಯರ ಆಸ್ಥಾನ ಕವಿಯಾದ ಚಿಕುಪಾಧ್ಯಯ ಎಂದು ತಿಳಿದುಬರುತ್ತದೆ. ಈತನ ಕರ್ಣಾಟಕದ ಪದ್ಯ ಶೈಲಿಗಿಂತಲೂ ಗದ್ಯಶೈಲಿಯೂ ಮನೋಹರವಾಗಿದೆ ಎಂದಿದ್ದಾರೆ. ಪ್ರಥಮಾಂಶವು ನೇರ ಕಥಾರಂಭದಿಂದ ಮುದ್ರಿತವಾಗಿದ್ದು ಟೀಕೆಗಳನ್ನು ಒಳಗೊಂಡಿದೆ.

---

[39] ಚಿಕ್ಕದೇವರಾಯ ವಂಶಾವಳಿ –ಅನುವಾದ ಮ.ಭಾ. ಭೋಯಿ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೯೯

ಚತುರ್ಥಾಂಶದಲ್ಲಿ ಕೃತಿಯ ವಿಚಾರವನ್ನು ಚರ್ಚಿಸಲಾಗಿದ್ದು. ಚಿಕುಪಾಧ್ಯಾಯ ಇದರ ರಚನಾಕಾರನಲ್ಲ ಎಂಬ ಸಂದೇಹವನ್ನು ಹುಟ್ಟಿಸುವುದೆಂದೂ ಹೇಳದ್ದಾರೆ. ಕೆಲವು ಕಡೆಗಳಲ್ಲಿ ಪರಾಶರ ಮಹರ್ಷಿಗಳು ಅನುವಾದ ಮಾಡಿರುವ ಶ್ಲೋಕಗಳನ್ನು ಮದ್ರಿಸಿರುವುದಾಗಿ, ಅದರ ಪ್ರಾಮುಖ್ಯತೆಯನ್ನು ಹೇಳಬೇಕಾಗಿಲ್ಲವೆಂದು ಅದು ಅತ್ಯಾದರಣೀಯವಾಗಿರುವುದೆಂದು ಕವಿಚರಿತೆಯು ಪಂಚಮಾಂಶದಲ್ಲಿ ವಿಸ್ತೃತವಾಗಿದೆ ಎಂದು ಉಲ್ಲೇಖಿಸಿದ್ದಾರೆ.

ಇದರ ಚತುರ್ಥಾಂಶದಲ್ಲಿ ಮಾತ್ರ ಪ್ರತಿಗಳ ಬಗ್ಗೆ ಹೇಳಲಾಗಿದೆ. ಪ್ರಥಮ ಮತ್ತು ಪಂಚಮಾಂಶದಲ್ಲಿ ಬಳಸಿದ ಪ್ರತಿಯ ಬಗ್ಗೆ ತಿಳಿದುಬರುವುದಿಲ್ಲ. ಚತುರ್ಥಾಂಶವು ೨ ಮಾತೃಕೆಗಳಿಂದ ಮುದ್ರಿತವಾದ ಕೃತಿ. ಈ ಎರಡೂ ಮಾತೃಕೆಗಳು ಬಹಳ ಅಶುದ್ಧವಾಗಿದ್ದು ಪಠ್ಯದ ಮಧ್ಯದಲ್ಲಿ ಗ್ರಂಥಪಾತವಾಗಿರುವುದಾಗಿ ಹೇಳದ್ದಾರೆ. ' ಈ ಮಾತೃಕೆಯನ್ನು ಸಂಸ್ಕೃತದ ತೆಲುಗು ಲಿಪಿಯಲ್ಲಿ ಮುದ್ರಿತವಾಗಿರುವ ಮೂಲ ಗ್ರಂಥದೊಡನೆ ಆಮೂಲಾಗ್ರವಾಗಿ ಹೋಲಿಸಿ ಗ್ರಂಥಪಾತಾವಾಗಿದ್ದ ಕಡೆಯನ್ನು ಸೇರಿಸಬೇಕಾಗಿದ್ದುದ್ದನು ಸೆರಿಸಿರುವುದಾಗಿ ತಿಳಿಸಿದ್ದಾರೆ. ಪಾಠಾಂತರವನ್ನು ಸೂಚಿಸಿರುವುದರಲ್ಲಿ 'ಕ' ಪ್ರತಿಯದು ಎಂದಿರುವುದು ಗಮನಾರ್ಹ.

ಇದರಲ್ಲಿ ಪಾಠಾಂತರ ತಿಳವಳಿಕೆಗಾಗಿ ಹೊಸದಾಗಿ ಸೇರಿಸಲ್ಪಟ್ಟ ಭಾಗವನ್ನು ಆವರಣ ಚಿಹ್ನೆಯಲ್ಲಿ ಗರ್ಭೀಕರಿಸಿ ಆ ಸಂಸ್ಕೃತ ಮಾತೃಕೆಗಳೂ ಈ ಕನ್ನಡದ ಮಾತೃಕೆಗಳಿಗೆ ಇರುವ ಭೇದಗಳನ್ನು ಪಾಠಾಂತರವಾಗಿ ತೋರಿಸಿಯೂ ಈ ಕನ್ನಡ ಮಾತೃಕೆಗಳಲ್ಲಿ ಕೆಲವು ಕಡೆಗಳಲ್ಲಿ ಪರಾಶರ ಮಹರ್ಷಿಗಳು ಅನುವಾದ ಮಾಡಿರುವ ಶ್ಲೋಕಗಳನ್ನು ಅನುವಾದ ಮಾಡಿಯೂ ಮುದ್ರಿಸಿರುವುದಾಗಿ ತಿಳಿಸುತ್ತಾರೆ. ಅತ್ಯಾವಶ್ಯಕವೆಂದು ತೋರಿದ ಭಾಗಕ್ಕೆ ಟೀಕೆಯನ್ನು ಬರೆದಿರುವುದಾಗಿ ಹೇಳೀದ್ದಾರೆ. ಸಂಸ್ಕೃತ ಮೂಲ ಮಾತೃಕೆಯಲ್ಲಿ ತಪ್ಪು ಬಿದ್ದಿರುವಹಾಗೆ ತೋರಿದ ಭಾಗವನ್ನು ಸೂಚಿಸಿದ್ದಾರೆ. ರಾಜರುಗಳ ನಾಮಗಳು ಬಹಳ ಬೇಧವಾಗಿರುವುದನ್ನು ಗುರುತಿಸಿ ತೋರಿಸಿರುವುದಾಗಿ ತಿಳಿಸಿದ್ದಾರೆ.

ಉದಾಹರಣೆ

ಪ್ರಥಮಾಂಶದ ಪಾಠಾಂತರಗಳು

೧. ಪುಟ ೯೪ ರ ಪಾಠದಲ್ಲಿ 'ವಿನಯಪೂರ್ವಕ ಪಾಠಾಂತರ ' ಪ್ರಣಯ ಪೂರ್ವಕ ಸಂ.ಮಾ. ಪಾಠ

೨. ಪುಟ ೧೩೭ರ ಪಾಠದಲ್ಲಿ 'ಕ್ರೋಧವಶೆಯ' ಪಾಠಾಂತರದಲ್ಲಿ ಕೋಪವಶರಾದವರು ಎಂದು ಮಾತೃಕೆಯಲ್ಲಿದೆ.

ಚತುರ್ಥಾಂಶದಲ್ಲಿ

೧. ಪುಟ ೪ ರ ಪಾಠದಲ್ಲಿ "ಹತ್ತು ಅಶ್ವಮೇಧ ಯಾಗವಮಾಡಿದ" ಎಂದಿದ್ದರೆ ಇದರ

ಪಾಠಾಂತರವನ್ನು ಅಡಿ ಟಿಪ್ಪಣಿಯಲ್ಲಿ "ಅವನಿಂ ಸೋಮದತ್ತಂ, ಅವನಿಂ ವರ್ಧನಂ, ವರ್ಧನನಿಂ ದಶಾಶ್ವಮೇಧಿಗಳಾದ ರಾಯರುಗಳ ಮಧ್ಯದಲ್ಲಿ ಅಜಹಾರನೆಂಬಾತಂ ಆತನ ಕುಮಾರಂ ಜನಮೇಜಯಂ" ಎಂದು ಈ ಮಾತೃಕೆಯ ಪಾಠ ಎಂದಿದೆ.

೨. ಪುಟ ೩೭ ರಲ್ಲಿ 'ಶತಧನ್ವನು' ಎಂದಿದ್ದು ಪಾಠಾಂತರವನ್ನು 'ಸನದ್ವಾನನು' ಎಂದು ಕೊಟ್ಟಿದ್ದಾರೆ.

ಪಂಚಮಾಂಶದಲ್ಲಿ

೧. ಪುಟ ೮೪ ರಲ್ಲಿ 'ಪರಪ್ರಾಪ್ತವಾದ' ಎಂದಿದ್ದರೆ ಅಡಿ ಟಿಪ್ಪಣಿಯಲ್ಲಿ ಇದು ಹೆಚ್ಚೆಂದು ತೋರುತ್ತದೆ ಎಂದು ನೀಡಿದ್ದಾರೆ.

೨. ಪುಟ ೧೩೩ ರಲ್ಲಿ ಕಾಲಕಳೇಬರನಾದ ಎಂದಿದ್ದರೆ ಪಾಠಾಂತರವು ನಿಷ್ಕಾಲಕಳೇಬರನಾದ ಎಂದು ಕೊಟ್ಟಿದ್ದಾರೆ.

ಟೀಕೆ ಟಿಪ್ಪಣಿ

"ಚಿಕುಪಾಧ್ಯಾಯನ ವಿಷ್ಣುಪುರಾಣ" ಇದರಲ್ಲಿ ಪ್ರತಿ ಪುಟದ ಕೊನೆಯಲ್ಲಿ ಟೀಕೆಗಳನ್ನು ನೀಡಿರುವುದು ಗಮನಾರ್ಹ

ಉದಾಹರಣೆಗೆ: ಪ್ರಥಮಾಂಶದಲ್ಲಿ

೧. *ಅನುಲೋಮ ವಿಲೋಮಾದಿ

ಟೀಕು* ಉತ್ತಮ ಬೀಜದಿಂದ ನೀಚ ಕ್ಷೇತ್ರದಲ್ಲಿ ಹುಟ್ಟಿದ ಜಾತಿ- ಅನುಲೋಮ ಜಾತಿ

ನೀಚ ಬೀಜದಿಂದ ಉತ್ತಮ ಕ್ಷೇತ್ರದಲ್ಲಿ ಹುಟ್ಟಿದ ಜಾತಿ- ವಿಲೋಮಜಾತಿಯೆನಿಸಿಕೊಳ್ಳುವುದು.

೨. *ಆ ಪ್ರಜೆಗಳೊಳು ದೇವಾಗಿಯಾಗಿ ಸ್ಥಾವರಾಂತಗಳಾದ

ಟೀಕು * ಇದರಿಂದ ಜೀವಕೋಟಿಗಳು ಬ್ರಹ್ಮದೇವನ ಮನಸ್ಸು ಉದರ ಪಾರ್ಶ್ವ ಮೊದಲಾದ ಸ್ಥಳಗಳಿಂದ ಚತುರ್ವಿದವಾಗಿ ಹುಟ್ಟೋಣವು ಅವುಗಳ ಕರ್ಮಭೇದದಿಂದಲೇ ಎಂಬುದು ವ್ಯಕ್ತವಾಗುತ್ತದೆ.

† ಸೃಷ್ಟ್ಯುಪಯುಕ್ತವಾದ ಶರೀರವನ್ನು ಪರಿಗ್ರಹಿಸಿದನಂದು ತಾತ್ಪರ್ಯ

ಪುಟ ೭೩ ರಲ್ಲಿ ಟೀಕು* ಗೋಚಕ್ರ – ಮಧ್ಯಗತ ಜಿಂತುವಿನಂತೆ ಬಂಡಿಯು ಹೋಗುತ್ತಿರುವಾಗ ಚಕ್ರಗಳ ಮಧ್ಯದಲ್ಲಿ ಸಿಕ್ಕಿದ ಪ್ರಾಣಿಯು ಕ್ಲೇಶವನ್ನು ಅನುಭವಿಸುವಂತೆ ಎಂದು ತಾತ್ಪರ್ಯವಿದೆ.

ಪುಟ ೭೭ ರಲ್ಲಿ 'ದಶಾನನಾಗಿ ಹುಟ್ಟಿ ರಾಘವ ರೂಪದಿಂದ' ಎಂಬುದಕ್ಕೆ

ಟಿಪ್ಪಣಿ : ಬಹುರಾಅಲೋಪ ಭಕ್ತ ಭವತ್ಸಾಕಾಶವಾಪ್ತ ಶರೀರಪಾತೋದ್ಭವ ಪುಣ್ಯಫಲಂ : ಎಂಬುಬಾಗಿ ರಾವಣನಿಗೆ ಮತ್ತೊಂದು ವಿಶೇಷಣವು ಸಂಸ್ಕೃತ ಮಾತೃಕೆಯಲ್ಲಿದೆ ಎಂದು ಉಲ್ಲೇಖಿಸಿದ್ದಾರೆ.

ಪಂಚಮಾಂಶದಲ್ಲಿ *ಅಭೀಕರು = ಗೋಪಾಲಕರು, ಗೊಲ್ಲರು ಎಂದು ಉಲ್ಲೇಖಿಸಿದ್ದಾರೆ.

ಈಕೃತಿಯ ಚತುರ್ಥಾಂಶದಲ್ಲಿ ಮತ್ತೊಂದು ವಿಶೇಷವೆಂದರೆ ಶೋಧನ ಪತ್ರ ಇರುವುದು. ಇದರಲ್ಲಿ ಪುಟ ಸಂಖ್ಯೆ ಪಜ್ತೆ ಸಂಖ್ಯೆಯನ್ನು ಕೊಟ್ಟು ಪಾಠದಲ್ಲಿ ಬಿಟ್ಟಿಹೋದ ಅಕ್ಷರಗಳನ್ನು ಕೊಟ್ಟಿದ್ದಾರೆ.
ಉದಾ: ಪುಟ ೧ ರಲ್ಲಿ ಪಜ್ತೆ ೧೧ ರಲ್ಲಿ 'ಎಂಬು' ಅಷ್ಟೆ ಇದೆ. ಅದನ್ನು ಎಂಬುವ ಎಂದು ಶೋಧನ ಪತ್ರದಲ್ಲಿ ಹೇಳಿದ್ದಾರೆ.

೫. "ಬಾಳಲೋಚನನ ಬತ್ತೀಸಪುತ್ತಳ ಕಥೆಗಳು" ಈ ಗ್ರಂಥದ ಕರ್ತೃ ಭಾಳಲೋಚನನೆಂದು ಗ್ರಂಥಾದಿಯಲ್ಲಿ ಹೇಳಿದ್ದರೂ ಈತನು ಅದರ ಕರ್ತನಲ್ಲ ಎಂದು ತೋರುತ್ತದೆ ಎಂದಿದ್ದಾರೆ. ಏಕೆಂದರೆ ಗ್ರಂಥದ ಕೊನೆಯಲ್ಲಿ ಬಿಟ್ಟರೆ ಬೇರೆಲ್ಲೂ ಇದರ ಉಲ್ಲೇಖವಿಲ್ಲದಿರುವುದೇ ಇದಕ್ಕೆ ಕಾರಣ. ಕಾಲದ ವಿಚಾರ ಹೇಳುತ್ತ ಆ ಚಂಪೂ ಗ್ರಂಥವು ೧೫ ನೇ ಶತಮಾನದಾಗಿದ್ದು ಈ ಗದ್ಯ ಗ್ರಂಥವು ೧೮ನೇ ಶತಮಾನಕ್ಕೆ ಪೂರ್ವದಲ್ಲಿಯೇ ಅಥವಾ ಅದೇ ಕಾಲದಲ್ಲಿ ಹುಟ್ಟಿರಬೇಕೆಂದು ಹೇಳಲು ಸಾಧ್ಯತೆಗಳಿವೆ ಎಂದಿದ್ದಾರೆ.

ಈ ಗ್ರಂಥವು ಪಾಠಕರಿಗೆ ಬಹಳ ಉತ್ಸಾಹವನ್ನು ಉಂಟು ಮಾಡುತ್ತದೆ. ಇದರಲ್ಲಿ ಅನೇಕ ಧರ್ಮಬೋಧನೆಗಳು ಬಾಲಕರ ಮನಸ್ಸಿನಲ್ಲಿ ನಿಲ್ಲುವಂತೆ ಕಥಾ ಮೂಲಕ ನಿರೂಪಿಸಲ್ಪಟ್ಟಿದ್ದು ಕೇವಲ ಪುತ್ತಳಿಗಳು ಹೇಳಿದ ಕಥೆಗಳಲ್ಲದೆ ಭೋಜರಾಜನ ಆಡಳಿತದ ಬಗ್ಗೆಯೂ ಇದ್ದು ಭಾಷಾ ಶೈಲಿಯು ಬಹಳ ರಮಣಿಯವಾಗಿದೆ ಎಂದಿದ್ದಾರೆ.

ಇದು ೨ ಪ್ರತಿಗಳ ಸಹಾಯದಿಂದ ಮುದ್ರಿಸಿರುವುದಾಗಿ ಹೇಳಿದ್ದಾರೆ. ಒಂದು ಮೈಸೂರಿನ ಗೌರ್ನಮೆಂಟ್ ಓರಿಯಂಟಲ್ ಲೈಬ್ರೆರಿಗೆ ಸೇರಿದ ಕತ್ತೆಕಾಗದ ಪ್ರತಿ ಮತ್ತೊಂದು ಓಲೆಗರಿ ಪುಸ್ತಕ.

ಇವುಗಳಲ್ಲದೆ ಪ್ರಾಚೀನ ಚಂಪೂ ಕೃತಿ ಇದ್ದು ಅದರ ಆಧಾರದ ಮೇಲೆ ಈ ಎರಡು ಮಾತೃಕೆಗಳು ಹುಟ್ಟಿರಬೇಕು ಎಂದು ಅಭಿಪ್ರಾಯಪಡುತ್ತಾರೆ. ಸಂಪಾದಕರ ಭಂಡಾರದಲ್ಲಿದ್ದ ಅಶುದ್ಧವಾದ ಚಂಪೂಗ್ರಂಥಕ್ಕೂ ಅಚ್ಚಾಗಿರುವ ಈ ಗ್ರಂಥಕ್ಕೂ ಬಹಳ ವ್ಯತ್ಯಾಸಗಳು ಕಂಡುಬರುವುದರಿಂದ ಇದು ಚಂಪೂ ಗ್ರಂಥದ ಆಧಾರದ ಮೇಲೆ ಹುಟ್ಟಿರಬೇಕೆಂದು ನಿರ್ಧರಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ದೇವಣಾರ್ಯ ಅಥವಾ ಕವಿದೇವನಿಂದ ರಚಿತವಾದ "ದ್ವಾತ್ರಿಂಶತ್ಪುತ್ತಳಿಕೆ" ಎಂಬ ಚಂಪೂವಿನ ಆಧಾರದ ಮೇಲೆಯೂ ಹುಟ್ಟಿರಬೇಕೆಂದು ಹೇಳಲಾಗುವುದಿಲ್ಲ ಎಂದಿದ್ದಾರೆ.
ಓಲೆ ಮಾತೃಕೆಯ ಕೊನೆಯಲ್ಲಿ " ಕ್ಷೇಮೇಂದ್ರ ಭೂಭುಜಂ ಪೇಳ್ದ ಹದಿನೆಂಟನೆಯ ಲಂಬದ ಬತ್ತೀಸಪುತ್ತಳಿಕಥಾ ಪ್ರಬಂಧ ಇಂಪೊದವಿದ ಬೃಹತ್ಕಥಾರಸದೊಳ್ಳಿಜಗಕ್ಕೆ ನೆಗಳ್ತೆನೆತ್ತಸಮ್ದನುಪಮವಿಕ್ರಮಾಕ್ರನ ಸುವೀರತೆಯ ಕಡುಭೋಗಗದೇಳ್ಗೆಯೆಂಬ ಅವನುತ್ತಮನಾದ ಪುತ್ತಳಿಯ ಸತ್ಕಕಥೆಯ ಕನಕ ಪಾಂಡುರಂಗನಾಥನ ಸುತ ಭಾಳಲೋಚನಕರಂ ಕವಿದೇವನಿಂದ

ನೆಗಳ್ದದಂ ಸಲೆ ಧೈರ್ಯಾಮೃತಮಂ ನೆಗಳ್ತವಡೆದಿರ್ಪ ವಾಮನೂರಿಕ ಕಥಾದಿನೆಯಂ ಮೇಣಾಸಕುನ ಪ್ರಪಂಚ ಚಯಮಂ ಬತ್ತೀಸಸತ್ಪುತ್ರಿಕಾಸ್ತೀಲ ಸಿಂಹಾಸನದೊಂದು ಸತ್ಕಕಥಗಳ ರಕ್ಷಾಧ್ವರಧ್ವಂಸಮುಜ್ವಲ ಚಾರಿತ್ರವನ್ನೆದೆ ನಿರ್ಮಿಸಿದನೀ ಬಾಳೇಕ್ಷದೇವೊತ್ತಮಂ ಕುಳರ್ವೆರಲಂತೆ ನಂದನ ತಮಾಲದ ಕಣ್ಬಳಂತೆ ಪುಷ್ಪ ಮಂಡಲ ನವಗಂಧದಂತೆ ಪುದಿದಿನ್ನವಿರಂತೆ ನಿಜಪ್ರಿಯಾಂಗನೋಜ್ವಲರಶ್ಮಿಯಂತೆ ಚೆಂದನದಂತೆ ಇದು ಇನ ಸೌರಭದಂತೆ ಜನರಂ ತಲೆದೂಗಿಸದೇ ನಿರಂತರಂ"- ಎಂದಿದೆ.

ಇದನ್ನು ನೋಡಿದರೆ ಭಾಳೇಕ್ಷದೇವನೆಂಬುವನು ವಟ ಗ್ರಂಥಗಳಲ್ಲಿ ಬತ್ತೀಸಪುತ್ತಳಯೆಂಬುದೊಂದು ಗ್ರಂಥವು ಇರುವುದೆಂದು ಆ ಗ್ರಂಥವು ಚಂಪೂ ರೂಪದಲ್ಲಿರಬೇಕೆಂದೂ ೧೩ನೆ ಪುಟದ ಪಾಠಾಂತರದಿಂದ ತಿಳಿದುಬರುತ್ತದೆ. ಆ ಚಂಪೂ ಗ್ರಂಥದಿಂದ ಯಾರೊ ಒಬ್ಬ ಬಾಲಕರ ಅನುಕೂಲಕ್ಕಾಗಿ ಹೊಸಗನ್ನಡದಲ್ಲಿ ಬರೆದು ಅದಕ್ಕೆ ಆ ಕವಿಯ ಹೆಸರನ್ನೆ ಕೊಟ್ಟಿರಬಹುದೆಂದು ತೋರುತ್ತದೆ ಎಂದು ಹೇಳಿದ್ದಾರೆ.

ಇದರಲ್ಲಿ ಪಾಠಾಂತರಗಳನ್ನು ನೀಡಿದ್ದು ಅವುಗಳನ್ನು ಅಡಿ ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ ಜೊತೆಗೆ ವಿಶೇಷ ವಿಚಾರಗಳನ್ನು ಹೇಳಿದ್ದಾರೆ.

ಪೀಠಿಕೆ ಭಾಗವು ಒಂದು ಪ್ರತಿಯಲ್ಲಿ ಮಾತ್ರ ಇರುವುದಾಗಿ ಗುರುತಿಸಿದ್ದಾರೆ. † ಈರೀತಿಯ ಚಿಹ್ನೆಗಳನ್ನು ನೀಡಿ ಗ್ರಂಥಪಾಠದ ಬಗ್ಗೆಯೂ ತಿಳಿಸಿದ್ದಾರೆ.

ಪಾಠಾಂತರಕ್ಕೆ ಉದಾ: ಪುಟ ೧೩ ರಲ್ಲಿ "ಧನಿಕತನದಲ್ಲಿ ಕುಬೇರನಂತೆ. ದಾತೃತ್ವದಲ್ಲಿ ಕರ್ಣನಂತೆ. ಸತ್ಯದಲ್ಲಿ ಹರಿಶ್ಚಂದ್ರನಂತೆ". ಎಂದು ಪಾಠದಲ್ಲಿದರೆ ಅದರ ಪಾಠಾಂತರವನ್ನು "ಧನಿಕನೆಂಬರೆ ಕುಬೇರಂಗೆಣೆ. ದಾನಿಯೆಂಬರೆ ಕರ್ಣಂಗೆಣೆ. ಸತ್ಯ ನಿಧಿಯೆಂಬರೆ ಹರಿಶ್ಚಂದ್ರಂಗೆಣೆ" ಎಂದು ಅಡಿಟಿಪ್ಪಣಿಯಲ್ಲಿ ನೀಡಿದ್ದಾರೆ.

ಪುಟ ೩೫ ರಲ್ಲಿ † ಈ ಚಿಹ್ನೆಯನ್ನು ಬಳಸಿ ಪಾಠಾಂತರವನ್ನು ಕೊಟ್ಟಿದ್ದಾರೆ. "ಕಳುಹಿಸಿ ತಾನಿಲ್ಲಿಗೆ" ಎಂದಿದ್ದರೆ ಪಾಠಾಂತರವು " ಕಳುಹಿಸಲಾಬ್ರಾಹ್ಮಣಂ ರಾಯನಂ ಹಲಿಸಿ ಕೊಂಡಾಡಿ ಆತನೊಳ್ ಬೀಳ್ಕೊಂಡು ಹೋದನು ಕಣಾ" ಎಂದು ತೋರಿಸಿದ್ದಾರೆ.

ಪುಟ ೭೩ ೧. ಉತ್ತರದಿಕ್ಕಿನಲ್ಲಿ' ಎಂದಿದ್ದರೆ ಪಾ. ೧ ಉತ್ತರದೇಶಕ್ಕುಂ. ಎಂದು ಪಾಠದಲ್ಲಿ ೨ ಬಾಯಾಱಿ ಅದಕ್ಕೆ ೨. ದಾಹ ಕಂಡು. ಎಂದೂ ೩ ಅವಳ ಇರುವುದಕ್ಕೆ ಸುಸ್ತಿನಿಂದ ಬಳಸಿರುವವಳ ಎಂದು ನೀಡಿದ್ದಾರೆ . ಇನ್ನೂ ಕಲವು ಪುಟಗಳಲ್ಲಿ ಕಾಲು ಪುಟದಷ್ಟು ಪಾಠಾಂತರಗಳನ್ನು ನೀಡಿರುವುದನ್ನು ಗಮನಿಸಬಹುದಾಗಿದೆ.

****

ಅಧ್ಯಾಯ ೪

ಶಾಸ್ತ್ರ ಗ್ರಂಥಗಳ ಸಂಪಾದನೆ

೧. ನಿಘಂಟುಗಳು

ನಿಘಂಟುಗಳಿಗೆ ಕನ್ನಡ ಸಾಹಿತ್ಯದಲ್ಲಿ ಶತಮಾನಗಳ ಇತಿಹಾಸವಿದೆ. ನಿಘಂಟು ಎಂದರೆ ಒಂದು ಭಾಷೆಯಲ್ಲಿನ ಪದಗಳ ಇತಿಹಾಸ ಎಂದೇ ಹೇಳಬಹುದು. ಇತಿಹಾಸದಲ್ಲಿ ದಾಖಲಾದ ಮೊಟ್ಟಮೊದಲ ನಿಘಂಟು ಕ್ರಿ.ಪೂ. ೨ನೇ ಶತಮಾನದಷ್ಟು ಹಳೆಯದು. ಒಂದು ಉತ್ತಮ ಭಾಷಾ ಸ್ವರುಪವನ್ನು ಪಡೆದು ವ್ಯಾಕರಣ ಶುದ್ಧವಾಗಿ ಕಾವ್ಯಾಭಾಸ ಮಾಡಲು ನಿಘಂಟುವಿನ ಅಗತ್ಯ ಅತಿ ಮುಖ್ಯವಾದುದು. ಛಂದೋಬಂಧವಾಗಿ ಅಲಂಕಾರದಿಂದ ಕೂಡಿದ ಒಂದು ಕೃತಿಯಲ್ಲಿನ ರಸಾಸ್ವಾದನೆಯನ್ನು ಅಸ್ವಾದಿಸಿ ಜ್ಞಾನವೃದ್ಧಿಗೊಳಿಸಿಕೊಳ್ಳಲು ನಿಘಂಟುಗಳು ಓದುಗನ ಕೈಪಿಡಿಯಂತಿರಬೇಕು. ಅಂತಹ ಪ್ರಾಚೀನ ನಿಘಂಟುಗಳನ್ನು ನಾವು ಇಂದಿಗೂ ಕಾಣಬುಹುದಾಗಿದೆ.

ರಾಮಾನುಜಯ್ಯಂಗಾರ್ ರವರು ಕೆಲವು ನಿಘಂಟುಗಳನ್ನು ಸಂಪಾದಿಸಿ ಪ್ರಕಟಿಸಿರುವುದು ಕನ್ನಡ ಸಾಹಿತ್ಯ ಭಂಡಾರಕ್ಕೆ ಕಳಶ ಪ್ರಾಯವಾಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದಾಗಿದೆ. ೧. ಚತುರಾಸ್ಯ ನಿಘಂಟು. ೨. ಕರ್ನಾಟಕ ನಿಘಂಟು. ೩. ಸೂರ್ಯ ಕವಿ ಕೃತಂ ಕವಿಕಂಠಹಾರಂ. ೪ ಕರ್ನಾಟಕ ಶಬ್ದಸಾರಂ ಮತ್ತು ೫. ಕರ್ಣಾಟಕ ಸಂಜೀವನಂವೆಂಬ ಐದುಕುಳ ನಿಘಂಟುಗಳನ್ನು ಸಂಪಾದಿಸಿದ್ದಾರೆ.

ಇದರ ಒಳಪುಟಗಳಲ್ಲಿ ಪೀಠಿಕೆ. ಉಪೋದ್ಘಾತ. ಮುನ್ನುಡಿ. ಭೂಮಿಕೆ ಮುಂತಾದವುಗಳಲ್ಲಿ ಕವಿ. ಕೃತಿ. ಕಾಲ. ಸ್ಥಳ ಇವುಗಳ ಬಗ್ಗೆ ಚರ್ಚಿಸಲಾಗಿದ್ದು ಈ ನಿಘಂಟುಗಳನ್ನು ಪ್ರಕಟಿಸಲು ಸಂಪಾದಿಸಿದ ಪ್ರತಿಗಳ ಬಗ್ಗೆಯು ಮಾಹಿತಿಯನ್ನು ನೀಡಿದ್ದಾರೆ. ಗ್ರಂಥಗಳನ್ನು ಸಂಪಾದಿಸಿದ ನಂತರ ಪರಿಷ್ಕರಿಸಲು ಸಹಾಯ ಮಾಡಿದ ವ್ಯಕ್ತಿಗಳಿಗೆ ಕೃತಜ್ಞನೆಗಳನ್ನು ಸಲ್ಲಿಸಿರುವುದು ಸೂಚಿತವಾಗಿದೆ. ಕೃತಿಯಲ್ಲಿ ಬರುವಂತ ವಿಶೇಷ ವಿಚಾರಗಳಾದ ಪಾಠಾಂತರ. ವ್ಯಾಕರಣ. ಛಂದಸ್ಸು. ಅಲಂಕಾರ. ಮುಂತಾದ ಶಾಸ್ತ್ರ ವಿಚಾರಗಳನ್ನು ಅಡಿ ಟಿಪ್ಪಣಿಗಳಲ್ಲಿ ಚಿಹ್ನೆಗಳ ಮುಖಾಂತರ ತಿಳಿಸಿದ್ದಾರೆ.

ಅ. ನಿಘಂಟುಗಳಲ್ಲಿನ ವಿಶೇಷವಿಚಾರ ಮತ್ತು ವಿಮರ್ಶೆ

೧. ಚತುರಾಸ್ಯ ನಿಘಂಟನ್ನು ಗಗನಾನ್ವಯತಿಲಕ ಹಂಪರಸನ ಮಗ **ಚತುರಾಸ್ಯ** ಎಂಬ ಕವಿ ತಿಪ್ಪರಸನ ಆಜ್ಞಾನುಸಾರವಾಗಿ ಈ ಕೃತಿಯನ್ನು ರಚಿಸಿರುವುದಾಗಿ ತಿಳಿಸಿದ್ದಾರೆ. ಬೊಮ್ಮಕವಿ. ಬ್ರಹ್ಮಯ್ಯಕವಿ. ಬ್ರಹ್ಮದೇವ. ಬೊಮ್ಮರಸ. ಕುಮಾರ ಬೊಮ್ಮರಸ ಎಂಬುದಾಗಿ ಐದು ಆರು ಕವಿಗಳಿದ್ದು ಇವರಲ್ಲಿ

ಈತನು ಒಬ್ಬೊನೋ ಅಥವಾ ಬೇರೆಯೋ ತಿಳುವುದಿಲ್ಲ ಎಂದಿದ್ದಾರೆ. ತಿಪ್ಪರಸನೆಂಬ ಕವಿಯು ಬರೆದ "ನವರಸಾಲಂಕಾರ" ಎಂಬ ಗ್ರಂಥದಲ್ಲಿ ತನ್ನನು ತಾನು ನಾರಾಯಣಸೂನು ಎಂದು ಕರೆದುಕೊಂಡಿರುವುದಾಗಿ ಈ ಇಬ್ಬರೂ ಕವಿಗಳ ಕಾಲ ಸ್ಥಳ ಯಾವುದು ತಿಳದುಬರುವುದಿಲ್ಲ.

ಈ ನಿಘಂಟನ್ನು ೩ ಪ್ರತಿಗಳ ಆಧಾರದ ಮೇಲೆ ಮುದ್ರಿಸಿರುವುದಾಗಿ ತಿಳಸಿದ್ದಾರೆ.ಅವುಗಳಗೆ ಕ. ಖ. ಗ ಎಂದು ಸಂಕೇತಗಳನ್ನು ಕೊಟ್ಟಿದ್ದು ಈ ಮೂರು ಪ್ರತಿಗಳು ಶುದ್ಧವಾದ ಪ್ರತಿಗಳು. ಒಂದರಲ್ಲಿ ೮೨. ಇನ್ನೊಂದರಲ್ಲಿ, ೧೦೦. ಮತ್ತೊಂದರಲ್ಲಿ ೧೩೪ ಪದ್ಯಗಳವೆ ಎಂದಿದ್ದಾರೆ.

ಇದರಲ್ಲಿ ಪಾಠಾಂತರಗಳನ್ನು ಗುರುತಿಸಿದ್ದು. ಅಡಿ ಟಿಪ್ಪಣಿಯಲ್ಲಿ ಪಾಠಾಂತರಗಳನ್ನು ನೀಡಿದ್ದಾರೆ ಆದರೆ ಇವರು ನೀಡಿದ ಪಾಠವೇ ಬೇರೆಯಾಗಿದೆ.

ಉದಾ:

೧. ಪುಟ ೧೩ರಲ್ಲಿ ಪಾಠವು "ಸಂಪುರಂ ಕಿಱು" ಎಂದಿದೆ ಪಾಠಾಂತರವು "ಸಮರುಂ ಕುರು" ಗ॥ ಎಂದು ಉಲ್ಲೇಖಿತವಾಗಿದೆ.

೨. ಪುಟ ೨೧ರ ಪಾಠದಲ್ಲಿ "ತೊವರೆನೆ ಮುಯ್ವನೆ" ಎಂದಿದ್ದರೆ ಪಾಠಾಂತರವು " ತೊವಲೆನೆ ಮೂಯೆನೆ" ಖ॥ ಎಂದು ಕೊಟ್ಟಿದ್ದಾರೆ

೩. ಪುಟ ೨೩ ರಲ್ಲಿರುವ ಪಾಠದಲ್ಲಿ 'ಬಳರಿ' ಎಂದಿದೆ ಆದರೆ ಅಡಿಟಿಪ್ಪಣಿಯಲ್ಲಿ ಕ॥ ಖ॥ ಪತ್ರಿಯಲ್ಲಿ 'ಬಳಲಿ' ಎಂದಿದೆ ಎಂದು ಹೇಳದ್ದಾರೆ.

- ಇವುಗಳಲ್ಲದೆ ನಕ್ಷತ್ರ ಚಿಹ್ನೆಗಳನ್ನು ಕೊಟ್ಟು ಉಹಾಪಾಠಗಳನ್ನು ನೀಡಿದ್ದಾರೆ *[ಳೆನಲೆಲ]॥ ಎಂಬುದಕ್ಕೆ '*ಳನಲಲ' ಎಂದೂ ಹೇಳದ್ದಾರೆ. ಹಾಗೆಯೇ ಬೇರೆ ಕೃತಿಯಲ್ಲಿ ಬಳಕೆಯಾದ ಪದಗಳನ್ನು ಉಲ್ಲೇಖಿಸಿದ್ದಾರೆ.
- * ಪಾಣ್ಮನೆಯಾಳ್ವಂ ತುಡುಗುಣಿ। * ಶಬ್ದ ಮಣಿ ದರ್ಪಣದಲ್ಲಿ "ಹಾಣ್ಮನೆ ಹಾಱಿಂ" ಪುಟ ೩೨ ಎಂದು ಹೇಳದ್ದಾರೆ. ಬಹುಷಃ ಪ ಕಾರ ಹ ಕಾರ ವಿಚರಗಳನ್ನು ಸ್ಪಷ್ಟಪಡಿಸಲು ಸೂಚಿಸಿರಬೇಕು.
- ಮೂರು ಶುದ್ಧ ಪ್ರತಿಯೆಂದು ಹೇಳರುವ ಇವರು. ಪಾಠಾಂತರದಲ್ಲಿ ಕೊಟ್ಟಿರುವವುದಕ್ಕು ಪಾಠದಲ್ಲಿ ಬಳಸಿರುವ ಪದಗಳಗೂ ಇರುವ ವ್ಯತ್ಯಾಸಗಳನ್ನು ನೋಡಿದರೆ ಇವರು ಬೇರೆಯದೇ ಆದ ಪ್ರತಿಯನ್ನು ಬಳಸಿರಬೇಕು ಅಥವಾ ಇದು ಇವರ ಉಹಾಪಾಠವಿರಬೇಕು ಎಂದು ತಿಳದುಬರುತ್ತದೆ.

'ಚತುರಾಸ್ಯ ನಿಘಂಟ'ನ್ನು **ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಕಟವಾದ ಚತುರಾಸ್ಯ ಬೊಮ್ಮರಸ – ಸು ೧೪೫೦ ಇತಿವೃತ್ತ** – ಆರ್. ನರಸಿಂಹಚಾರ್ಯರು ಚತುರಾಸ್ಯ ಬೊಮ್ಮರಸನು ೧೪೫೦ ರಲ್ಲಿ ರಚಿಸಿರುವುದಾಗಿ ತಿಳಿಸಿದ್ದು ಕವಿಯ ವಿಚಾರವನ್ನು ಚರ್ಚಿಸಿದ್ದಾರೆ. ಈತ ವೀರಶೈವ ಇವನಿಗೆ 'ಚತುರಾನನ' ಎಂದೂ ಹೆಸರಿದೆ. ಈ ಗ್ರಂಥವನ್ನು ಗಂಗಾನ್ವಯ ತಿಲಕ ಹಂಪರಸನ ಮಗ ತಿಪ್ಪರಸನೆಂಬ ಬ್ರಾಹ್ಮಣನ ಇಷ್ಟಾನುಸಾರವಾಗಿ ಬರೆದೆನೆಂದು ಹೇಳಿದ್ದಾನೆ. ಚತುರಾಸ್ಯ ನಿಟಂಟಿನಲ್ಲಿ "ಸಂತಸದಿನಱಿಪಿದಂ ಕವಿ ಚಿಂತಾಮಣಿ ಎನಿಪ್ಪ ಸರಸಕವಿ ತಿಪ್ಪರಸಂ" ಈ ತಿಪ್ಪರಸರನು ಗ್ರಂಥ ರಚನೆಗೆ ಸಹಾಯಕವಾಗಿದ್ದನೆಂದು ತೋರುತ್ತದೆ ಎಂದು ಹೇಳಿದ್ದಾರೆ. ಆದರೆ ಕವಿಯ ಕಾಲವನ್ನು ನಿರ್ಧರಿಸುವುದಕೆ ಆಧಾರವಿಲ್ಲ ಎಂದು ಹೇಳಿ, ಸೌಂದರಸ ಪುರಾಣವನ್ನು ಬರೆದ ಬೊಮ್ಮರಸನೂ ಒಬ್ಬ ತಿಪ್ಪರಸನ ಇಷ್ಟಾನುಸಾರವಾಗಿ ಬರೆದೆ ಎಂದು ಹೇಳಿಕೊಳ್ಳುತ್ತಾನೆ ಆದರೆ ಆ ತಿಪ್ಪರಸನು ವೈಶ್ಯಕುಲತಿಲಕನಾದ ಕಾಮನೃಪನ ಮಗನೆಂದು ಹೇಳಿರುವುದರಿಂದ ಆ ಬೊಮ್ಮರಸ ಇವನಲ್ಲವೆಂದು ಊಹಿಸುತ್ತೇವೆ ಎಂದಿದ್ದಾರೆ.[೪೦]

ಇದರಲ್ಲಿ ಕವಿಯ ವಿಚಾರವಾಗಿ ರಾಮಾನುಜಯ್ಯಂಗಾರ್ ಹೇಳಿರುವುದನೇ ಇವರುಕೂಡ ಹೇಳಿದ್ದು ಹೆಚ್ಚಿನ ವ್ಯತ್ಯಾಸಗಳೇನು ಕಂಡುಬರುವುದಿಲ್ಲ. ಹಂಪರಸ ಹೆಸರಿನ ಜೊತೆಗೆ ಬಿರುದೆಂಬತೆ ಇರುವುದನ್ನು ಇಲ್ಲಿ ಗಮನಿಸಿದರೆ ರಾಮಾನುಜಯ್ಯಂಗಾರ್ 'ಗಗನಾನ್ವಯ' ಎಂದಿದ್ದು, ಇದರ ಸಂಪಾದಕರು 'ಗಂಗಾನ್ವಯ' ಎಂದು ಕೊಟ್ಟಿದ್ದಾರೆ ಹಾಗೆಯೇ ತಿಪ್ಪರಸನ ಅಜ್ಞಾನುಸಾರವಾಗಿ ಎಂದು ಹೇಳಿದ್ದರೆ ಇದರಲ್ಲಿ ಇಚ್ಚಾನುಸಾರವಾಗಿ ಎಂದು ಹೇಳಿರುವುದು ಗಮನಾರ್ಹ. ಇವುಗಳನ್ನು ಬಿಟ್ಟರೆ ಕೆಲವು ಪದ್ಯಗಳನ್ನು ಕೊಟ್ಟು ಕವಿಯ ವಿಚಾರವಾಗಿ ಚರ್ಚಿಸಿರುವುದು ವಿಶೇಷ.

ಎನ್. ಬಸವಾರಾಧ್ಯರು ಬಿಡಿ ಬಿಡಿಯಾಗಿ ಪ್ರಕಟಗೊಂಡಿದ್ದ ಈ ನಿಘಂಟಗಳನ್ನು ಇದಲ್ಲದೆ ಇನ್ನು ಬೇರೆ ಬೇರೆ ನಿಘಂಟುಗಳನ್ನು ಸೇರಿಸಿ **"ಹಳಗನ್ನಡ ನಿಘಂಟು"** ಎಂಬ ಶೀರ್ಷಿಕೆಯಲ್ಲಿ ಹೊರತಂದಿದ್ದಾರೆ. ಇವರು **"ಹಳಗನ್ನಡ ನಿಘಂಟು"** ವಿನ ಪೀಠಿಕಾ ಭಾಗದಲ್ಲಿ **'ಚತುರಾಸ್ಯ ನಿಘಂಟು'** ಪ್ರಾಚೀನ ನಿಘಂಟುಗಳಲ್ಲಿ ಅತ್ಯಂತ ಜಟಿಲವಾದುದು ಇದರ ಕವಿ ಕಾಲಗಳು ಸಂದಿಗ್ಧವಾಗಿದೆ ಎಂದಿದ್ದಾರೆ. ಆತನು ಕೃತಿಯ ಆದಿಯಲ್ಲಿ

" ಶ್ರೀ ಮದ್ಗಿರಿಜಾತಾನನ
ತಾಮರಸ ಮಧುಪ್ರಮೋಧಭೃಂಗಂ ದೇವಲ
ಲಾಮಂ ಕೃಪೆಯಿಂದನೆಗೆ ಮ

---

[40] ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ ೫. ಭಾಗ ೨. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ . ಮೈಸೂರು ವಿ.ವಿ ೨೦೦೮ ಪುಟ ೨೫೫.

ನೋಮುದಮಂ ಪಂಪೆಯಾಳ್ದನೀಗನವರತಂ (೧) ಎಂದು ಪಂಪೆಯ ವಿರೂಪಾಕ್ಷನನ್ನು ನೆನೆದಿರುವುದರಿಂದ ಈತನು ಉತ್ತರ ಕರ್ನಾಟಕದವನೇ ಆಗಿರಬೇಕೆಂದು ಹೇಳಬಹುದು ಎಂದಿದ್ದಾರೆ.

ಮುಂದುರೆದು ಬಸವರಾಧ್ಯರು ಉಪಯೋಗಿಸಿರುವ ೨ ಪ್ರತಿಗಳಲ್ಲಿ ೮೨, ೧೦೦ ಮತ್ತು ೧೩೪ ಪದ್ಯಗಳಿವೆ ಎಂದು ತಿಳಿಸಿ ಇವುಗಳಲ್ಲಿ ಒಟ್ಟು ದೊರೆಯುವ ವಿವಿಧ ರೂಪದ ೨೧೩ ಪದ್ಯಗಳಲ್ಲಿ ೧೩೭ ಪದ್ಯಗಳನ್ನು ಪಠ್ಯವಾಗಿ ಅಂಗೀಕರಿಸಿ ಉಳಿದವನ್ನು ಪ್ರಕ್ಷಿಪ್ತ ಎಂದು ಅನುಭಂಧದಲ್ಲಿ ನೀಡಿರುವುದಾಗಿ ಹೇಳಿದ್ದಾರೆ. ೧೩೭ ನೇ ಪದ್ಯದಲ್ಲಿ ಗ್ರಂಥವು ಮುಕ್ತಾಯವಾಗಿರುವುದಕ್ಕೆ ಆಧಾರವಾಗಿ " ಪರಿವಿಡಿದೀ ಕರ್ಣಾಟಂ।

ಸರಸಕವೀಂದ್ರರ್ಕಳೊಳ್ಳಿತಾದುದೆನಲ್ ಬಿ

ತ್ತರಿಸಿದನೊಲವಿಂ ಕವಿ ಬೊ

ಮ್ಮರಸಂ ವಾಕ್ಶ್ರೀನಿಧಾನ ಮುಖತಾಮರಸಂ (೧೩೭) ಎಂದು ಪದ್ಯವನ್ನು ಉದಾಹರಿಸಿದ್ದಾರೆ.

ಮತ್ತು ಇದರ ಆದಿಯಲ್ಲಿ

"ಕವಿಚತುರಾನನನೆಂದೆನಿ

ಸುವ ನಾಮದೆ ದೇಸಿ ತಧ್ಭವಂ ತತ್ಸುಮಮೆಂ

ಬಿವಱಿಂದಮಚ್ಚಗನ್ನಡ

ವಿವರಣೆ ಚಲ್ವಾಗೆ ರಸಿಚಿದಂ ಚತುರಾಸ್ಯಂ(೩) ಎಂದಿರುವುದಲ್ಲದೆ.

"ನೆಲದಮರ್ದುಣಿ ಗಗನಾನ್ವಯ

ತಿಲಕಂ ಹಂಪರಸಸೂನು ತಿಪ್ಪರಸಂ ಪೆ

ಱ್ಲೆ ಚತುರಾನನ ಎನಲಾಂ

ಘಟಿಱಲನೆ ಕರ್ನಾಟಭಿಧಾನಮನುಸಿರ್ದೆಂ "(೪)

ಎಂದು ತಿಳಿಸಿ ತನ್ನ ಕೃತಿಯನ್ನು "ಕರ್ನಾಟಭಿಧಾನ" ಎಂದು ಕರೆದು ಆತನೆ ತಿಳಿಸಿರುವಂತೆ ಇದರಲ್ಲಿ ದೇಸಿ ತತ್ಸಮ ತದ್ಭವ ಪದಗಳಿಗೆ ಅಚ್ಚಗನ್ನಡದ ಶಬ್ದಗಳನ್ನು ನೀಡುತ್ತಾನೆ. ಕಂದಪದ್ಯಗಳಲ್ಲಿ ನಿರೂಪಣೆಗೊಂಡಿರುವ " ಬೇಗುದಿಯನೆ ಸಂತಾಪಂ ಸೂಗುರಿಸಿತೆನಲ್ಕೆ ವಿಭ್ರಮಾರ್ಥಮದಕ್ಕು" ಎಂಬ ಸಣ್ಣ ನಿರೂಪಣೆಯನ್ನು ಕಾಣಬಹುದು. ಎಂದಿದ್ದಾರೆ ಇದನ್ನು ಬಳಸಿಕೊಂಡ ಕಿಟಲ್ ರವರು ಎರಡು ಪ್ರತ್ಯೇಕ ಪ್ರತಿಗಳನ್ನು ಪರಿಷ್ಕರಿಸಿರುವುದಾಗಿ ಹೇಳಿದ್ದಾರೆ. ಉದಾಹರಣೆಗಳನ್ನು ನೀಡಿದ್ದಾರೆ. ಅಮ್ಮಗೊಂಡಲಿ- ಕಟ್ಟವತ್ತಿಗೆ (೧೮). ತೊಟೆ- ಪಾಸಟಿ(೨೫). ಅರೆವುಱು – ಗಾವರ (೩೩) ಮೊದಲಾದ ಕನ್ನಡಪದಗಳನ್ನು. ಮೈಗಣ್ಣ- ದೇವೇಂದ್ರ(೩೧). ಸಂದೆಯ- ಸಂದೇಹ. ಬಿಯದ-ವ್ಯಾದ(೩೫) ಇನ್ನು

ಮುಂತಾದ ತತ್ಸಮ ತದ್ಭವಗಳನ್ನು ಬಳಸಿಕೊಳ್ಳಲಾಗಿದೆ ಎಂದು ಹೇಳಿ ಹಳಗನ್ನಡ ನಿಘಂಟುಗಳಲ್ಲಿ ಒಂದು ಸಾಮಾನ್ಯ ರೀತಿಯ ಒಂದು ಕಿರು ಕೃತಿ ಇದಾಗಿದೆ ಎಂದಿದ್ದಾರೆ.[೪೧]

ಇತರ ಸಂಪಾದಕರು ಹೊಸ ನೆಲೆಯಲ್ಲಿ ವಿಶಿಷ್ಟ ವಿಚಾರಗಳನ್ನು ಚರ್ಚಿಸಿದ್ದರೂ ಇದಕ್ಕೆ ಮೂಲ ರಾಮಾನುಜ್ಯಾಂಗಾರ್ ರವರು ಪ್ರಕಟಿಸಿದ ಗ್ರಂಥವೆಂದೆ ಇಲ್ಲಿ ಸ್ಪಷ್ಟವಾಗುತ್ತದೆ.

೨. **'ಕರ್ನಾಟಕ ನಿಘಂಟು'** ಇದನ್ನು ಗುರುತಿಸಲು ಯಾವ ಹೆಸರನ್ನು ನೀಡದ ಕಾರಣ ಪ್ರಕೃತದಲ್ಲಿ ಇದಕ್ಕೆ 'ಕರ್ಣಾಟಕ ನಿಘಂಟು' ಎಂದು ಹೆಸರು ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಈ ಗ್ರಂಥದಲ್ಲಿ ೯೯ ವೃತ ಮತ್ತು ಕಂದಗಳಿದ್ದು ಱ (ಶಕಟರೇಫ) ಕಾರವನ್ನು ಬಳಸಿರುವುದರಿಂದ ಇದು ವಿಜಾತಿಯವಾಗಿಯೂ ಅಪೂರ್ವವಾಗಿಯೂ ಇರುವ ಅಕ್ಷರ ಸರಣಿಯಲ್ಲಿ ಬರೆದಿರುವುದರಿಂದ ಇದು ಬಹಳ ಪುರಾತನ ಪ್ರತಿಯೆಂದು ಹೇಳಿದ್ದಾರೆ. ೨೫೦ ವರ್ಷಗಳ ಹಿಂದಿನದೆಂದು ಅಭಿಪ್ರಾಯಪಟ್ಟಿದ್ದಾರೆ.

ಇದನ್ನು ಪ್ರಕಟಿಸಲು ಒಂದೇ ಪ್ರತಿ ದೊರಕ್ಕಿದ್ದು ಗ್ರಂಥಾಂತ್ಯದಲ್ಲಿ ಲೇಖಕನು"ಕಬ್ಬಿರಗ ಕೈಪಿಡಿಯೆಂಬಭಿಧಾನಮನೋದುವರ್ಗೆ ಮಂಗಳಮಸ್ತು। ಭದ್ರಂ ಭೂಯಾತ್ । ಭಟ್ಟಾಕಳಂಕಯತೀಂದ್ರಾಯನಮಃ" ಎಂದು ಬರೆದಿದಾನೆಂದು ತಿಳಿಸಿದ್ದಾರೆ.

ಇದರ ಅಡಿಟಿಪ್ಪಣಿಯಲ್ಲಿ ಪಾಠದಲ್ಲಿರುವ ಪದಗಳಿಗೆ ಅರ್ಥಗಳನ್ನು ನೀಡಿ " ಶ.ದ.ಪು" ಎಂದು ಸಂಕ್ಷಿಪ್ತಾಕ್ಷರಗಳನ್ನು ನೀಡಿದ್ದಾರೆ. ಅದೇ ರೀತಿ ಚತುರಾಸ್ಯ ಎಂದು ನೀಡಿರುವುದನ್ನು ಗಮನಿಸಿದರೆ, ಈ ನಿಘಂಟಿನಲ್ಲಿ ಬಳಕೆಯಾದ ಪದಗಳು ಶಬ್ದಮಣಿ ದರ್ಪಣದಲ್ಲಿಯೂ ಚತುರಾಸ್ಯ ನಿಘಂಟುಗಳಲ್ಲಿಯೂ ಬಳಕೆಯಾಗಿರುವ ಪದಗಳೆಂಬುದು ತಿಳಿದುಬರುತ್ತದೆ.

ಉದಾಹರಣೆಗೆ:

ಪದ್ಯದ ಸಂಖ್ಯೆ ಕೊಟ್ಟು ಪಾಠಾಂತರಗಳನ್ನು ಕೊಟ್ಟಿದ್ದಾರೆ ಹೆದ್ದು ಶಬ್ದಮಣಿ ದರ್ಪಣದ ಪದ್ಯಗಳನ್ನು ಮತ್ತು ಇತರ ನಿಘಂಟಿನ ಪದ್ಯಗಳನ್ನು ಉಲ್ಲೇಖ ಮಾಡಿರುವುದು ಕಂಡುಬರುತ್ತದೆ.

೧. ಪುಟ ೪ ಪಾಠದಲ್ಲಿ ಮಮ್ಮಟಿ ಎಂದಿದ್ದರೆ ಅದಕ್ಕೆ ಅಡಿಟಿಪ್ಪಣಿಯಲ್ಲಿ ಮಮ್ಮಟಿ – ಈ ಅರ್ಥದಲ್ಲಿ ಶಬ್ದಮಣಿ ದರ್ಪಣ ಪುಟ ೩೨ ರಲ್ಲಿ ಮಣ್ಮಟಿ ಎಂದಿದೆ ಎಂದಿದ್ದಾರೆ.

೨. ಪುಟ ೫ ರ ಪಾಟದಲ್ಲಿ ಕುಡಿಯಂದಂ ಎಂಬುದಕ್ಕೆ ಚತುರಾಸ್ಯ ನಿಘಂಟಿನಲ್ಲಿ ಕುಡಿಯಿಂ ಶೂದ್ರಂ ಎಂದು ಇದೆ ಎಂದು ತಿಳಿಸಿದ್ದಾರೆ.

೩. ಪುಟ ೧೦ ರ ಅಡಿಟಿಪ್ಪಣಿಯಲ್ಲಿ ಬವಸಂ – ಬವಸು. ಶ. ದ. ಪು ೪೦೫ ಎಂದು ಕೊಟ್ಟಿದೆ.

---

[೪೧] ಕನ್ನಡ ಸಾಹಿತ್ಯ ಚರಿತ್ರೆ. ಪುಟ ೨೩೦–೨೩೧. ಸಂಪುಟ ೫. ಭಾಗ ೨. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ . ಮೈಸೂರು ವಿ.ವಿ ೨೦೦೮

೪. ಪುಟ ೧೧ ರ ಅಡಿಟಿಪ್ಪಣಿಯಲ್ಲಿ ನಿಗಂ- 'ನಿಗ್ಗವಮೆನೆ ಗಜದಂತಂ' ಚತುರಾಸ್ಯ. ಶ.ದ.ಪು ೪೦೩ ಎಂದು ನೀಡಿದ್ದಾರೆ.

ಹಾಗೆಯೇ ಈಗ್ರಂಥದ ಆವರಣದಲ್ಲಿ ಕೊಟ್ಟ ಪಾಠಗಳಿಗೆ ಅಡಿಟಿಪ್ಪಣಿಯಲ್ಲಿ ಊಹಾಪಾಠಗಳನ್ನು ಪ್ರತ್ಯೇಕ ಲೇಖನ ಚಿಹ್ನೆಗಳಿಂದ ಸೂಚಿಸಿರುವುದನ್ನು ಗಮನಿಸಬಹುದು.

ಎನ್. ಬಸವಾರಾಧ್ಯರವರು **"ಕರ್ನಾಟಕ ನಿಘಂಟು"** ಕೃತಿಗೆ ೧೮೯೩ರಲ್ಲಿ ಹೊರಬಂದ ಅಚ್ಚಿನ ಪ್ರತಿಯೇ ಮೂಲ ಎಂದಿದ್ದಾರೆ. ಇವರ '**ಹಳಗನ್ನಡ ನಿಘಂಟು**'ವಿನಲ್ಲಿ ಈ ನಿಘಂಟನ್ನು ಸೇರಿಸಿ ಉತ್ತಮವಾಗಿ ಮುದ್ರಿಸಿದಾರೆ.

೩. **'ಸೂರ್ಯ ಕವಿ ಕೃತಂ ಕವಿಕಂಠಹಾರಂ'** ಈಗ್ರಂಥದ ಪೀಠಿಕಾ ಭಾಗದಲ್ಲಿ ಕವಿಯ ಕಾಲದ ಬಗ್ಗೆ ಚರ್ಚಿಸಲಾಗಿದ್ದು. ಈ ನಿಘಂಟನ್ನು ರಚಿಸಿದ ಕವಿಯ ಹೆಸರು ಸೂರ್ಯ. ಈತ ಬ್ರಾಹ್ಮಣ. ತಂದೆ ಕರಣಿಕ ಶ್ರೇಷ್ಠನಾದ ತಿಮ್ಮ ಮಂತ್ರಿ. ಕವಿಯ ಪೋಷಕ ಧಳಾಂಕಭೀಮನೆಂಬ ಬಿರುದುಳ್ಳ ಕೃಷ್ಣರಾಜ ಪುತ್ರನಾದ ವೀರವೆಂಕಟಾದ್ರಿ ರಾಜನ ಆಜ್ಞಾನುಸಾರ ಬರೆದಂತೆ ಹೇಳಿರುವುದಾಗಿ ತಿಳಿಸಿದ್ದಾರೆ. ಈತನ ಕಾಲವು ಕೆಲವು ಶಾಸನಗಳಲ್ಲಿ ಒಂದೊಂದು ರೀತಿಯಾಗಿದ್ದು ಈತ ೧೭ ನೇ ಶತಮಾನದವನೆಂದು ತಿಳಿಸಿದ್ದಾರೆ.

ಈ ಗ್ರಂಥವು ೨೭೧ ಕಂದಪದ್ಯಗಳಲ್ಲಿ ಬರೆದಿದ್ದು ಈ ಕವಿಯು ಪೂರ್ವ ನಿಘಂಟನ್ನು ನೋಡಿ ಈ ಗ್ರಂಥವನ್ನು ರಚಿಸಿದಂತೆ ಹೇಳುತ್ತಾನೆ. ಕರ್ನಾಟಕ ಕಾವ್ಯ ಮಂಜರಿಯಲ್ಲಿ ಅಚ್ಚಾದ ಕರ್ನಾಟಕ ಶಬ್ದಸಾರವನ್ನು ಬಹು ಮಟ್ಟಿಗೆ ಹೋಲುವುದೆಂದು ಗುರುತಿಸಿದ್ದಾರೆ.

ಈ ನಿಘಂಟಿನ ಪದ್ಯಗಳಿಂದ ಇದರಲ್ಲಿನ ದೋಷಗಳನ್ನು ಹುಡುಕಿದ್ದಾರೆ. ಈ ನಿಘಂಟಿನಲ್ಲಿ ಇರುವ ಪದಗಳು 'ಶಬ್ದಸಾರ'ದಲ್ಲಿ ದೊರಕುತ್ತವೆ. ಮತ್ತು 'ಶಬ್ಧಸಾರ'ದಲ್ಲಿನ ಕೆಲವು ಪದಗಳನ್ನು ಈತ ಬಿಟ್ಟಿದ್ದಾನೆ ಎಂದು ಗುರುತಿಸಿದ್ದಾರೆ.

ಈ ನಿಘಂಟಿಗೆ ಪ್ರತಿಯನ್ನು ಮೇ॥ಎಲ್. ರೈಸ್ ರವರು ಕಳುಹಿಸಿಕೊಟ್ಟರೆಂದೂ ಕವಿಯಕಾಲವನ್ನು ಶಾಸನಗಳ ಆಧಾರದಿಂದ ಮ॥ರಾ॥ ಆರ್. ನರಸಿಂಹಾಚಾರ್ಯರು ತಿಳಿಸಿದರೆಂದು ಅವರುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ. ಇದರಲ್ಲಿ ಯಾವುದೇ ಪಾಠಾಂತರವಾಗಲೀ. ವಿಶೇಷ ವಿಚಾರಗಳಾಗಲೀ ಕಂಡುಬರುವುದಿಲ್ಲ. ಗ್ರಂಥದ ಕೊನೆಯಲ್ಲಿ ಕರ್ನಾಟಕ ಕಾವ್ಯಮಂಜರಿಯ ಗ್ರಂಥಪಟ್ಟಿಗಳನ್ನು ಮಾತ್ರ ನೀಡಿದ್ದಾರೆ.

ಈ ನಿಘಂಟನ್ನು ಎನ್. ಬಸವಾರಾಧ್ಯರವರು ೧೯೦೨ರಲ್ಲಿ ಹೊರಬಂದ ಅಚ್ಚಿನ ಪ್ರತಿ ಜೊತೆಗೆ ಮತ್ತೆರಡು ಪ್ರತಿಯನ್ನು ಬಳಸಿ ಸಂಪಾದಿಸಲಾಗಿದೆ ಎಂದಿದ್ದಾರೆ. ಈ ನಿಘಂಟನ್ನು **'ಹಳಗನ್ನಡ ನಿಘಂಟು'** ಎಂಬುದರಲ್ಲಿ ಸೇರಿಸಿ ಮುದ್ರಿಸಿದ್ದಾರೆ.

"ಸೂರ್ಯ ಕವಿ ಕೃತಂ ಕವಿಕಂಠಹಾರಂ" ಬಿ. ಎಸ್. ಸಣ್ಣಯ್ಯನವರು ಈ ಕೃತಿಯ ಕರ್ತೃ[೪೨] ಯಾರೆಂದು ತಿಳಿಯದು ಎಂದಿದ್ದಾರೆ. ಆದರೆ ಕೃತಿಯ ಶೀರ್ಷಿಕೆಯೇ ಸೂರ್ಯ ಕವಿಕೃತಂ ಎಂದಿದ್ದರೂ ಅವರು ಕವಿಯ ಬಗ್ಗೆ ಹಾಗೆ ಹೇಳಲು ಕಾರಣವೇನೆಂದು ಸ್ಪಷ್ಟವಾಗುವುದಿಲ್ಲ.

೪. **'ಕರ್ನಾಟಕ ಶಬ್ದಸಾರಂ'** ಇದೊಂದು ವಚನರೂಪದ ನಿಘಂಟು ಮೇ। ಕಿಟಲ್ ಸಾಹೇಬರ ಪ್ರಕಾರ ಇದು ೧೪ ನೇ ಶತಮಾನದಲ್ಲಿ ರಚಿತವಾದದ್ದು ಎಂದು ಹೇಳಲಾಗಿದೆ. ಇದರ ಆಧಾರದಿಂದಲೇ ತೋಂಟದಾರ್ಯನ ಕರ್ಣಾಟಕ ಶಬ್ದಮಂಜರಿ ಎಂಬ ನಿಘಂಟು ಹುಟ್ಟಿರಬೇಕು ಎನ್ನುತ್ತಾರೆ. ಈ ನಿಘಂಟಿನಲ್ಲಿ ೬೭೩ ಖಂಡಗಳಿದ್ದು ೧೪೧೩ ಪದಗಳಿಗೆ ಅರ್ಥ ಕೊಟ್ಟಿರುವುದಾಗಿ ತಿಳಿಸಿದ್ದಾರೆ.

ಇದರ ಪ್ರತಿಯನ್ನು ಮೇ। ರೈಸ್ ಸಾಹೇಬರು ಕಳುಹಿಸಿಕೊಟ್ಟರೆಂದು ಮತ್ತು ಕಿಟಲ್ ರವರು ತಮ್ಮ ಕನ್ನಡ ಡಿಕ್ಷನರಿಯಲ್ಲಿ ಈ ಗ್ರಂಥವನ್ನು ಅನುವಾದಿಸಿದ್ದಾರೆ ಎಂದು ಅವರುಗಳನ್ನು ಸ್ಮರಿಸಿ. ಅವುಗಳ ಸಹಾಯದಿಂದ ಈ ಗ್ರಂಥವನ್ನು ಮುದ್ರಿಸಿರುವುದಾಗಿ ತಿಳಿಸಿದ್ದಾರೆ.

ಈ ನಿಘಂಟಿನಲ್ಲಿ ಕೆಲವು ವಿಶೇಷ ಚಿಹ್ನೆಗಳನ್ನು ಅಡಿಟಿಪ್ಪಣಿಯಲ್ಲಿ ಅರ್ಥಗಳನ್ನು ಕೊಡಲು ಬಳಸಿದ್ದಾರೆ. ಮತ್ತು ಪಾಠಾಂತರಗಳನ್ನು. ವಿಶೇಷ ವಿಚಾರಗಳನ್ನು ತಿಳಿಸಿದ್ದಾರೆ.

ಉದಾ: ಪುಟ ೧೩ ರಲ್ಲಿ $ ಚಿಹ್ನೆಯನ್ನು ಬಳಸಿ ಇದರಲ್ಲಿ ಬಳಕೆಯಾದ ಪದವು ಬೇರೆ ಅಂದರೆ ಶಬ್ದಮಣಿದರ್ಪಣ೨೯೩ ನೇ ಸೂತ್ರದಲ್ಲಿ 'ಪಾಣಿಯದರಂ' 'ಪಾಣಿಯದಾರಂ' ಎಂದು ಬಳಕೆಯಾಗುವುದಿಲ್ಲ ಎಂಬ ವಿಶೇಷ ವಿಚಾರವನ್ನು ಹೇಳಿದ್ದಾರೆ

ಪುಟ ೨೩ ರ ಅಡಿ ಟಿಪ್ಪಣಿಯಲ್ಲಿ ಚಿಹ್ನೆ ಬಳಸಿ ಸಂಗಳಂ– ಜಂಗಳ– ಕಬ್ಬಿಗರ ಕೈಪಿಡಿ ಎಂದು ಹೇಳಿದ್ದಾರೆ. ಹೇಗೆ ಇನ್ನು ಅನೇಕ ಚಿಹ್ನೆಗಳನ್ನು ಬಳಸಿ ಅಡಿಟಿಪ್ಪಣಿಗೆ ಬಳಸಿಕೊಂಡಿರುವುದು ಗಮನಾರ್ಹವಾಗಿದೆ.

ಉದಾ: ಪುಟ ೧ ಪಾಠ "ಬಿಂಕಣ" **$** ಪಾಠಾಂತರವು 'ಬಿಂಕಣಿ' ಎಂದು ತೋರಿಸಿದ್ದಾರೆ.

ಪುಟ ೫ ಪಾಠ 'ಮಿಗವಟ್ಟೆ' **§** ಪಾಠಾಂತರವು 'ಮಿಗವಕ್ಕೆ' ಎಂದಿದೆ

ಪುಟ ೨೦ ಪಾಠ 'ಜೂಳಯ' ¶ ಪಾಠಾಂತರವು 'ಜೂಳೆಯ' ಎಂದು ಕೊಟ್ಟಿದ್ದಾರೆ.

---

[42] ಬಿ.ಎಸ್ ಸಣ್ಣಯ್ಯ. ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ. ಶಾಸ್ತ್ರ ಗ್ರಂಥಗಳು. ಪುಟ. ೩೬೬

ಪುಟ ೨೯ ಪಾಠ 'ಕಡವರಮೆಂದುಂ ಬೈಕೆಯೆಂದು, ನಿಧಾನಂ' $ ಪಾಠಾಂತರವು 'ಕಡವರಮೆಂದು ಬಯಕೆ, ಕಡಾರಂ – ಉಕ್ಕೆವಮೀಕೆಯಕಿಱುದೊಡೆ। ಗಕ್ಕುಮಿವೆಂದಜ್ಜುಮಾಗಿ ನಣ್ಪಂ ಬಿಣ್ಪಂ॥ ಮೊಕ್ಕಳಮೇವುದು ಮರಲೊಳ್ । ನೆಕ್ಕೊರೆಗಳ ಪೊಟ್ಟೆ ಪೊಟ್ಟೆಯಾದಸುನಿನ್ನಂ॥ ಎಂದು ವಿಧಾನಂ. ಎಂದು ಒಂದು ಪ್ರತಿಯಲ್ಲಿದೆ ಎಂದು ಗುರುತಿಸಿದ್ದಾರೆ.

"ಕರ್ನಾಟಕ ಶಬ್ದಸಾರಂ" ವನ್ನು ೧೯೯೭ ರಲ್ಲಿ ಕರ್ನಾಟಕ ಅಧ್ಯಯನ ಸಂಸ್ಥೆಯಲ್ಲಿರುವ ಅಸಮಗ್ರ ಹಸ್ತ ಪ್ರತಿಗಳ ಸಹಾಯದಿಂದ ಸರಿಪಡಿಸಿ ಪ್ರಕಟಿಸಿದ್ದು ಹಿಂದಿನ ಸಂಪಾದಕರ ಅಚ್ಚಿನ ಪ್ರತಿಯಲ್ಲಿರುವ ಪಾಠಾಂತರವನ್ನು ಹಾಗೆಯೇ ಉಳಿಸಿಕೊಂಡು ಪ್ರಕಟಿಸಿರುವುದಾಗಿ ತಿಳಿಸಿದ್ದಾರೆ. ಇವರಿಗೆ ರಾಮಾನುಜಯ್ಯಂಗಾರ್ ರವರು ಸಂಪಾದಿಸಿ ಪ್ರಕಟಿಸಿದ ಪ್ರತಿಯನ್ನು ಹೆಚ್ಚು ಉಪಯುಕ್ತವಾಗಿ ಬಳಸಿಕೊಂಡಿದ್ದಾರೆ ಎನ್ನಬಹುದಾಗಿದೆ.

೫. 'ಕರ್ಣಾಟಕ ಸಂಜೀವನಂವೆಂಬ ಱಟಿಕುಳ ನಿಘಂಟು' ಇದು ೩೫ ವಾರ್ಧಕ ಷಟ್ಪದಿಗಳಲ್ಲಿದೆ. ಮೇ॥ ರೈಸ್ ರವರು ಈ ಕವಿಯ ಕಾಲವನ್ನು ಕ್ರಿ.ಶ ೧೩೬೯ ರಿಂದ ೧೩೮೦ರೊಳಗೆ ಇದ್ದಿರಬಹುದು ಈತ ರಸಿಕವಾಳಗೆ ಯಜಮಾನನಾದ ಬೊಮ್ಮರಸನ ಮಗ ಎಂದು ಊಹಿಸುತ್ತಾರೆ. ಇನ್ನೇನು ಹೆಚ್ಚಿನ ವಿಷಯ ತಿಳಿದುಬರುವುದಿಲ್ಲ. ಇದರಲ್ಲಿ ಬಳಕೆಯಾದ ಪ್ರತಿಗಳ ವಿಚಾರ ತಿಳಿದು ಬರುವುದಿಲ್ಲ. ಇಲ್ಲಿನ ಪಾಠಾಂತರಗಳು ಮೇ॥ಕಿಟಲ್‌ರವರು ಮುದ್ರಿಸಿದ ಶಬ್ದಮಣಿದರ್ಪಣದ ಪುಟಗಳು ೩೨. ೩೩. ೩೪. ೩೫. ೩೭. ೪೧೦. ೪೧೧ ರಲ್ಲಿ ಕೊಟ್ಟಿವೆ. ಅದೇ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ಸಂಕೇತಗಳನ್ನು ಬಳಸಿ ನೀಡಿದ್ದಾರೆ.

ಉದಾ:

೧. ಪುಟ ೧ † " ಉಱುಗೆನಲ್" ಎಂದು ಪಾಠದಲ್ಲಿದ್ದರೆ ಅಡಿಟಿಪ್ಪಣಿಯಲ್ಲಿ " ಉಱಿಗ. ಉಱಿಗ ಉಱ್ಗ- ಸ್ನೇಹೇ" ಎಂದು ಕೊಟ್ಟಿದ್ದಾರೆ.

೨. ಪುಟ ೨ ರಲ್ಲಿ § ಕಿಮುಱ್ಚೆನಲ್ ಕರಮರ್ದನಕ್ಕೆ ನಾಮಂ॥ ಎಂದಿದ್ದರೆ ಇದಕ್ಕೆ ಪಾಠಾಂತರವು § "ಕಿಮುಱ್ಚುಚನೆಂದು ಚಿಕ್ಕಣಮಾಗಿ ಮಾಡಿದಂ" ಎಂದು ಕೊಟ್ಟಿದ್ದಾರೆ.

೩. ಪುಟ ೬ರಲ್ಲಿ ¶ ಕಟಿಲೆಂದೊಡಳೆ ಬಯಕೆ ಬಡವುದಟ್ಟಿತು ಮುಳ್ಳಿ। ಎಂದಿದ್ದರೆ ಪಾಠಾಂತರವು ¶"ಕಟಿಲೆಂತು ಮಜ್ಜಿಗೆಯುಂ. ಮುಂದುರೆಯುಂ ತನುತ್ವಮುಮಕ್ಕು" ಎಂದು ಕೊಟ್ಟಿದ್ದಾರೆ.

೪. ಪುಟ ೧೦ ರಲ್ಲಿ ‡ " ಸಲೆ ಱಕಾರಂ ಎಂದಿದ್ದು ‡ ರೇಫಕಂ ಎಂದು ಪುಸ್ತಕ ಪಾಠಾಂತರ ಎಂದು ಉಲ್ಲೇಖಿಸಿದ್ದಾರೆ.

"ಕರ್ಣಾಟಕ ಸಂಜೀವನನಂವೆಂಬ ಅಚಿಕುಳ ನಿಘಂಟು" ನ್ನು . ಬಸವಾರಾಧ್ಯರು ಕಾವ್ಯ ಮಂಜರಿಯಲ್ಲಿ ಪ್ರಕಟವಾದ ಆವೃತ್ತಿಯ ಜೊತೆಗೆ ಮತ್ತೊಂದು ಹಸ್ತಪ್ರತಿಯನ್ನು ಬಳಸಿ ಸಂಪಾದಿಸಿರುವುದಾಗಿ ತಿಳಿಸಿದ್ದಾರೆ. ಇವರಿಗೆ ರಾಮಾನುಜಯ್ಯಂಗಾರ್ ರವರ ಪ್ರತಿ ಬಳಸಿಕೊಂಡು ಅದರ ಜೊತೆಗೆ ಬಳಸಿದ ಪ್ರತಿಯಿಂದಲೂ ತುಂಬಾ ಉಪಯುಕ್ತವಾಗಿ ಕೆಲಸ ಮಾಡಲು ಸಾಧ್ಯವಾಗಿದೆ ಎನ್ನಬಹುದು.

೨. ಛಂದಸ್ಸು

ಯಾವುದೆ ಒಂದು ಕಾವ್ಯ ಒಂದು ನಿರ್ಧಿಷ್ಟ ಬಂಧದಿಂದ. ಗೇಯತೆಯ ಸ್ವರೂಪಕ್ಕೆ ಉತ್ಕೃಷ್ಟ ನಿರೂಪಣೆಗೆ ಛಂದೋನಿಬಂಧನೆಗಳು ಅಗತ್ಯವಾಗಿದೆ. ಈ ಬಗೆಗೆ ಕೆಲವು ಲಾಕ್ಷಣಿಕರು ಹಲವಾರು ಗ್ರಂಥಗಳನ್ನು ಸಂಸ್ಕೃತದಲ್ಲಿ ಮೊದಲಿಗೆ ರಚಿಸಿದ್ದಾರೆ. ಅದೇ ಮಾದರಿನ್ನು ಅನುಸರಿಸಿ ಕನ್ನಡದಲ್ಲಿರೂ ಕೃತಿಗಳನ್ನು ಪ್ರಾಚೀನ ಪಂಡಿತರು ರಚಿಸಿದ್ದಾರೆ.

ರಾಮಾನುಜಯ್ಯಂಗಾರ್ ರವರು **ನಂದಿ ಛಂದಸ್ಸು (ವಿವರಣೆ ಸಹಿತಂ), ಮತ್ತು ನಾಗವರ್ಮನೆ ಛಂದೋಂಬುಧಿಯನ್ನು ಟಿಪ್ಪಣಿಯೊಂದಿಗೆ** ಸಂಪಾದಿಸಿ ಪ್ರಕಟಿಸಿದ್ದಾರೆ. ಇದರಲ್ಲಿ 'ನಂದಿ ಛಂದಸ್ಸು' ಮಾತ್ರ ಸಧ್ಯ ಲಭ್ಯವಿದ್ದು ಇದರ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

೧. **"ನಂದಿ ಛಂದಸ್ಸು" ವಿವರಣೆ ಸಹಿತವಿದ್ದು** ಗ್ರಂಥದ ೨ ಪ್ರತಿಗಳಲ್ಲಿ ಮೊದಲನೆ ಭಾಗ ವಾಕ್ಯರೂಪದಲ್ಲಿದ್ದು ಅಲ್ಲಲ್ಲಿ ಹೇಳಿರುವ ವಿಷಯ ತಪ್ಪಾಗಿದೆ ಎಂದು ಗುರುತಿಸಿದ್ದಾರೆ. ಆದರಿಂದ ಮೊದಲ ಭಾಗ ೧-೯ನೆಯ ಪುಟದ ವರೆಗೆ ಬೇರಯವರ ರಚನೆ ಇರಬೇಕು ಎಂದು ಭಾವಿಸುತ್ತಾರೆ. ಗ್ರಂಥಕರ್ತನು ಆ ಭಾಗವನ್ನು ಪದ್ಯ ರೂಪದಲ್ಲಿಯೇ ಬರೆದು ಸೇರಿಸಿರಬಹುದೆಂದು ತೊರುತ್ತದೆ ಎಂದುವುದಕ್ಕೆ ಗ್ರಂಥದ ಕೊನೆಯಲ್ಲಿ ಎರಡು ಕಂದ ಪದ್ಯಗಳೇ ಸಾಕ್ಷಿ ಎಂದಿದ್ದಾರೆ. ಬಳಿಕ

"ವ್ವಯೋರಬೇದಮೆಂಬುದ।
ನುಪಮಿಸಲರಿದೆಂದು ತಿಳಿವುದುರ್ವೀತಲದೊಳ್॥
ಚಪಲಾಕ್ಷಿ ಕೇಳು ಪೇಳುವೆ।
ಖದಿನೀಂಕೇಳ್ವುದೀಗ ನೀರಜಗಂಧೀ॥" ಎಂದು ಇರುವುದರಿಂದ ಗ್ರಂಥವು ಇನ್ನೂ ಇರಬೇಕು ಎಂದು ಹೇಳುತ್ತಾರೆ.

ಮೂಲದಲ್ಲಿ ಆವರಣ ಚಿಹ್ನೆ [ ] ಗಳಲ್ಲಿ ಕೆಲವು ಕಡೆ ಗ್ರಂಥದಲ್ಲಿ ತಪ್ಪಿದ್ದು ಅದನ್ನು ತಿದ್ದಿ ಪರಿಷ್ಕರಿಸಿ ಸೇರಿಸಿದ್ದು ಎಂದು ತಿಳಿಯಬೇಕು ಎಂದಿದ್ದಾರೆ.

ಈ ಛಂದಸ್ಸಿನಲ್ಲಿ ಪ್ರಾಸಗಳ ವಿಚಾರವನ್ನು ಹೇಳಿ. ಈ ಕವಿಯು ಹೇಳಿರುವ "ಯತಿ" ಲಕ್ಷಣ ಬಹಳ

ಅಪೂರ್ವವಾಗಿದೆ ಎಂದಿದ್ದಾರೆ. ಆದರೆ ಮುಂದೆ ಯಾರು ಅದನ್ನು ಅನುಸರಿಸಿಲ್ಲವೆಂದು ತಿಳಿಸುತ್ತಾರೆ. ಈತನೆ ಅದನ್ನು ತನ್ನ ಪದ್ಯಗಳಲ್ಲಿ (–) ಅಡ್ಡಗೆರೆಯ ಗುರುತಿನಿಂದ ತೋರಿಸಿರುವುದಾಗಿ ಹೇಳಿದ್ದಾರೆ.

ಈ ಗ್ರಂಥದ ಇತರ ಭಾಗಗಳನ್ನು ನೋಡಿದರೆ ಈ ಭಾಗವೂ ಬಹುಶಃ ಪದ್ಯಗಳಾಗಿಯೇ ಇದ್ದಿರಬಹುದು ನಮಗೆ ದೊರೆತ ಪ್ರತಿಯಲ್ಲಿ ಈ ಭಾಗವು ಗದ್ಯವಾಗಿಯೇ ಇದ್ದುದರಿಂದ ಇದ್ದಹಾಗೆಯೇ ಮುದ್ರಿತವಾಗಿದೆ. ಈ ಗ್ರಂಥದಲ್ಲಿ ಛಂದೋ ವಿಷಯವನ್ನು ಸಾಮಾನ್ಯವಾಗಿ ತಿಳಿಯಬೇಕಾದ ಅಂಶಗಳು ಹೇಳ್ಪಡಲಲ್ಲವಾಗಿ ವಿವರಣವು ಬರೆಯಲ್ಪಟ್ಟಿದೆ ಎಂದಿದ್ದಾರೆ.

ಪ್ರತಿ ಸೂತ್ರಗಳಿಗು ವಿವರಣೆ ಮತ್ತು ಟೀಕು ಇರುವುದು ಗಮನಾರ್ಹ.

ಇದರಲ್ಲಿ ಪಾಠಾಂತರಗಳನ್ನು ಕೊಟ್ಟಿರುವುದನ್ನು ಗಮನಿಸಬಹುದು.

ಉದಾ:

೧. ಪುಟ ೨ ರಲ್ಲಿ

" ಬೆರೆದೆ–ಮ್ಮೀಕೊಲ್ಲಿಪಾಕೇಶನಂ॥"

ಪಾಠಾಂತರವು " ಬೆರೆದೆಂಮೀಕೊಲ್ಲಿಪಾಕೇಶನೊಳ್" ಎಂದಿದೆ.

೨. ಪುಟ ೧೯ ರಲ್ಲಿ ಮ–ಹೀಸು ಪ್ರಣೀತಂ।

ಪಾಠಾಂತರ 'ಮಹೀಯೊಳ್ಪ್ರಣೀತಂ' ಎಂದಿರುವುದು.

೩. ಪುಟ ೨೩. ರಲ್ಲಿ ಪಾಠ ತ್ರುಟಿತವಾಗಿರುವುದನ್ನು ಕೊಟ್ಟು ಅಡಿ ಟಿಪ್ಪಣಿಯಲ್ಲಿ ಅದನ್ನು ಉಲ್ಲೇಖಿಸಿದ್ದಾರೆ " ಆಶ್ರೀಭೂತರ್ಝ್ಥಾನುಳದಗಿರಿದಿಂಬಾದುದಂಖ್ಯಾತಿಯಿಂದಂ।

ಸತ್ರೀಯೋಸ್ಸಂಗಾಸ್ಪದನಿರತ ವಿಚಾರದಿಂ ನೀತಿಕೇಳ್॥ ಎಂದು ಕೊಟ್ಟಿದ್ದಾರೆ ಈ ಪದ್ಯವು ಬೇರೆ ಪ್ರತಿಯಲ್ಲಿದ್ದಿರಬೇಕು ಎಂಬುದನ್ನು ಸೂಚಿಸಿದ್ದಾರೆ.

ಈ ಗ್ರಂಥವು ಛಂದಸ್ಸಿನ ಎಲ್ಲಾ ವಿಷಯಗಳನ್ನು ಒಳಗೊಂಡಿದ್ದು ಅವಶ್ಯಕವಾದ ಕಡೆ ವಿವರಣೆಯನ್ನು ನೀಡಿ. ಲಕ್ಷಣಗಳಿಗೆ ಅರ್ಥವನ್ನು ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಕನ್ನಡದಲ್ಲಿ ಪ್ರಚಾರವಾಗಿರುವ ಕಂದ. ರಗಳೆ. ಷಟ್ಪದಿಗಳಿಗೆ ಲಕ್ಷಣವನ್ನು ಬರೆದಿರುವುದಾಗಿ ತಿಳಿಸಿದ್ದಾರೆ.

ಈ ಗ್ರಂಥದಲ್ಲಿ ಶೋಧಿತ ಭಾಗವನ್ನು ಪ್ರತ್ಯೇಕವಾಗಿ ನೀಡಿದ್ದು ವಿವರಣೆಯನ್ನು ಸೊಗಸಾಗಿ ಕೊಟ್ಟಿದ್ದಾರೆ. ಗಣಗಳ ಪ್ರಸ್ತಾರದ ಚಿಹ್ನೆಯನ್ನು ಲಘುವಿಗೆ ᴗ ಯು ಆಕಾರದಲ್ಲು ಗುರುವಿಗೆ । ಲಂಬ ಗೆರೆ ಹಾಕುವುದರ ಮೂಲಕ ಸೂಚಿಸಿದ್ದಾರೆ. ಪಾಠಾಂತರಗಳನ್ನು ಗುರುತಿಸಿದ್ದು. ಕೆಲವು ಸೂತ್ರಗಳಿಗೆ ವಿವರಣೆಯನ್ನು ಸೊಗಸಾಗಿ ನೀಡಿರುವುದು ಗಮನಾರ್ಹ.

"ನಂದಿ ಛಂದಸ್ಸು (ವಿವರಣೆ ಸಹಿತಂ)" ಗ್ರಂಥವನ್ನು ಎಲ್. ಬಸವರಾಜುರವರು ೧೯೩೯ರಲ್ಲಿ ೫ ಗ್ರಂಥಗಳನ್ನು ಒಟ್ಟಿಗೆ ಸೇರಿಸಿ ಸಂಪಾದಿಸಿ 'ಕನ್ನಡ ಛಂದಸ್ಸಂಪುಟ' ಎಂಬ ಗ್ರಂಥದಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಶುದ್ಧ ಪ್ರತಿಗಳ ಕೊರತೆಯಿದ್ದು ಅದನ್ನು ಸರಿಯಾಗಿ ಪರಿಷ್ಕರಿಸಿರುವುದಾಗಿ ತಿಳಿಸಿದ್ದರು ಕೆಲವು ವಿದ್ವಾಂಸರು ಈ ಗ್ರಂಥದ ಒಟ್ಟಾರೆ ಆವೃತ್ತಿಯನ್ನು ವಿಮರ್ಶಿಸಿ. ಕೆಲವು ದೋಷಗಳನ್ನು ಗುರುತಿಸಿದ್ದಾರೆ. ಆದರೆ ಇವರು ಬಳಸಿಕೊಂಡ ಪ್ರತಿಗಳ ಬಗ್ಗೆಯಾಗಲಿ ವ್ಯಕ್ತಿಗಳನ್ನಾಗಲಿ ಇಲ್ಲಿ ಸೂಚಿಸಿಲ್ಲ.[೪೩]

೩. ಅಲಂಕಾರ ಗ್ರಂಥಗಳು:

ಒಂದು ಗ್ರಂಥದ ಉತ್ಕೃಷ್ಟತೆಗೆ ಶಾಸ್ತ್ರ ವಿಚಾರಗಳು ಎಷ್ಟು ಅವಶ್ಯಕವೋ ಅಷ್ಟೆ ಪ್ರಮುಖವಾದುದು ಅಲಂಕಾರ. ಒಂದು ಕೃತಿಯ ಹೆಗ್ಗಳಿಗೆ ಸಹೃದಯ ಆಸ್ವಾದನೆಗೆ. ಕಾವ್ಯಪ್ರಯೋಜನಕ್ಕೆ ಕಾವ್ಯಾಲಂಕರದ ಉಪಯೋಗ ಅತ್ಯಂತ ಅವಶ್ಯಕ. ಅದಕ್ಕಾಗಿ ನಮ್ಮ ಪೂರ್ವಿಕರು ಅನೇಕ ಗ್ರಂಥಗಳಂತೆಯೇ ಅಲಂಕಾರ ಗ್ರಂಥಗಳನ್ನು ರಚಿಸಿದ್ದಾರೆ.

ಎಂ.ಎ.ರಾಮಾಮನುಜಯ್ಯಂಗಾರ್ ರವರು **ಉದಯಾದಿತ್ಯಾಲಂಕಾರಂ ಮತ್ತು ತಿರುಮಾಲಾರ್ಯನ ಅಪ್ರತಿಮ ವೀರಚರಿತೆ** ಅಚ್ಚುಕಟ್ಟಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ.

೧. **'ಉದಯಾದಿತ್ಯಾಲಂಕಾರ'ದ** ಪಿಠೀಕಾ ಭಾಗದಲ್ಲಿ ಕವಿಯ ವಿಚಾರವಿದೆ. ಕಾವ್ಯಭೇದ ಅಲಂಕಾರಾದಿ ವಿಷಯಗಳಿಗೆ ಅನುಗುಣವಾಗಿ ಪದ್ಯಗಳನ್ನು ಅಲ್ಲಲ್ಲಿ ಒಡೆದು ಅದರ ಪಕ್ಕದಲ್ಲಿಯೇ ಅಲಂಕಾರದ ಹೆಸರನ್ನು ಮುದ್ರಿಸಿದ್ದಾರೆ. ಪ್ರತಿಗಳ ವಿಚಾರವಾಗಿ ಹೇಳಿಲ್ಲದಿದ್ದರು ಈ ಗ್ರಂಥದ ಅಡಿಟಿಪ್ಪಣಿಯಲ್ಲಿ ಉಲ್ಲೇಖಿಸಿರುವ ಸಂಕೇತದಿಂದ ೩ ಹಸ್ತಪ್ರತಿಗಳ ಸಾಹಾಯದಿಂದ ಮುದ್ರಿಸಿರುವುದಾಗಿ ತಿಳಿದುಬರುತ್ತದೆ

ಇದೇ ಕೃತಿಯನ್ನು **ಎಂ.ವಿ.ಸೀತಾರಮಯ್ಯ**ನವರು ೩ ಹಸ್ತಪತ್ರಿಗಳು ಮತ್ತು ಒಂದು ಪೂರ್ವೋಕ್ತ ಮುದ್ರಿತ ಪ್ರತಿಯ ಆಧಾರದ ಮೇಲೆ ಮತ್ತೆ ಸಂಪಾದಿಸಿದ್ದು ಇದರಲ್ಲಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯ ೨ ಓಲೆಪ್ರತಿಗಳು. ಮೇಲುಕೋಟೆಯಲ್ಲಿ ಸಂಪ್ರತಿಯಾದ ಮತ್ತೊಂದು ಪ್ರತಿ. ಈ ಪ್ರತಿಯು ಓಲೆ ಪ್ರತಿಗಳಲ್ಲಿ ಒಂದರ ಮರು ಪ್ರತಿ ಆಗಿರಬಹುದು ಈ ಎಲ್ಲ ಸಾಮಗ್ರಿಗಳ ಆಧಾರದಿಂದ ಸಂಪಾದನ ಕಾರ್ಯ ಯಶಸ್ವಿಯಾಗಿ ಆಗಿದೆ ಎಂದಿದ್ದಾರೆ.

ಕನ್ನಡ ಅಧ್ಯಯನ ಸಂಸ್ಥೆಯ ಓಲೆಪ್ರತಿಯಲ್ಲಿ (ಱ) ಶಕಟರೇಫ ಪ್ರಯೋಗವಿರುವುದರಿಂದ ಅದೇ ಪ್ರಾಚೀನ ಪ್ರತಿಯೆಂದು ನಿಶ್ಚಯಿಸಿ ಅದನ್ನೇ ಆಧಾರವಾಗಿಟ್ಟುಕೊಂಡು ಅಗತ್ಯವಿದ್ದಕಡೆ ಪಾಠಾಂತರವನ್ನು ತೋರಿಸಿರುವುದಾಗಿ ತಿಳಿಸಿದ್ದಾರೆ. ಱಟಗಳನ್ನು ಯಥಾರೂಪವಾಗಿ ಬಳಸಲಾಗಿದೆ ಎಂದಿದ್ದಾರೆ.

---

[43] ಬಿ.ಎಸ್ ಸಣ್ಣಯ್ಯ. ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ. ಶಾಸ್ತ್ರ ಗ್ರಂಥಗಳು. ಪುಟ. ೩೩೭

ಗ್ರಂಥದ ಕೆಲಭಾಗ ಅಸಮಗ್ರವಾಗಿದ್ದು ಹಸ್ತಪ್ರತಿಯನ್ನೇ ಆಶ್ರಯಿಸಿ ಪಾಠ ಸಮಸ್ಯೆಗಳನ್ನು, ತ್ರುಟಿತಗಳನ್ನು ಸೂಕ್ತ ಪಾಠ ಪರಿಷ್ಕರಣದಿಂದ ಪರಿಹರಿಸಿರುವುದಾಗಿ ತಿಳಿಸಿದ್ದಾರೆ . ಈ ಹಿಂದಿನ ಭಾಗಗಳಲ್ಲಿ ಕೆಲವು ಕ್ಲೇಷಗಳಿದ್ದು ಅವುಗಳನ್ನು ಪರಿಹರಿಸಿ ಪರಿಷ್ಕರಣವನ್ನು ಅನೇಕ ರೀತಿಯಲ್ಲಿ ಉತ್ತಮ ಪಡಿಸಿರುವುದಾಗಿ ತಿಳಿಸಿದ್ದಾರೆ.

ಉದಾ: ಅಷ್ಟಾದಶ ವರ್ಣನೆಗಳ ಪಟ್ಟಿಯನ್ನು ಕೊಡುವ

"ಉದ್ಧ ಪುರಾಧಿಪ......" ಎಂಬಸ್ ಪದ್ಯವು ಒಂದೊಂದು ಕಡೆ ಪಾಠ ಸಂಯೋಜನೆ ತೃಪ್ತಿಕರವಾಗಿಲ್ಲ ಎಂದಿದ್ದಾರೆ.

ಇಂತಹ ಸಮಸ್ಯೆಯನ್ನು ಪ್ರಥಮ ಮುದ್ರಣ ಪರಿಷ್ಕೃತರೇ ತಿಳಿಸಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಎಲ್ಲ ರೀತಿಯಲ್ಲಿ ಇದು ಮೆಚ್ಚತಕ್ಕದ್ದಾಗಿದೆ ಎಂದು ಡಾ. ಟಿ.ವಿ ವೆಂಕಟಾಚಲ ಶಾಸ್ತ್ರಿಗಳು ತಿಳಿಸಿದ್ದಾರೆ.[೪೪]

ಬಿ. ಎಸ್. ಸಣ್ಣಯನವರು ಉದಯಾದಿತ್ಯಾಲಂಕಾರ ಎಂಬ ಬೇರೊಂದು ಪ್ರತಿಯನ್ನು ಗುರುತಿಸಿ ಅವರ ಸೂಚನೆ ಪ್ರಕಾರ ಒಂದು ಹಸ್ತ ಪ್ರತಿ ಲಕ್ಷಣ ಪದ್ಯಗಳಿಂದಲೂ ಮತ್ತೊಂದು ಲಕ್ಷಣ ಪದ್ಯಗಳು ಮತ್ತು ಬಂಧುವರ್ಮನ 'ಹರಿವಂಶಾಭ್ಯುದಯದಿಂದ ಆಯ್ದ ಲಕ್ಷ್ಯ ಪದ್ಯಗಳಿಂದಲು ಕೂಡಿದುದಾಗಿದೆ ಎಂದು ತಿಳಿಸಿದ್ದಾರೆ. ಈ ಎರಡು ೫ ಓಲೆಗಳಲ್ಲಿ ಆಚಿತವಾಗಿ ಯಾವುದೋ ಓಲೆಕಟ್ಟಿನಲ್ಲಿ ಬೇರೆ ಕೃತಿಯೊಂದಿಗೆ ಸೇರಿದ್ದುದೆಂದು ತಿಳಿಯುವುದು ಎಂದಿದ್ದಾರೆ. ಇದನ್ನು ಬಳಸಿಕೊಂಡು ಸಂಪಾದನೆಯನ್ನು ಉತ್ತಮಪಡಿಸಬಹುದು ಆದರೆ . ಲಕ್ಷ್ಯಪದ್ಯಗಳಿರುವ ಪ್ರತಿಯು ಗ್ರಂಥ ಸಂಪಾನೆಯ ಪ್ರಕ್ಷಿಪ್ತ ಭಾಗಗಳಲ್ಲಿ ಒಡ್ಡುವ ಸಮಸ್ಯೆಗಳು ಯಾವುದು ಎನ್ನುವುದನ್ನು ತಿಳಿಯಲು ಕುತೂಹಲಕರ ಸಾಮಗ್ರಿಯನ್ನು ಒದಗಿಸುತ್ತದೆ ಎನ್ನಬಹುದು ಎಂದಿದ್ದಾರೆ.

೧೯೬೩ರಲ್ಲಿ ಈ ಗ್ರಂಥವನ್ನು **ಸಿ. ಮಹಾದೇವಪ್ಪನರು** ಐದಾರು ಮೂಲಗಳನ್ನು ಆಧರಿಸಿ ಸಂಪಾದಿಸಿರುವುದಾಗಿ ತಿಳಿಸಿದ್ದರೆ. ಪಾಠಾಂತರಗಳನ್ನು ಕೊಡುವಲ್ಲಿ ಸರಿಯಾದ ಕ್ರಮವನ್ನು ಅನುಸರಿಸಿಲ್ಲ ಕೆಲವು ಕಡೆ ಎರಡು ಸಂಖ್ಯೆಯನ್ನು ಉಪಯೋಗಿಸಲಾಗಿದೆ. ಈ ಕೃತಿಯಲ್ಲಿ ಮಾಡಿರುವ ವಿಶೇಷ ವಿಮರ್ಶೆ 'ಕಾವ್ಯಾಲಂಕಾರ ಸಾರಂ' ಎಂದು ಸಂಪಾದಕರ ವಿದ್ವತನ್ನು ಬಿ. ಎಸ್. ಸಣ್ಣಯ್ಯ ನವರು ಹೊಗಳಿದ್ದು ಇದೊಂದು ಉತ್ತಮ ಸಂಸ್ಕರಣವಾಗಿದ್ದು ಕಾವ್ಯಾಲಂಕಾರಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಉಪಯುಕ್ತವಾಗಿದೆ ಎಂದೂ ತಿಳಿಸಿದ್ದಾರೆ.[೪೫]

---

44 ಹಸ್ತಪ್ರತಿ ಶಾಸ್ತ್ರ:, ಲಕ್ಷಣ ಗ್ರಂಥಗಳ ಸಂಪಾದನೆ. ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿ. ಪುಟ ೧೪೩-೧೪೪

45 ಬಿ.ಎಸ್ ಸಣ್ಣಯ್ಯ. ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ. ಶಾಸ್ತ್ರ ಗ್ರಂಥಗಳು. ಪುಟ. ೩೪೭

ರಾಮಾನುಜಯ್ಯಂಗಾರ್ ಅವರು ಸಂಪಾದಿಸುತ್ತಿದ್ದಂತ ಸಮಯದಲ್ಲಿ ಅವರಿಗೆ ದೊರೆತ ಪ್ರತಿಗಳ ಬಳಕೆಯಿಂದ ಪರಿಷ್ಕರಿಸಿ ಮುದ್ರಿಸಿರುವುದು ಸ್ತುತ್ಯಾರ್ಹವೇ. ಇವರ ನಂತರ ಸಂಪಾದಿಸಿದ ಕೃತಿಗಳಿಗೆ ಮೂಲ ಆಕರವಾಗಿ ರಾಮಾನುಜಯ್ಯಂಗಾರ್ ಸಂಪಾದಿಸಿದ ಪ್ರತಿಗಳ ಜೊತೆಗೆ ಇನ್ನಿತರ ಪ್ರತಿಗಳನ್ನು ಬಳಸಿ ಸರಿ ತಪ್ಪುಗಳನ್ನು ಗುರುತಿಸಿ ಪಾಠಾಂತರಗಳನ್ನು ನೀಡಿ ಪ್ರಕಟಿಸಿರುವುದು ಉತ್ತಮವೇ ಆಗಿದೆಯಾದರೂ ಅವರ ಮೂಲ ಪಠ್ಯವನ್ನೇ ಉಳಿಸಿಕೊಳ್ಳುವ ಮೂಲಕ ಅವರ ಗ್ರಂಥ ಸಂಪಾದನಾ ಪರಿಣತಿಯನ್ನು ಸಮ್ಮತಿಸಿದ್ದಾರೆ. ಇದು ಎಂ.ಎ.ರಾಮಾನುಜಯ್ಯಂಗಾರ್ ಅವರ ವಿದ್ವತ್ ಸೇವೆಯ ಕುರುಹಾಗಿದೆ.

೨. ತಿರುಮಲಾರ್ಯ ಕೃತವಾದ "ಅಪ್ರತಿಮವೀರಚರಿತ" ಇದರಲ್ಲಿ ಕೃತಿ ಕರ್ತೃಗಳ ವಿಷಯ, ಬಳಸಿದ ಪ್ರತಿಗಳ ವಿಚಾರ, ಪಾಠಾಂತರ ಇವುಗಳ ಬಗ್ಗೆ ಏನನ್ನು ನೀಡಿಲ್ಲ. ಪರೋಕ್ಷವಾಗಿ ಗ್ರಂಥ ಪಾತದ ಸೂಚನೆಯಿಂದ ಒಂದಕ್ಕಿಂತ ಹೆಚ್ಚು ಪ್ರತಿ ಬಳಸಿ ಮುದ್ರಿಸಿರಬಹುದು ಎಂಬುದು ತಿಳಿಯುತ್ತದೆ . ಆ ಪ್ರತಿಗಳ ವಿವರ ಸಂಜ್ಞೆ, ಸಂಕೇತ ಇತ್ಯಾದಿ ವಿವರಗಳು ಕಂಡುಬರುವುದಿಲ್ಲ. ವಿವರವಾದ ವಿಷಯಾನುಕ್ರಮಣಿಕೆ ಹೊಂದಿದ್ದು ಪದ್ಯಗಳ ಅಕಾರದಿಯನ್ನು ಕೊಟ್ಟಿದ್ದಾರೆ.

ತಿರುಮಲಾರ್ಯ ಕೃತವಾದ "ಅಪ್ರತಿಮವೀರಚರಿತ" ಕೃತಿಯನ್ನು ೧೯೨೭ ರಲ್ಲಿ ಮತ್ತೊಮ್ಮೆ ಪರಿಷ್ಕರಿಸಿದವರು ಕೋಣನೂರು ನರಸಿಂಹಶಾಸ್ತ್ರಿ ಮತ್ತು ಜಿ.ಆರ್.ಶ್ರೀನಿವಾಸಯ್ಯಂಗಾರ್ ಅವರು ಅಚ್ಚುಕಟ್ಟಗಿದ್ದು ೭೩ ಪುಟಗಳ ಪೀಠಿಕೆಯನ್ನು ನೀಡಿದ್ದಾರೆ. ಇನ್ನಾವುದೇ ವಿಷಯವು ತಿಳಿದುಬರುವುದಿಲ್ಲ. ಪಾಠಾಂತರಗಳನ್ನು ಹಿಂದಿನ ಆವೃತಿಯಲ್ಲಿರುವಂತೆಯೇ ಉಳಿಸಿದ್ದು ಬಳಸಿದ ಹಸ್ತಪ್ರತಿಗಳ ವಿಚಾರವು ತಿಳಿಸದೆ ಹಿಂದಣ ಸಂಪಾದಕರನ್ನು ಸ್ಮರಿಸದಿರುವುದನ್ನು ಗಮನಿಸಬಹುದು.[46] ಎಂಬ ವಿದ್ವಾಂಸರ ಅಭಿಪ್ರಾಯವನ್ನು ಗಮನಿಸಬೇಕು. ಮುಂದಿನ ವಿದ್ವಾಂಸರು ಹಿಂದಿನ ವಿದ್ವಾಂಸರ ಉಪಕೃತರಾಗಿದ್ದರೂ ಅದನ್ನು ಉಲ್ಲೇಖಿಸದಿರುವುದು ದೋಷನೆನಿಸುತ್ತದೆ.

೩. 'ಕವಿಕಾಮದೇವ ವಿರಚಿತಂ ಶೃಂಗಾರ ರತ್ನಾಕರಂ' ದಲ್ಲಿ ಮೊದಲು ವಿಷಯಾನುಕ್ರಮಣಿಕೆಯಲ್ಲಿ ೪ ಪರಿಚ್ಛೇದದ ವಿವರಗಳನ್ನು ಕೊಟ್ಟಿದ್ದಾರೆ. ಇದರ ಪೀಠಿಕಾ ಭಾಗದಲ್ಲಿ ಕವಿ ಕೃತಿ ಕಾಲದ ಬಗ್ಗೆ ಚರ್ಚಿಸುತ್ತಾ. ಗ್ರಂಥಕರ್ತನ ಹೆಸರು 'ಕಾಮದೇವ'ನೆಂದೂ ಇತ ಪೂರ್ವಕವಿಗಳನ್ನು ವಂದಿಸುವ ಸಂಭರ್ದಲ್ಲಿ ಪುರಾತನ ಕವೀಶ್ವರ ಹೆಸರನ್ನು ಹೇಳಿರುವುದರಿಂದ ಈತನು 'ಸೂಕ್ತಿ ಸುಧಾರ್ಣವ'ವನ್ನು ರಚಿಸಿರುವ ಕೇಶೀರಾಜನ ತಂದೆ 'ಮಲ್ಲಿಕಾರ್ಜುನ'ನಿಗೂ ಹಿಂದಿನವನಿರಬೇಕು ಎಂದು ರೈಸ್ ಸಾಹೇಬರು ಬರೆದಿರುವುದಾಗಿ ತಿಳಿಸಿದ್ದಾರೆ.

---

46 ಹಸ್ತಪ್ರತಿ ಶಾಸ್ತ್ರ:. ಲಕ್ಷಣ ಗ್ರಂಥಗಳ ಸಂಪಾದನೆ. ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿ. ಪುಟ ೧೪೨-೧೪೪

ಈ ಗ್ರಂಥವನ್ನು ೨ ಪ್ರತಿಗಳ ಸಹಾಯದಿಂದ ಮುದ್ರಿಸಿದ್ದಾರೆ. ಮೈಸೂರು ಮಹಾರಾಜ ಕಾಲೇಜಿನ ಕನ್ನಡ ಮುನಷಿ ಯವರಾದ ಮ॥ರಾ॥ಕರಿಬಸವಪ್ಪ ಶಾಸ್ತ್ರಿಗಳು ಕಳುಹಿಸಿಕೊಟ್ಟ ಪ್ರತಿಯನ್ನು 'ಖ' ಎಂದು ಮತ್ತೊಂದು ಸಂಪಾದನಕಾರರ ಬಳಯೇ ಇದ್ದ ಪ್ರತಿಗೆ 'ಕ' ಎಂದು ಸಂಜ್ಞೆ ಮಾಡಿರುವುದಾಗಿ ತಿಳಸಿದ್ದಾರೆ. ಈ ಗ್ರಂಥದಲ್ಲಿ ಪ್ರತಿ ಪುಟದಲ್ಲು ಪಾಠಾಂತರವನ್ನು ಕೊಟ್ಟಿರುವುದು ಗಮನಿಸಿದರೆ ಇದರ ಪ್ರತಿಗಳು ಅಶುದ್ಧವಾದು ಎಂದು ತೋರುತ್ತದೆ ಎನ್ನಬಹುದು.

ಉದಾ: ಪುಟ ೮ ರಲ್ಲಿ "ಮಾವಳಗಳೆ ಮಾಗ್ಗ ಸಂಗತಂ ತತ್ಸಕಳೊ।" ಎಂದಿದ್ದರೆ ಅಡಿಟಿಪ್ಪಣಿಯಲ್ಲಿ ಪಾಠಾಂತರವು " ಮಾವಳಮಾರ್ಗ ಸಂಗತಂಗಳ್ ಸಕಳೊ। ಖ॥ ಎಂದಿದೆ

೧. ಪುಟ ೯

" ಚಿತ್ತರ ಭಾವದ ದೆಸೆಯಿಂ।
ದೆತ್ತಂ ನವರಸವಿಭೇದಮುದಯಿಸುಗುಂ ಸಂ॥
ಪತ್ತಿಯನವಱ ವಿಭೇದಮ।
ನತ್ತವಿಚಾರಿಸುಗೆ ಲಕ್ಷ್ಯಲಕ್ಷಣಯುಗದಿಂ॥" ಇದರ ಪಾಠಾಂತರು

" ಚಿತ್ತದಭಾವದರಸದಿಂ।
ದೆತ್ತಂ ನವರಸ ವಿಶೇಷಮುದಯಿಸುಗುಂ ಸಂ।
ಪತ್ತಿಯನವಱವಿಕಲ್ಪಮ।
ನುತ್ತಮರಿಂದಱಗೆ ಲಕ್ಷ್ಯಲಕ್ಷಣಯುಗದಿಂ ॥ ಕ॥ ಎಂದು ಕೊಟ್ಟಿದ್ದಾರೆ. ಬಹುಷಃ ಪಾಠದಲ್ಲಿ ಇರುವ ಪದ್ಯ ಬೇರೆ ಪ್ರತಿಯದಿರಬೇಕು ಎಂದು ತಿಳಯುತ್ತದೆ.

೨. ಪುಟ ೨೨ ರ ಅಡಿ ಟಿಪ್ಪಣಿಯಲ್ಲಿ ೨ ಶ್ಲೋಕಗಳನ್ನು ಕೊಟ್ಟು ಇದು ಗ। ಪುಸ್ತಕದಲ್ಲಿ ವಾಗಧುತಕ್ಕೆ ಮತ್ತು ಕ್ರಿಯಾದ್ಧುತಕ್ಕೆ ಉದಾಹರಣೆಯಾಗಿ ಕೊಟ್ಟಿದೆ ಎಂದು ಹೇಳದ್ದಾರೆ.

೩. ಪುಟ ೪೮ ರಲ್ಲಿ " ಪೊಯ್ದೊಡೊಂದು ರೂಪಪ್ಪಂ ನಾ॥ ಎಂದಿದ್ದರೆ ಪಾಠಾಂತರವು " ಬ॥ಯ್ದೊಡೆ ತನಗೆ ರಾಗವಕ್ಕಟ" ಎಂದು ಕೊಟ್ಟಿದ್ದಾರೆ.

೪. ಪುಟ ೭೭ ರಲ್ಲಿ ಒಟ್ಟೊಟ್ಟಿಗೆ ೯ ಪಾಠಾಂತರಗಳನ್ನು ನೀಡಿದ್ದಾರೆ.

ಈ ಮೇಲಿನ ಪಾಠಾಂತರವನ್ನೆಲ್ಲ ಗಮನಿಸಿದರೆ ಇವರಿಗೆ ದೊರೆತಿರುವುದು ಅಶುದ್ಧ ಪ್ರತಿ ಇದ್ದಿರಬೇಕು ಎಂದು ತಿಳಯುತ್ತದೆ. ಕೆಲವು ಕಡೆ ಇಡೀ ಪದ್ಯಭಾಗಗಳನ್ನೇ ತಿದ್ದಿದ್ದು ಬಹುಷಃ ಮೂಲ ಪಾಠಕ್ಕೆ ಸರಿಹೊಂದಿಸುವ ಪ್ರಯತ್ನ ಮಾಡಿರಬಹುದು ಎಂದೆನಿಸುತ್ತದೆ.

****

ಅಧ್ಯಾಯ ೫

ಇತರ ಗ್ರಂಥಗಳ ಸಂಪಾದನೆ

೧. ಶತಕಗಳು

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಶತಕ ಸಾಹಿತ್ಯವೂ ಒಂದು. ಛಂದೋರೂಪವಾಗಿ ರಚಿತವಾಗಿ ನೂರ ಸಂಖ್ಯೆಯನ್ನು ತಲುಪುವಂತಹ ಕೃತಿಗಳಿಗೆ ಶತಕಗಳು ಎನ್ನುತ್ತಾರೆ. ಇವುಗಳಲ್ಲಿ ತತ್ತ್ವೋಪದೇಶ. ಭಕ್ತಿಪ್ರಧಾನದಂತಹ ವಿಚಾರಗಳು ಒಳಗೊಂಡಿರುತ್ತವೆ. ಅಂತಹ ಶತಕಗಳನ್ನು ಎಂ.ಎ.ರಾಮಾನುಜಯ್ಯಂಗಾರ್ ರವರು ಪ್ರಕಟಿಸಿದ್ದಾರೆ. ಅವುಗಳಲ್ಲಿ 'ಹರಿಹರ ದೇವನ ಪಂಪಾಶತಕಂ'. 'ಸುಭಾಷಿತ ಮುಕ್ತಕ ಶತಕಂ'(ಸಂಕಲನ), 'ಕವಿ ಹಂಸರಾಜನ ರತ್ನಾಕರ ಶತಕ'. 'ರತ್ನಾಕರ ಕವಿಯ ಅಪರಾಜಿತೇಶ್ವರ ಶತಕ'. 'ಶ್ರೀವಾಸನ ವರ್ಷ ವರ್ಧತೀ ಶತಕ'(ವಾರ್ಷಿಕ ಷಟ್ಪದಿ) ಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

೧. **ಸುಭಾಷಿತ ಮುಕ್ತಕ ಶತಕಂ(ಸಂಕಲಿತ)** ಈ ಗ್ರಂಥವು ಕರ್ಣಾಟಕ ಕಾವ್ಯ ಮಂಜರಿಯ ರಕ್ಷಾಪುಟದಲ್ಲಿ ಮುದ್ರಿತವಾಗುತ್ತಿದ್ದ ನೀತಿಬೋಧಕ ಪದ್ಯಗಳಾಗಿದ್ದು ಇವುಗಳು ಉದ್ಗ್ರಂಥಗಳಿಂದ ತೆಗೆದ ಪ್ರಸಿದ್ಧ ಕವಿಗಳ ಪದ್ಯಗಳೆಂದು ತಿಳಿಸಿದ್ದಾರೆ. ಅವುಗಳನ್ನು ಒಟ್ಟಿಗೆ ಮುದ್ರಿಸಬೇಕೆಂದು **"ಸುಭಾಷಿತ ಮುಕ್ತಕ ಶತಕಂ"** ಎಂಬ ಹೆಸರಿನಲ್ಲಿ ಮುದ್ರಿಸಿರುವುದಾಗಿ ತಿಳಿಸಿದ್ದಾರೆ. ಈ ಗ್ರಂಥದಲ್ಲಿ ಉದ್ಧೃತವಾದ ಪದ್ಯಗಳನ್ನು ರಚಿಸಿದ ಕವಿಗಳ ಚರಿತೆಯನ್ನು ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಆ ಕವಿಗಳೆಂದರೆ. ನೃಪತುಂಗದೇವ. ನಾಗವರ್ಮ. ರನ್ನ. ನಯಸೇನ. ನಾಗಚಂದ್ರ. ದುರ್ಗಸಿಂಹ. ವೃತ್ತವಿಲಾಸ. ಇನ್ನು ಮುಂತಾದ ಪ್ರಸಿದ್ಧ ಕವಿಗಳ ಉಲ್ಲೇಖವನ್ನು ಮಾಡಿರುವುದಾಗಿ ತಿಳಿಸಿದ್ದಾರೆ.

ಇದರಲ್ಲಿ ಶೋಧನ ಪತ್ರವನ್ನು ಕೊಟ್ಟಿದ್ದು ಪದ್ಯದ ಸಂಖ್ಯೆ ಮತ್ತು ಅಶುದ್ಧ ಶುದ್ಧ ಪದಗಳನ್ನು ಉಲ್ಲೇಖಿಸಿದ್ದಾರೆ.

ಉದಾಹರಣೆಗೆ: ಪದ್ಯ೧. ಅಶುದ್ಧ – ನೆಱ್ದು. ಶುದ್ಧ–ನೆರೆದು

ಪದ್ಯ ೬ ಅಶುದ್ಧ–ತತ್ತ್ರಸಪ್ಮೈಕ. ಶುದ್ಧ–ತತ್ತ್ರಶಮ್ಮೈಕ

ಪದ್ಯ ೨೩ ಅಶುದ್ಧ– ಅಱಿಪರ್ಗೆ. ಶುದ್ಧ–ಅಱಿಪಿಂಗೆ

ಪದ್ಯ ೫೦ ಅಶುದ್ಧ – ಗಳಸ್ರಿತತಿಗಳ್. ಶುದ್ಧ–ಗಳಸ್ರತತಿಗಳ್ನ ಎಂದು ಕೊಟ್ಟಿದ್ದಾರೆ.

ಇದನ್ನು ಬೇರೆ ಬೇರೆ ಗ್ರಂಥಗಳಿಂದ ಸ್ವತಃ ಎಂ.ಎ.ರಾಮಾನುಜಯ್ಯಂಗಾರ್ ಅವರೇ

ಸಂಶೋಧಿಸಿರುವುದರಿಂದ ಇದು ಪ್ರಸ್ತುತ ಗ್ರಂಥಸಂಪಾದನೆಯ ಪರಿಮಿತಿಯಲ್ಲಿ ಬರುವುದಿಲ್ಲವಾದರೂ ಆಕಾಲಕ್ಕೆ ಇಂಥದೊಂದು ಸಂಕಲನವನ್ನು ಪ್ರಕಟಿಸುವ ಯೋಚನೆಯನ್ನು ಎಂ.ಎ.ರಾಮಾನುಜಯ್ಯಂಗಾರ್ ಹೇಗೆ ಮಾಡಿದ್ದಾರೆಂಬುದನ್ನು ದಾಖಲಿಸುವುದಕ್ಕಾಗಿ ಇಲ್ಲಿ ಉಲ್ಲೇಖಿಸಿದೆ.

೨. **"ರತ್ನಾಕರ ಕವಿಯ ಅಪರಾಜಿತೇಶ್ವರ ಶತಕಂ"** ಈ ಗ್ರಂಥದ ಉಪೋದ್ಘಾತದಲ್ಲಿ ಇದನ್ನು ರಚಿಸಿದ ಕವಿ ರತ್ನಾಕರಾಧೀಶ್ವರ ಶತಕವನ್ನು ರಚಿಸಿ ಶ್ರೀ ಕವಿ ಹಂಸರಾಜ ಎಂಬ ಬಿರುದನ್ನು ಗಳಿಸಿದ ಶೃಗಾರ ಕವಿ ಎಂದಷ್ಟೆ ಇದ್ದು ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ ಎಂದಿದ್ದಾರೆ.

ಇತರ ಪುಸ್ತಕಗಳಲ್ಲಿ 'ಅಪರಾಜಿತೇಶ್ವರ ಶತಕ'ವನ್ನು ರಚಿಸಿದವನು ರತ್ನಾಕರ ಕವಿ ಈತನ ವಿಷಯವಾಗಿ ಶ್ರವಣ ಬೆಳಗೊಳದ ಗವರ್ನಮೆಂಟ್ ಸಂಸ್ಕೃತ ಪಾಠಶಾಲಾಧ್ಯಕ್ಷರಾದ ವಿದ್ವಾನ್ ಬ್ರಹ್ಮಸೂರಿ ಶಾಸ್ತ್ರಿಗಳು ಬರೆದು ಕಳುಹಿಸಿರುವುದೇನೆಂದರೆ

" ಈ ಗ್ರಂಥಕರ್ತನು ತೌಳವ ದೇಶದಲ್ಲಿ ಅಂದರೆ ಮಂಗಳೂರು ಜಿಲ್ಲಾ ಮೂಡುಬಿದರೆಯೆಂಬ ಜೈನ ಕ್ಷೇತ್ರದಲ್ಲಿ ವಾಸ ಮಾಡುತ್ತಿದ್ದನೆಂದು ತೋರುತ್ತದೆ. ಈ ಕವಿಯು ಪೂರ್ವನಾಟಕ, ಉತ್ತರನಾಟಕಗಳನ್ನು ರಚಿಸಿರುವಂತೆ ಈತನಿಂದ ವಿರಚಿತವಾದ ಭರತೀಶ್ವರ ಚರಿತ್ರೆಯಲ್ಲಿರುವ "ಸಾ॥ ಶ್ರೀ ಶಕ ವರ್ಷವು ಸಾಸಿರದೈನೂರು। ತಿ ಸೆಂಬತ್ತೆರಡನೆಯಾ॥ ಭೃಗುವಾಗ ಪುನರ್ವಸುತಾರಾಯುತಗಂಡ।ಮಿಗೆ ಯೋಗವಣಿ ಚಾಕರಣಾ॥ ಮೃಗಪತಿ ಲಗ್ನವೆಸಿಯಲು ಉಚಿತಮಾಯ್ತು। ಸುಗುನಭವತರಾಜಕೃತಿಯೂ॥ "

ಈ ಶ್ಲೋಕದಿಂದ ಕವಿಯು ೧೫ ನೆ ಶತಮಾನದ ಅಂತ್ಯದಲ್ಲಿಯೂ ೧೬ ನೇ ಶತಮಾನದ ಆಧಿಭಾಗದಲ್ಲಿಯೂ ಇದ್ದನೆಂದು ಗೊತ್ತಾಗುತ್ತದೆ.

ಇದನ್ನು ರಚಿಸಲು ಪ್ರತಿಗಳನ್ನು ಕಳುಹಿಸಿದ ಶ್ರವಣಬೆಳಗೊಳದ ವಿದ್ವಾನ್ ಬ್ರಹ್ಮಸೂರಿ ಶಾಸ್ತ್ರಿಗಳಿಗೂ, ಕರ್ಣಾಟಕ ಭಾಷೋಜ್ಜೀವನಾ ಪಾಠಶಾಲಾ ಚಾಮರಾಜನಗರದ ಶ್ರೀಕಂಠಶಾಸ್ತ್ರಿಗಳಿಗೂ, ಮಿಷನ್ ಸ್ಕೂಕ್ ಪೆನ್‌ಷನ್ ಮನಿಷ್ ಅನ್ನದಾನಿ ಭಟ್ಟರ ಶಾಮಂಣನವರಿಗೂ ಕೃತಜ್ಞತೆಯನ್ನು ಸಲ್ಲಿಸಿರುವುದರಿಂದ ಇದು ೩ ಪ್ರತಿಗಳ ಆಧಾರದ ಮೇಲೆ ಮುದ್ರಿತವಾಗಿರುವುದಾಗಿ ತಿಳುದುಬರುತ್ತದೆ.

ಇದರಲ್ಲಿ ಪಾಠಾಂತರಗಳು ಎರಡು ಪುಸ್ತಕಗಳಲ್ಲಿ ಎಂದು ಹೇಳಿ ಕೆಲವು ಶ್ಲೋಕಗಳನ್ನು ಉದಾಹರಿಸಿದ್ದಾರೆ.

"ಒಂದೊಂದಾತ್ಮನೆ ಶುದ್ಧದಿಂ ತ್ರಿಜಗದಾಪೂರ್ಣಾಕೃತಂಗಳ್ ಜಗ।
ದ್ವಂದೋತ್ಕಂಪಿತಶಕ್ತಗಳ್ ಪರರ್ಗಶಕ್ಯಂಗಳ್ ಜತ್ಕರ್ತೃಗಳ್॥
ತಂದಿಂತೆಲ್ಲವನಾರ್ದ್ರಚರ್ಮದೊಡಲೊಳ್ತಟ್ಟಾನೆಪೆಣ್ಣಶ್ವವಾ।
ಆಂದೇಂಮಾರ್ಗುಮೊಪಾಪಪುಣ್ಯಯುಗಳಂ ರತ್ನಾಕರಾಧೀಶ್ವರಂ॥
ಎಂಬುಫುದು ೩೪ ನೆಶ್ಲೋಕವಾಗಿದೆ. ಕೆಲವಲ್ಲಿಲ್ಲ ಎಂದಿದ್ದಾರೆ.

೯೫ ನೆಯ ಶ್ಲೋಕದಲ್ಲಿ " ಮಹೀಶ್ವರನೊಡ್ಡಾಯಿನ" ಎಂದು ಪಾಠಾಂತರವೊಂದಿದೆ ೧೦೯ ನೆಯ ಶ್ಲೋಕದಲ್ಲಿ 'ವಿಂಧ್ಯಾದ್ರೋಣನದೊಂದು' ಎಂದು ಪಾಠಾಂತರವೊಂದಿದೆ.

ತ್ರಿಜತ್ಸಾ ್ಯಮಜಿನೇಂದ್ರ ಸಿದ್ಧ ಶಿವಲೋಕಾರಾಧ್ಯಸರ್ವಜ್ಞ ಶಂ।
ಭುಜಗನ್ನಾಥ ಜಗತ್ಪಿತಾಮಹಾಹರ ಶ್ರೀಕಾಂತ ವಾಣೀಶ ವಿ॥
ಷ್ಣು ಜಿತಾನುಗಜಿನೇಶ ಪಶ್ಚಿಮ ಸಮುದ್ರಾಧೀಶ್ವರಾ(ರೇ)ಗದಿಂ।
ನಿಜನುಂತೋಱದಯೊಳುಗೇಂ ತಳುವಿದೇಂ ರತ್ನಾಕರಾಧೀಶ್ವರಾ॥ ಎಂದು ಒಂದು ಪುಸ್ತಕದಲ್ಲಿ ೧೨೭ ನೆಯ ಶ್ಲೋಕವಾಗಿದೆ.

ಪುಟ ೨೮ರಲ್ಲಿ ಪಾಠ ಮೆಚ್ಚಿ ಎಂದಿದ್ದರೆ ಪಾಠಾಂತರವನ್ನು ಪೆರ್ಚಿ ಖ॥ ಎಂದು ಕೊಟ್ಟಿದ್ದಾರೆ.
ಛುದಿದನಾತ್ಮನಹೋ ಎಂದಿರುವುದಕ್ಕೆ ಪಾಠಾಂತರವು ಛುಟ್ಟಿದಜೇವನಹೋ ಕ॥ ಎಂದಿದೆ.
ಪುಟ ೩೫ ರಲ್ಲಿ ಭತ್ರ್ಪತಿಗಡಾಂತುದು ಎಂಬುದಕ್ಕೆ ಪಾಠಾಂತರವು ಭವಪ್ರತಿಗಡಾಂತು ಖ॥ ಎಂದು
ಪುಟ ೪೭ ರಲ್ಲಿ ಮುಗಿಲ್ಗಳೇ, ಪರೆಯಲೆಂದುಱ ಎಂದಿದ್ದರೆ ಮುಗಿಲ್ಗಳಪರಿಯಲೆ ಕ॥ ಎಂದು
ಪುಟ ೮೫ ರಲ್ಲಿ ಯಾರ್ಚಿತಾ ಎಂದುದಕ್ಕೆ ಯಾರ್ಜ್ಜಿತಾ ಕ॥ ಎಂದು ಕೊಟ್ಟಿದ್ದು
ಕೊನೆಯಲ್ಲಿ ಕೊನೆಯ ಶ್ಲೋಕ ಕ॥ ಪುಸ್ತಕದಲಿಲ್ಲ ಎಂದಿದ್ದಾರೆ.

೩. "ಶ್ರೀನಿವಾಸನ ವರ್ಷ ವರ್ಧಂತೀ ಶತಕ(ವಾರ್ಧಿಕ ಷಟ್ಪದಿ)" ಇದರ ಪೀಠಿಕಾ ಭಾಗದಲ್ಲಿ ಕವಿ ವಿಚಾರವಿದ್ದು ಕೌಂಡಿಲ್ಯಗೋತ್ರದ ವೈಷ್ಣವ ಬ್ರಾಹ್ಮಣನಾದ ನಾರಾಯಣನೆಂಬುವರ ಮಗ 'ಗೋಕರ್ಣನಿವಾಸಿ ಶ್ರೀನಿವಾಸ' ಎಂಬ ಗ್ರಂಥಕರರ್ತನು ಮುಮ್ಮಡಿ ಕೃಷ್ಣರಾಜಒಡೆಯರ ವರ್ಷವರ್ಧಂತಿಯ ಮಹೋತ್ಸವವನ್ನು ನೋಡುವುದಕ್ಕಾಗಿ ಕುಟುಂಬ ಸಮೇತವಾಗಿ ಮೈಸೂರಿಗೆ ಬಂದು ಮಹೋತ್ಸವದ ವೈಭವಗಳನ್ನು ವಾರ್ಧಿಕ ಷಟ್ಪದಿಯಲ್ಲಿ ರಚಿಸಿದ್ದಾನೆ ಎಂದು ತಿಳಿಸಿದ್ದಾರೆ.

ಇದರಲ್ಲಿ ರಾಜಧಾನಿ ಮೈಸೂರು ನಗರದ ವರ್ಣನೆ, ವರ್ಧಂತಿ ಮಹೋತ್ಸವದ ಎಲ್ಲ ಪದ್ಧತಿಗಳೂ ಕ್ರಮವಾಗಿ ವರ್ಣಿಸಲ್ಪಟ್ಟಿದ್ದು ಮೈಸುರು ದೇಶದ ಕನ್ನಡಿಗರಿಗೆಲ್ಲ ಇದು ಆಹ್ಲಾದಕರವಾಗಿದೆ ಎಂದು ತಿಳಿಸಿದ್ದಾರೆ. ವಿಶೇಷವಾಗಿ ಮಾಸ ಪತ್ರಿಕೆಯಾದ ಕರ್ಣಾಟಕ ಕಾವ್ಯ ಕಲಾನಿಧಿ ಬಗ್ಗೆ ಪ್ರಕಟಣೆ ನೀಡಿದ್ದಾರೆ.

ಈ ಪತ್ರಿಕೆಯು ಪ್ರತಿ ಮಾಸವೂ ಪ್ರಕಟವಾಗುತ್ತದೆ. ಇದರಲ್ಲಿ ಪ್ರಾಚೀನ ಕವಿಗಳ ಉತ್ತಮವಾದ ಕಾವ್ಯ ನಾಟಕ, ಚಂಪೂ, ಗದ್ಯ, ಛಂದಸ್ಸು ಅಲಂಕಾರ ಮುಂತಾದ ಗ್ರಂಥಗಳು ಮುದ್ರಿತವಾಗುತ್ತವೆ. ಇದರಲ್ಲಿ ಅಚ್ಚಾಗುವ ಗ್ರಂಥಳು ನಂತರದಲ್ಲಿ ಬೇರೆಬೇರೆ ಪುಸ್ತಕಗಳಾಗಿ ಪ್ರಕಟವಾಗುತ್ತವೆ ಎಂದೂ ಇದರ ಪ್ರತಿ ಸಂಚಿಕೆಯೂ ೪೦ ಪುಟಗಳಷ್ಟಿರುತ್ತವೆ ಎಂದು ತಿಳಿಸಿದ್ದಾರೆ.

ಭಾಷಾಭಿಮಾನಗಳು ಇದಕ್ಕೆ ಪ್ರೋತ್ಸಾಹ ನೀಡುತ್ತಾರೆಂದು ನಂಬಿರುತ್ತೇನೆ ಎಂದು ಕೊಟ್ಟಿದ್ದಾರೆ. ಮತ್ತು ಚಂದಾ ನಿರ್ಣಯವು ಇದರಲ್ಲಿ ಕಾಣಬರುತ್ತದೆ. ಜೊತೆಗೆ ಕಲಾನಿಧಿಯಲ್ಲಿ ಪ್ರಕಟಗೊಂದ ಗ್ರಂಥಗಳಪಟ್ಟಿಯನ್ನು ಬೆಲೆಸಹಿತವಾಗಿ ನೀಡಿದ್ದಾರೆ.

ಈ ಶತಕಗಳಲ್ಲಿ ನೀತಿಬೋಧನೆ. ತತ್ವ ವಿಚಾರ. ಮತ್ತು ವರ್ಷ ವರ್ಧಂತಿಯ ಮಹೋತ್ಸವದ ವಿಚಾರಗಳು ಕಂಡುಬರುತ್ತವೆ. ಇವುಗಳನ್ನು ಸಂಪಾದಿಸಿ ಪ್ರಕಟಿಸುವಲ್ಲಿ ಸಂಪಾದಕರು ತೋರಿರುವ ಆಸಕ್ತಿಯನ್ನು ಗಮನಿಸಬೇಕಾಗಿದೆ. ಇದರಿಂದ ಎಲ್ಲಾ ವಿಚಾರಗಳನ್ನು ತಿಳಿದಿದ್ದರೆಂದು ಈ ಕೃತಿಗಳ ಮೂಲಕ ತಿಳಿಯುತ್ತದೆ.

೨. ನಾಟಕ

ಸಿಂಗಾರಾರ್ಯನ ಮಿತ್ರವಿಂದಾಗೋವಿಂದ ನಾಟಕಂ

ಈ ಕೃತಿಯನ್ನು ೧೯೨೦ ರಲ್ಲಿ ಪ್ರಕಟಿಸಿದ್ದು ಗ್ರಂಥದ ಕೊನೆಯಲ್ಲಿ ಕವಿಚರಿತೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಕನ್ನಡದಲ್ಲಿ ದೊರೆಯುತ್ತಿದ್ದ ಏಕೈಕ ನಾಟಕ ಇದನ್ನು ಸಂಸ್ಕೃತದಿಂದ ಭಾಷಾಂತರ ಮಾಡಿರುವುದಾಗಿ ತಿಳಿಸಿದ್ದಾರೆ. ಕವಿಯ ಕಾಲದ ಬಗ್ಗೆ ಚರ್ಚಿಸುತ್ತಾ ಈತನು ಶ್ರೀ ಚಿಕದೇವ ಮಹಾರಾಜನಾ ಕಾಲದಲ್ಲಿ ಮಂತ್ರಿಯಾಗಿ ಅಸ್ಥಾನ ಪಂಡಿತನಾಗಿ ಅನೇಕ ಕರ್ನಾಟಕ ಗ್ರಂಥಗಳನ್ನು. ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದು ತಿರುಮಲೆಯಾರ್ಯನ ಸಹೋದರನಾದ ಈತ ಕೌಶಿಕ ಗೋತ್ರದ ಶ್ರೀವೈಷ್ಣವ ಬ್ರಾಹ್ಮಣನಾದ ಸೌಮ್ಯ ನೃಸಿಂಹರಾರ್ಯನ ಮಗ ಸಿಂಗಾರಾರ್ಯ. ಈತನು ಚಿಕದೇವರಾಯನ ಪುತ್ರನ ಆಳುವಿಕೆಯಲ್ಲಿ ಮಂತ್ರಿಯಾಗಿದ್ದನು ಎಂದು ಹೇಳುತ್ತಾರೆ.

ಟಿಪ್ಪಣಿ

ಈ ನಾಟಕಕ್ಕೆ ಟಿಪ್ಪಣಿಯನ್ನು ಸುಧೀರ್ಘವಾಗಿ ಕೊಟ್ಟಿದ್ದು ಇದರಲ್ಲಿ ಪದದ ಅರ್ಥ, ಪದವಿಭಾಗಕ್ರಮ ದೇಶಿಪದಗಳ ಬಳಕೆ ವ್ಯಾಕರಣ, ಛಂದಸ್ಸು, ಅಲಂಕಾರ ಮುಂತಾದ ವಿಚಾರಗಳನ್ನೇಲ್ಲಾ ತಿಳಿದ್ದಾರೆ.

ಉದಾ: ಇಂಗೋಲ್ – ಇನಿದು + ಕೋಲ್ ಎಂದು ಪದವಿಭಾಗವನ್ನು ತೋರಿಸಿದ್ದಾರೆ

ಅರ್ಥದಲ್ಲಿ ಅನುವಿಂದೆ ಎಂಬುದಕ್ಕೆ ಪ್ರೀತಿಯಿಂದೆ ಎಂದು ಕೊಟ್ಟಿದ್ದಾರೆ.

ಇದು ಹೆಚ್ಚು ಉಪಯುಕ್ತವಾಗಿದ್ದು ನಾಟಕವನ್ನು ಓದಲು ಸಹಾಯಕವಾಗಿದೆ ಎನ್ನಬಹುದು ಇದು ಏಕೈಕ ನಾಟಕವೆಂದು ಗುರುತಿಸಲ್ಪಟಿದ್ದು ರಾಮಾನುಜಯ್ಯಂಗಾರ ಇದನ್ನು ಸಂಪಾದಿಸಿಕೊಟ್ಟಿರುವುದು ಇಂದಿಗೂ ಸ್ಮರಣಾರ್ಥವಾಗಿದೆ.

೩. ನಾಟಕ ಗದ್ಯಾನುವಾದಗಳು

ಎಂ.ಎ. ರಾಮಾನುಜಯ್ಯಂಗಾರ್ ರವರು ನಾಟಕ, ಗದ್ಯ ಮತ್ತು ವಚನ ರೂಪದಲ್ಲಿದಂತವುಗಳನ್ನು ಪರಿಶೋಧಿಸಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ಉತ್ತರ ರಾಮಚರಿತ ಕಥೆ, ಮುಮ್ಮಡಿ ಕೃಷ್ಣರಾಜ ಒಡೆಯರ ಶಾಕುಂತಳ ನವೀನ ಟೀಕೆ, ಮುಮ್ಮಡಿ ಕೃಷ್ಣರಾಜ ಒಡೆಯರ ವತ್ಸರಾಜ ಕಥೆ–ಪೂರ್ವಭಾಗ(ರತ್ನಾವಳೀ ಕಥೆ) ಮತ್ತು ಪ್ರಬೋದ ಚಂದ್ರೋದಯ ಕಥ(೧–೩ ಅಂಕಗಳು).

೧. **'ಉತ್ತರ ರಾಮಚರಿತ ಕಥೆ'**, ದ್ವಿತೀಯ ಮುದ್ರಣವಾಗಿದ್ದು ಇದು ಮಹಾಕವಿ ಶ್ರೀ ಭವಭೂತಿ ಪ್ರಣೀತವಾದ ಸಂಸ್ಕೃತದ ಉತ್ತರ ರಾಮಚರಿತ ನಾಟಕದ ಕನ್ನಡ ಗದ್ಯಾನುವಾದ. ಇದಕ್ಕೆ "ಉತ್ತರ ರಾಮಚರಿತ್ರ ಕಥಾತಾತ್ಪರ್ಯಂ" ಎಂಬ ಹೆಸರೂ ಇರುವಂತೆ ತೋರುತ್ತದೆ ಎಂದ್ದಾರೆ.

ಈ ಗ್ರಂಥವನ್ನು ಕನ್ನಡಿಸಿದ ಕವಿಯ ವಿಚಾರ ತಿಳಿಯದು ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲೋ ಅಥವಾ ಇನ್ನೂ ಸ್ವಲ್ಪ ಪೂರ್ವದಲ್ಲಿಯೋ ರಚನೆಯಾಗಿರಬೇಕು ಎಂದು ಊಹಿಸಲು ಸಾಧ್ಯವಿದೆ ಎಂದಿದ್ದಾರೆ. ಈ ಗ್ರಂಥದಲ್ಲಿ ವಾಕ್ಯ ರಚನಾ ಕ್ರಮವು ಬಹುಮಟ್ಟಿಗೆ ಸಂಸ್ಕೃತ ಶೈಲಿಯನ್ನೇ ಹೋಲುತ್ತದೆಂದೂ ಈತನ ಶೈಲಿಯೂ ನದಿಯ ಪ್ರವಾಹದಂತೆ ಗಂಭೀರ, ಆಹ್ಲಾದಕರ, ಏಕರೂಪವಾಗಿಯೂ ಇದೆ ಎಂದು ತಿಳಿಸುತ್ತಾರೆ. ಆದರೆ ಭವಭೂತಿಯ ಉನ್ನತಾಭಿಪ್ರಾಯಗಳ ಅನುವಾದವಾದುದರಿಂದ ಸಾವಧಾನವಾಗಿ ಪಠಿಸಿದ ಹೊರತು ಅರ್ಥವಾಗುವುದು ಕಷ್ಟ ಎಂದಿದ್ದಾರೆ.

ಸೂರ್ಯ ಬಿಂಬಕ್ಕೂ ಪ್ರತಿ ಬಿಂಬಕ್ಕೂ ಎಷ್ಟು ಅಂತರವೋ ಅಷ್ಟೇ ಅಂತರ ಸಂಸ್ಕೃತ

ಮೂಲಕ್ಕೂ ಕನ್ನಡದ ಟೀಕೆಗೂ ಎಂದು ನಿಸ್ಸಂದೇಹವಾಗಿ ಹೇಳಬಹುದು ಎಂದಿದ್ದಾರೆ. ಟೀಕಾರಾರನು ಸ್ತ್ರೀ ಮತ್ತು ಮಕ್ಕಳಿಗೆ ಅರ್ಥವಾಗದಂತೆ ಪರಿವರ್ತನೆ ಮಾಡಿರುವುದು ಮಹೋಪಕಾರವಾಗಿದೆ ಎಂದು ಹೇಳುತ್ತಾರೆ. ಭವಭೂತಿಯ ರಚನಾ ಸಾಮರ್ಥ್ಯವು ಅನ್ಯಾದೃಶವೆಂದು " ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೇ" ಎಂದು ಹೇಳುತ್ತಾರೆ. ಗೋವರ್ಧನ ದಾಸರು ಭವಭೂತಿಯನ್ನು ಸ್ಮರಿಸಿರುವುದಾಗಿ ತಿಳಿಸಿದ್ದಾರೆ.

ಈ ಉದ್ಗ್ರಂಥದ ಸ್ವಾರಸ್ಯವನ್ನು ಸವಿಯಲು ಕಥಾಚಮತ್ಕಾರ, ವರ್ಣನಾಭಾಗ, ರಸ, ಎಂಬ ಸೂಚನೆಗಳು ಸಹಾಯಮಾಡುವುದು ಎಂದು ತಿಳಿಸಿದ್ದಾರೆ. ಈ ನಾಟಕವು ಕರುಣರಸ ಪ್ರಾಧಾನವಾದದ್ದು ಎಂದು ತಿಳಿಸಿದ್ದಾರೆ. ಏಳು ಅಂಕಗಳಿದ್ದು ಪ್ರತಿ ಅಂಕದಲ್ಲಿಯೂ ಒಂದೋಂದು ರಸವು ತೋರಿಬರುವುದಾಗಿ ತಿಳಿಸಿದ್ದಾರೆ.

ಈ ಕೃತಿಯ ಪ್ರಥಮ ಮುದ್ರಣದಲ್ಲಿ ಇದರ ಬಗ್ಗೆ ಹೆಚ್ಚಿನ ಮಾಹಿತಿ ಇದ್ದಿರಬಹುದು ಅದು ದೊರೆಯದ ಕಾರಣದಿಂದ ಇದರಲ್ಲಿ ಹೆಚ್ಚಿನ ವಿಷಯವನ್ನು ಗಮನಿಸಲು ಸಾಧ್ಯವಾಗುವುದಿಲ್ಲ ಇದು ಅಚ್ಚುಕಟ್ಟಾಗಿ ಮುದ್ರಿತವಾಗಿದೆ.

೨. **"ಮುಮ್ಮಡಿ ಕೃಷ್ಣರಾಜ ಒಡೆಯರ ಶಾಕುಂತಳ ನವೀನ ಟೀಕೆ"** ಇದೊಂದು ವಚನ ಗ್ರಂಥವಾಗಿದ್ದು. ಶ್ರೀ ಕೃಷ್ಣ ರಾಜಒಡೆಯರ್ ರವರು ಅಧಿಕೃತವಾಗಿ ಮುದ್ರಿಸಲು ಹೇಳಿದ್ದರಿಂದ ಮುದ್ರಿಸಿರುತ್ತೇನೆ ಎಂದು ಹೇಳಿ ಅವರಿಗೆ ಕೃತಜ್ಞರಾಗಿರುವುದಾಗಿ ತಿಳಿಸಿದ್ದಾರೆ.

ಇದರ ಅವತಾರಿಕೆಯಲ್ಲಿ ಗ್ರಂಥ ರಚನೆಗೆ ಕಾರಣವನ್ನು ತಿಳಿಸಿದ್ದಾರೆ. ಮಹಾರಾಜರು ಕಾಳಿದಾಸನಿಂದ ನವರಸಭರಿತವಾಗಿ ಸರಸಜನಾನಂದಕರವಾಗಿ ಮೂಡಿ ಬಂದ ದುಷ್ಯಂತ ಶಾಕುಂತಲಾ ಕಥಾ ಸಂದರ್ಭಗರ್ಭಿತವಾಗಿ ರಚಿತವಾದ ಸಂಸ್ಕೃತದ ನಾಟಕಗಳಲೆಲ್ಲಾ ಅತ್ಯಂತ್ತಮವೆಂದು ಪ್ರಸಿದ್ಧವಾಗಿರುವುದು ಶಾಕುಂತಲಾ ನಾಟಕದ ಕಥಾ ಸ್ವಾರಸ್ಯವನ್ನು ಅನುಭವಿಸಿ ತೃಪ್ತಿಹೊಂದಿ ಇದನ್ನು ಸಂಸ್ಕೃತ ತಿಳಿಯದ ಪ್ರಜೆಗಳು ಓದಬೇಕು ಎಂಬ ಉದ್ದೇಶದಿಂದ ಕರ್ಣಾಟಕ ಭಾಷೆಯಲ್ಲಿ ವಚನ ಕಾವ್ಯವಾಗಿ ರಚಿಸಿದರು. ಇದಕ್ಕೆ 'ಕೃಷ್ಣರಾಜ ವಾಣೀವಿಲಾಸರತ್ನಾಕರ'ವೆಂದು ಹೆಸರು ಕೊಟ್ಟು ಸಾಮಾನ್ಯ ಜನರೆಲ್ಲರು ಅರಿಯುವಂತೆ ಹೊಸಗನ್ನಡದಲ್ಲಿ ಗದ್ಯರೂಪವಾಗಿ ಬರೆದಿದ್ದಾರೆ ಎಂದು ತಿಳಿಸಿದ್ದಾರೆ.

ಈ ಕೃತಿಯ ಶೈಲಿಯು ಬಹಳ ರಮಣೀಯವಾಗಿ ಇರುವುದರಿಂದ ಕೆಲವು ಕಡೆ ಸ್ವಕಪೋಲಕಲ್ಪಿತಗಳ ವರ್ಣನೆಗಳನ್ನು ಸೇರಿಸಿ ಕಥೆಯ ರಮಣೀಯತೆಯನ್ನು ಹೆಚ್ಚಿಸಿರುವುದರಿಂದಲೂ ಈ ಗ್ರಂಥಕ್ಕೆ "ಕೃಷ್ಣರಾಜವಾಣೀವಿಲಾಸರತ್ನಾಕರ" ಶ್ರೀಕೃಷ್ಣರಾಜ ಪ್ರಭುಗಳವರ ವಾಣಿಯ ವಿಲಾಸಗಳಿಗೆ

ರತ್ನಾಕರ ಸಮುದ್ರ ಎಂದರೆ ಇದರಲ್ಲಿ ಮಹಾರಾಜರವರ ವಾಗ್ಧೋರಣೆಯನ್ನು ನೋಡಬಹುದಾಗಿರುವುದರಿಂದಲೂ ಈ ಗ್ರಂಥಕ್ಕೆ ಉಚಿತವಾಗಿಯೂ ಅನ್ವರ್ಥವಾಗಿಯೂ ಇದೆ ಎಂದು ತಿಳಿಸಿದ್ದಾರೆ.

ಈ ಗ್ರಂಥದ ಕಥೆಯನ್ನು ನಾಲ್ಕು ಕಲ್ಲೋಲಂಗಳಾಗಿ ಪ್ರತಿ ಕಲ್ಲೋಲದಲ್ಲಿಯೂ ನಾಲ್ಕು ನಾಲ್ಕು ತರಗಂಗಗಳನ್ನಾಗಿ ವಿಭಾಗಮಾಡಿದಾರೆ ಎಂದು ತಿಳಿಸಿದ್ದಾರೆ. ಬೇರೆ ಕೃತಿಗಳಲ್ಲಿ ವಿಭಾಗಗಳಿಗೆ ಸಂಧಿ, ಅಧ್ಯಾಯ, ಆಶ್ವಾಸ ಎಂದು ಕೊಟ್ಟಿರುವುದನ್ನು ನೋಡಬಹುದು ಆದರೆ ಈ ಕೃತಿಯಲ್ಲಿ ವಿಶೇಷವಾಗಿ ಕಲ್ಲೋಲ, ತರಂಗ ಎಂಬುದನ್ನು ಬಳಸಿರುವುದು ಕಂಡುಬರುತ್ತದೆ.

ಈ ಕೃತಿಯಲ್ಲದೇ ಇನ್ನು ಅನೇಕ ಗ್ರಂಥಗಳನ್ನು ರಚಿಸಿ ಲೋಕಕ್ಕೆ ನೀಡಿರುವುದಾಗಿ ತಿಳಿಸಿದ್ದಾರೆ ಮತ್ತು ಮಹಾರಾಜರು ಉದಾರಾಶಯ ಉಳ್ಳವರು ಎಂದು ವರ್ಣಿಸಿದ್ದಾರೆ.

"ಮುಮ್ಮಡಿ ಕೃಷ್ಣರಾಜ ಒಡೆಯರ ವತ್ಸರಾಜ ಕಥೆ-ಪೂರ್ವಭಾಗ(ರತ್ನಾವಳೀ ಕಥೆ)" ಇದನ್ನು ಶ್ರೀ ಕೃಷ್ಣರಾಜನ ಅಪ್ಪಣೆ ಮೇರೆಗೆ ಮುದ್ರಿಸಿರುವುದಾಗಿ ತಿಳಿಸಿದ್ದಾರೆ. ಇದರಲ್ಲಿ ವಿಷಯಾನುಕ್ರಮಣಿಕೆಯಿಂದ ಪ್ರಾರಂಭಿಸಿದ್ದು ಇದರಲ್ಲಿ ಹೆಚ್ಚಿನ ವಿವರಗಳೇನೂ ಕಂಡುವರುವುದಿಲ್ಲ.

ಈ ಗ್ರಂಥಗಳನ್ನು ಹೇಗಿದೆಯೋ ಹಾಗೆ ಅನುವಾದ ಮಾಡಿ ಪ್ರಕಟಿಸಿರುವುದರಿಂದ ಪ್ರತಿಗಳಿರಲಾರದು ಎಂದು ತಿಳಿಯಬಹುದು. ಇವುಗಳಲ್ಲಿ ಯಾವುದೇ ಪಾಠಾಂತರಗಳನ್ನು ಗುರುತಿಸಿದೆ ಮೂಲ ಕೃತಿಗೆ ತೊಂದರೆಯಾದ ರೀತಿ ಅಚ್ಚುಕಟ್ಟಾಗಿ ಮುದ್ರಿಸಿದ್ದಾರೆ ಎನ್ನಬಹುದು.

೪. ಮತಗ್ರಂಥಗಳು

೧ **"ವೇದಾಂತ ವಿವೇಕ ಸಾರ, ಪ್ರಥಮ ಭಾಗ(ಅದ್ವೈತ)"** ಇದೊಂದು ಅದ್ವೈತ ಮತ ಸಿದ್ಧಾಂತವಾಗಿದ್ದು ಈ ಗ್ರಂಥವನ್ನು ರಚಿಸಿದ ಕವಿಯ ವಿಚಾರವೇನು ತಿಳಿದುಬರುವುದಿಲ್ಲ ಈ ಗ್ರಂಥದ ಆರಂಭದಲ್ಲಿ

" ಯಸ್ಯಾತ್ಮಭೂತಸ್ಯ ಗುರೋಃ ಪ್ರಸಾದಾಹಂ ವಿಮುಕ್ರೋಸ್ಮಿ ಶರೀರ ಬಂಧಾತ ॥ ಸ್ವರ್ವೋಪರೇಷ್ಟುಃ ಪುರುಷೋತ್ತಮಸ್ಯ ಸ್ಯಾಂಘ್ರಿಪದ್ಮಂ ಪ್ರಣತೋಸ್ಮನಿತ್ಯ॥" ಎಂದೂ " ಮೂಢಾನ್ವಿವೇಕಿನಃ ಕೃತ್ವಾಲೋಕೇಸರ್ವೋಪದೇಶಕಃ। ಯಸ್ತಿಷ್ಠತಿ ಚತಂ ಶ್ರೀಮದ್ವಾಸುದೇವಯತಿಂಭಾಜೇ"॥ ಎಂದೂ ಹೇಳಿಕೊಂಡಿರುವುದರಿಂದ ಈತನು ವಾಸುದೇವನೆಂಬ ಹೆಸರುಳ್ಳ ಒಬ್ಬ ಪ್ರಸಿದ್ಧ, ಸರ್ವೋಪದೇಶಕನಾಗಿದ್ದ ಯತೀಶ್ವರನ ಶಿಷ್ಯನಾಗಿರಬೇಕು ಎಂದು ತಿಳಿಯುತ್ತದೆ ಎಂದಿದ್ದಾರೆ. ಸಂಸ್ಕೃತ "ವಾಸುದೇವ ಮನನ" ಎಂಬ ಪ್ರಸಿದ್ಧ ಅದ್ವೈತದ ಅಭಿಪ್ರಾಯಾನುವಾಗಿದ್ದರೂ ಅದರಲ್ಲಿರುವ ಹೇಳಿರುವಷ್ಟು ವಿಷಯವಿಲ್ಲದಿರುವುದರಿಂದ ಈ ಗ್ರಂಥವು

ಬೇರೆಯದೇ ಆಗಿರಬೇಕು ಸರಿಯಾಗಿ ನಿಶ್ಚಯಿಸಲಾಗುತ್ತಿಲ್ಲ ಎಂದಿದ್ದಾರೆ. ಆದರೆ ಈಗ್ರಂಥದಲ್ಲಿ ಉದಾಹೃತವಾದ ಕಾರಿಕಾ ರೂಪವಾದ ಶ್ಲೋಕಗಳನ್ನು ನೋಡಿದರೆ ಅದರ ಮೂಲವೂ ಕಾರಿಕಾರೂಪದಲ್ಲಿರಬೇಕು ಆ ಕಾರಿಕೆಯೇ ವಾಸುದೇವ ಯತೀಂದ್ರ ಪ್ರೋಕ್ತಮಪ್ಪ"ವಿವೇಕಸಾರ" ವೆಂದು ಆಗಿರಬಹುದು ಎಂದಿದ್ದಾರೆ. ಸಂಸ್ಕೃತ ತಿಳಿಯದವರೂ ಅದ್ವೈತ ಮತ ಪ್ರಕ್ರಿಯೆಗಳನ್ನು ಚೆನ್ನಾಗಿ ತಿಳಿದುಕೊಳ್ಳುವುದಕ್ಕೆ ಅತ್ಯಾಧರಣೀಯವಾಗಿದೆ ಎಂದು ತಿಳಿಸಿದ್ದಾರೆ.

ಈ ಗ್ರಂಥದ ಒಂದು ಮಾತ್ರಿಕೆಯು ಮದರಾಸಿನ ಪ್ರಾಚ್ಯಕೋಶಾಗಾರದಲ್ಲಿ ಇರುವುದರ ಆಧಾರದ ಮೇಲೆ ಇದನ್ನು ಕ್ರಿ.ಶ. ೧೭೬೯ ಕ್ಕೆ ೨೦, ೮೦ ವರ್ಷಕ್ಕೂ ಹಿಂದೆ ರಚಿತವಾಗಿರಬೇಕು. ಗ್ರಂಥಕರ್ತನು ೧೭ನೇ ಶತಮಾನದ ಕೋನೆಯಲ್ಲು ೧೮ ನೇ ಶತಮಾನದ ಆದಿಯಲ್ಲೂ ಇದ್ದಿರಬೇಕು ಎಂದಿದ್ದಾರೆ. ಇದರ ಅಡಿಟಿಪ್ಪಣಿಯಲ್ಲಿ ಬೇರೆ ಬೇರೆ ಪ್ರತಿಗಳ ವಿಚಾರ ತಿಳಿದ್ದಾರೆ.

ಪುಟ ೧೦೮ ಹದಿಮೂರನೆಯ ಪ್ರಕರಣಂ † ಅಡಿ ಟಿಪ್ಪಣಿಯಲ್ಲಿ ಇದು ಒಂದು ಪ್ರತಿಯಲ್ಲಿ ೧೮ ನೆಯ ಪ್ರಕರಣವಾಗಿ ಕೊಟ್ಟಿದೆ ಎಂದಿದ್ದಾರೆ.

ಪುಟ ೧೧೨ ಹದಿನಾಲ್ಕನೆಯ ಪ್ರಕರಣಂ "ಜ್ಞಾನಾಜ್ಞಾನಪ್ರಕರಣ"- ಅಡಿಟಿಪ್ಪಣಿಯಲ್ಲಿ ಇದು ೧೯ನೆಯ ಪ್ರಕರಣವಾಗಿ ಒಂದು ಪ್ರತಿಯಲ್ಲಿದೆ.

ಪುಟ ೧೩೦ ರ ಸ್ವಪ್ರಕಾಶದಲ್ಲಿರುವಂಥ ಸತ್ತೇ ಚಿತ್ತು. ಚಿತ್ತಾದಂಥ ಚಿತ್ತಿಗೆ ವಿಲಕ್ಷಣವಾಗಿ ಇರುವಂಥ ವಸ್ತುವು ಅಸತ್ತಾಗಿದೆ. ಎಂಬುದಕ್ಕೆ ಅಡಿ ಟಿಪ್ಪಣಿಯಲ್ಲಿ ಆ ಸಪ್ರಕಾಶವಾಗಿರುವಂಥ ವಸ್ತುವು ಅಸತ್ತಾಗಿ ಇದ್ದೀತಾಗಿ ಅಸತ್ತೇ ಎರಡನೆಯ ವಸ್ತು ಉಂಟಾದುದು ಆಗದೇ ಹೋಯಿತು. ಆಗಲಾಗಿ ಅಚಿತ್ತಾಗಿರುವಂಥ ಸತ್ತೇ. ಎಂದು ಒಂದು ಪುಸ್ತಕದಲ್ಲ ಅಧಿಕಪಾಠಾವಿದೆ. ಎಂದಿದೆ

ಈ ರೀತಿಯಾದ ಉಲ್ಲೇಖಗಳು ಇರುವುದನ್ನು ನೋಡಿದರೆ ಒಂದು ಮಾತೃಕೆಯ ಜೊತೆಗೆ ಇನ್ನು ಕೆಲವು ಪ್ರತಿಗಳನ್ನು ಬಳಸಿಕೊಡಿರುವುದಾಗಿ ತಿಳಿದುಬರುತ್ತದೆ.

ವಾಸ್ತವವಾಗಿ 'ವಾಸುದೇವ ಮನನ' ಪ್ರಸ್ತಿದ್ಧ ಅದ್ವೈತ ಯತಿಗಳಾಗಿದ್ದ 'ವಾಸಿದೇವಾರ್ಯರದ್ದಾಗಿದ್ದು ಅದು ಜನಪ್ರಿಯ ಕೃತಿಯಾಗಿ ಹಲವು ಭಾಷೆಗಳಲ್ಲಿ ಅನುವಾದ ವ್ಯಾಖ್ಯಾನವಾಗಿತ್ತು. ಇವರು ಅದ್ವೈತ ಕೀರ್ತನ ಸಂಪ್ರದಾಯದ ಗುರುಗಳೂ ಆಗಿದ್ದು ಇವರ ಶಿಷ್ಯರಾಗಿ ವೆಂಕಟದಾಸ ಕೃಷ್ಣಯೋಗೀಂದರು . ರಾಮಕೃಷ್ಣಾರ್ಯರು ತಿಪ್ಪದಾಸರು. ನಾರಾಯಣದಾಸರು ಮುಂತಾದರರು ಕಾಣಿಸಿಕೊಂಡು ನೂರಾರು ಕೀರ್ತನೆಗಳನ್ನು ರಚಿಸಿದ್ದು ಎಂ.ವಿ. ಸೀತಾರಾಮಯ್ಯನವರು ಮೊದಲಬಾರಿಗೆ ಶೋಧಿಸಿ ಪ್ರಕಟಿಸಿದ್ದರು. ನಂತರ ಪ್ರತಿಷ್ಠಾನ ಈ ದಾಸರುಗಳ ಉಳಿದ ಕೀರ್ತನೆಗಳನ್ನು ಪ್ರಕಟಿಸಿದೆ. ಈ ವೇದಾಂತ ವಿವೇಕಸಾರ' ಕೃತಿಯನ್ನು ವಾಸುದೇವಾರ್ಯರ

ವಾಸುದೇವಾರ್ಯರ ವಾಸುದೇವ ಮನನ ಗ್ರಂಥದ ವ್ಯಾಖ್ಯಾನವಾಗಿಯೋ ಅದರ ಆಧಾರದಿಂದಲೋ ಅವರ ಶಿಷ್ಯವರ್ಗದಲ್ಲಿ ಒಬ್ಬರು ಬರೆದಿರುವ ಸಾಧ್ಯತೆ ಇದೆ. ಎಂಬ ಇದರ ಕೀರ್ತನೆಗಳನ್ನು ಸಂಪಾದಿಸಿರುವ ಡಾ॥ ನಾ ಗೀತಾಚಾರ್ಯ ಅವರ ಅಭಿಪ್ರಾಯದ ಹಿನ್ನಲೆಯಲ್ಲಿ ಈ ಬಗ್ಗೆ ಹೆಚ್ಚಿನ ಶೋಧನೆ ನಡೆಸಬೇಕಾದ ಅಗತ್ಯವಿದೆ.

ಇದರಲ್ಲಿ ಪಾಠಾಂತರಗಳಿದ್ದು ಅಡಿಟಿಪ್ಪಣಿಯಲ್ಲಿ ಸೂಚಿಸಿದ್ದಾರೆ

ಉದಾ: ಪುಟ ೩೩ ರ ರಲ್ಲಿ "ಸ್ತದ್ಜ್ಞತೃತ್ವಾತ್ಸ್ವಯಂ ಭವೇತ್ ।

ಅವಸ್ಥಾದ್ವೈಸ್ತು ಸಮುಕ್ತಸ್ತನ್ನಾಶೇಪ್ಯಸ್ಯಸಂಸ್ಥಿತಿಃ ॥ ಎಂದಿದೆ

ಪಾಠಾಂತರವು "ಸಜ್ಞಾತೃತ್ವಾಲಯಂಭವೇತ್ ॥

ಅವಸ್ಥಾದ್ಯೈರಯುಶ್ವರಂ ನಾಶಿ ಪ್ಯಸ್ಯಸಂಸ್ಥಿತೇ"॥ ಎಂದು ಕೊಟ್ಟಿದ್ದಾರೆ.

ಪುಟ ೬೨ ಪಾಠ 'ಧ್ಯಾಷ್ಟಾಂಗ' ಎಂದಿದೆ. ಪಾಠಾಂತರವು 'ಷ್ಟಾಂಗಯೋಗವೆನುತಲೂ" ಎಂದು ಕೊಟ್ಟಿದ್ದಾರೆ.

ಪುಟ ೧೧೩ ಪಾಠ 'ಅಜ್ಞಾನಕ್ಕೆ' ಪಾಠಾಂತರವು 'ಜ್ಞಾನಕ್ಕೆ' ಎಂದಿದೆ.

ಪುಟ ೧೨೯ ಪಾಠದಲ್ಲಿ 'ಬಿದ್ದೋಪಾದಿಯಲ್ಲೇ' ಪಾಠಾಂತರವು ಬಂದು ಬೀಳುವ ಹಾಗೆ ಬೀಳುವುದು ಎಂದಿದೆ

'ದೀಪಾದಿಗಳಿಂದ ಘಾಟಾದಿಗಳು ಹಾಗಿ ಸತ್ತಿಗೆ ವಿಲಕ್ಷಣವಾದಂಥೇ' ಎಂದು ಈ ಕಡೆ ಅಧಿಕವಾಗಿ ಪಾಠ ಇದೆ ಎಂದು ಸೂಚಿಸಿದ್ದಾರೆ.

ರಾಮಾನುಜಯ್ಯಂಗಾರ್ ರವರು ಹೆಚ್ಚು ಹೆಚ್ಚಾಗಿ ಕಾವ್ಯಗ್ರಂಥಗಳನ್ನೇ ಸಂಪಾದಿಸಿದ್ದು ಈ ಮತಗ್ರಂಥವನ್ನು ಸಂಪಾದಿಸಿ ಪ್ರಕಟಿಸಿರುವುದು ಒಂದು ವಿಶೇಷವೇ ಸರಿ. ಇವರ ಈ ಅಪರೂಪಗ್ರಂಥವು ಅತ್ಯುತ್ತಮವಾಗಿ ಪ್ರಕಟಗೊಂಡಿರುವುದು ಇಂದಿಗೂ ಉಪಯುಕ್ತವಾಗುವಂತಾಗಿದೆ.

****

ಅಧ್ಯಾಯ ೭

ಸಮಾರೋಪ

ಒಟ್ಟಾರೆ ಎಂ. ಎ. ರಾಮಾನುಜಯ್ಯಂಗಾರ್ ಅವರ ಅಗಾಧವಾದ ಗ್ರಂಥಸಂಪಾದನಾ ಕಾರ್ಯವನ್ನು ಪರಾಮರ್ಶಿಸಿದ ನಂತರ ಈ ಕಾರ್ಯದಲ್ಲಿ ಅವರ ವೈಶಿಷ್ಟ್ಯವನ್ನು ಹೀಗೆ ಗುರುತಿಸಬಹುದು.

ಗ್ರಂಥ ಸಂಪಾದನಾ ವಿಧಿವಿಧಾನಗಳಿಗೆ ಅನುರೂಪವಾಗಿ ಹಸ್ತಪ್ರತಿಗಳ ಸಂಗ್ರಹ, ಪಾಠ ಸಂಕಲನ, ಸಂಪ್ರದಾಯಗಳ ವಿಭಜನೆ, ಪೀಳಿಗೆಗಳ ರಚನೆ ಮುಂತಾದವುಗಳನ್ನು ನಿಷ್ಠೆಯಿಂದ ಅನ್ವಯ ಮಾಡಿರುವುದು ಉತ್ತಮ. ಉತ್ತಮ ಸಂಪಾದನೆಯ ಪ್ರಯತ್ನಗಳಲ್ಲಿ ಸಂಪಾದಕನ ವ್ಯುತ್ಪತ್ತಿಯ ಪಾತ್ರ ಬಹಳದೊಡ್ಡದು. ಹಳಗನ್ನಡದ ವ್ಯಾಕರಣ, ನುಡಿಗಟ್ಟು, ವಾಕ್ಯರಚನೆ, ಕಾಲಕಾಲದ ಶೈಥಿಲ್ಯ ಪ್ರೌವೃತ್ತಿಗಳು ಇವುಗಳ ಖಚಿತವಾದ ತಿಳಿವಳಿಕೆ ಅಗತ್ಯವಾಗಿದ್ದು ಇದಕ್ಕೆ ರಾಮಾನುಜಯ್ಯಂಗಾರ್ ರವರು ಸಮರ್ಥರಾಗಿದ್ದರು ಎನ್ನಬಹುದು.

೧. ಹಸ್ತಪ್ರತಿ ಸಂಗ್ರಹ

ರಾಮಾನುಜಯ್ಯಂಗಾರ್ ರವರು ಹಸ್ತಪ್ರತಿಗಳನ್ನು ಸಂಗ್ರಹಿಸಲು ಸುಮಾರು ವರ್ಷಗಳ ಕಾಲ ಸತತವಾಗಿ ಶ್ರಮಿಸಿದ್ದಾರೆ. ಕನ್ನಡನಾಡಿನಾದ್ಯಂತ ಮೂಲೆ ಮೂಲೆಗಳಲ್ಲಿ ಸಂಚರಿಸಿ ಪ್ರತಿಗಳನ್ನು ಪಡೆದುಕೊಳ್ಳುವಲ್ಲಿ ಸಾಹಸವನ್ನೇ ಎಸಗಿದ್ದಾರೆ ಎನ್ನಬಹುದು. ಹಸ್ತಪ್ರತಿಗಳನ್ನು ವರ್ಷಕ್ಕೆ ಒಮ್ಮೆ ಸರಸ್ವತಿ ಪೂಜೆಗೆಂದು ಇಟ್ಟು ಪೂಜಿಸುತ್ತಿದ್ದವರ ಮನವೊಲಿಸಿ ಪಡೆದುಕೊಂಡಿದ್ದಾರೆ. ಪೂಜನೀಯವೆಂದು ಇಟ್ಟುಕೊಂಡಿದ್ದವರನ್ನು ಬೇಡಿ, ಕೆಲವರಲ್ಲಿ ಹಣಕೊಟ್ಟು ಕೊಂಡುಕೊಂಡಿರುವುದು ಉಂಟು. ಅನೇಕರು ತಾವೇ ಪ್ರತಿ ಮಾಡಿ ಕಳುಹಿಸಿರುವುದುಂಟು.

ಪ್ರತಿಗಳನ್ನು ಸಂಗ್ರಹಿಸಲು ಅರಮನೆ ಗುರುಮನೆಗಳ ಪುಸ್ತಕಭಂಡಾರಗಳಲ್ಲೂ ಇತರ ಖಾಸಗಿ ಮಹನೀಯರ ಮನೆಗಳಲ್ಲೂ ಹೇರಳವಾಗಿ ಸಂಗ್ರಹವಾಗಿದ್ದವುಗಳನ್ನು ಕೆಲವರು ತಮ್ಮ ಆಹ್ಲಾದಕ್ಕಾಗಿ ಓದುತ್ತಿದ್ದರು. ವಿದ್ವಾಂಸರ ಮನೆಗಳಲ್ಲಿ ಸಂಗ್ರಹಿಸಿವಂತಹ ಹಸ್ತಪ್ರತಿಗಳು ಪೀಳಿಗೆಯಿಂದ ಪೀಳಿಗೆಗೆ ಮುದುವರೆಯುತ್ತಾ ನಂತರ ರಕ್ಷಣೆಯಲ್ಲದೆ ನಷ್ಟವಾಗಿ ಗೆದ್ದಲು ಮತ್ತು ಹುಳು ಉಪ್ಪಟೆಗಳಿಗೆ ಅಹಾರವಾಗಿದವುಗಳನ್ನು ಸಂಗ್ರಹಿಸಿದ್ದಾರೆ.

ಈ ರೀತಿ ಸಂಗ್ರಹಿಸಿದ ಪ್ರತಿಗಳ ಬಗ್ಗೆ ತಮ್ಮ ಕೆಲವು ಗ್ರಂಥಗಳಲ್ಲಿ ತಿಳಿಸಿದ್ದಾರೆ. ಅವುಗಳಲ್ಲಿ ಹೆಚ್ಚು ಮೈಸೂರು ಮತ್ತು ಮದರಾಸಿನ ಓರಿಯಂಟಲ್ ಲೈಬ್ರರಿಗಳಲ್ಲಿನ ಪ್ರತಿಗಳು. ಮತ್ತೆ ಕೆಲವು ರಚನಕಾರರೇ

ಪ್ರತಿಮಾಡಿ ಕಳುಹಿಸಿರುವುದನ್ನು ಕಾಣಬಹುದಾಗಿದೆ. ಹೀಗೆ ಹಸ್ತಪ್ರತಿಗಳನ್ನು ಸಂಗ್ರಹಿಸಲು ವಹಿಸಿದಂತಹ ಆಸಕ್ತಿ, ಶ್ರಮಗಳನ್ನು ನೋಡಿದರೆ ಅಂದಿನ ಕಾಲದ ವ್ಯವಸ್ಥೆಯಲ್ಲಿ ಇವರು ಮಾಡಿರುವ ಸಾಧನೆ ಅಮೋಘವಾದುದಾಗಿದೆ.

೨. ಸಂಪಾದನೆ ಶಿಸ್ತು

ಸಂಗ್ರಹಿಸಿದಂತ ಪ್ರತಿಗಳನ್ನು ಪ್ರಕಟಣೆಗೆ ಸಿದ್ಧಪಡಿಸಲು ಇವರು ಪಟ್ಟಿರುವ ಪರಿಶ್ರಮವು ಹೇಳತೀರದಾಗಿದೆ. ಮುಟ್ಟಿದರೆ ಪುಡಿಪುಡಿಯಾಗುವಂತಹ ಹಾಳೆಗಳನ್ನು ನಾಜೂಕಾಗಿ ಬಿಡಿಸಿ ಅವುಗಳಿಗೆ ಸೊಪ್ಪಿನ ರಸವನ್ನು ಸವರಿ ಅಕ್ಷರಗಳನ್ನು ಅದರಲ್ಲೂ ಮೋಡಿ ಅಕ್ಷರಗಳನ್ನು ಬಿಡಿಸಿ ಓದುವುದು. ಇಡೀ ಪ್ರತಿಗಳನ್ನು ಓದಿ ಅಕ್ಷರ ಲೋಪ ದೋಷಗಳನ್ನು ತಿದ್ದುವುದು ಮುಂತಾದವುಗಳನ್ನು ಮಾಡುತ್ತಿದ್ದು ಶ್ರಮದ ಜೊತೆಗೆ ಉತ್ಸಾಹ. ತಾಳ್ಮೆ. ಸಹನೆ ಮುಂತಾದವುಗಳು ಇಂದಿನವರಿಗೆ ಮಾದರಿಯಾಗಿದೆ.

ಪ್ರತಿಗಳಲ್ಲಿರುವ ವಿಷಯಕ್ಕೆ ಹೋಲಿಕೆಯಾಗುವಂತೆ ವಿಷಗಳಲ್ಲಿ ಒಂದೊಂದು ಪ್ರತಿಯಲ್ಲಿಯೂ ಸೂಕ್ಷ್ಮವಾಗಿ ಗಮನಿಸಿ ಪರಿಶೀಲಿಸುವುದು ಅದಕ್ಕೆ ಪಾಠವನ್ನು ಸಾಧ್ಯವಾದಷ್ಟು ಚಿಕ್ಕ ವಿಭಾಗವಾಗಿ ಮಾಡುವುದು ಒಂದೊಂದು ವಿಭಾಗವು ಗದ್ಯದ ವಾಕ್ಯವೋ ಅಥವಾ ವಾಕ್ಯದ ಭಾಗವೋ ಆಗಿರುತ್ತದೆ. ನಂತರ ಅವುಗಳಿಗೆ ಹೋಲುವ ರೀತಿಯಲ್ಲಿ ಪಾಠಾಂತರಗಳನ್ನು ಸಂಕಲನ ಮಾಡುವುದು. ಹೀಗೆ ಮಾಡಿದ ಪಾಠಾಂತರಗಳ ಸಂಕಲನದ ಆಭಾರದ ಮೇಲೆ ಹಸ್ತಪ್ರತಿಗಳ ವಂಶ ಸಂಬಂಧವನ್ನು ಸ್ಪಷ್ಟಪಡಿಸಿ ಪೀಳಿಗೆಯ ಮೂಲಕ ತೋರಿಸುವುದು. ಹಸ್ತಪ್ರತಿಗಳಲ್ಲಿರುವ ಲಲಿತ ಆಧಾರಗಳನ್ನು ಅರ್ಥೈಸಿ ಹಲವು ದೃಷ್ಟಿಕೋನಗಳಿಂದ ಮಾಪನ ಮಾಡವುದು ಅದರ ಆಧಾರದ ಮೇಲೆ ಸಾಧ್ಯವಾದಷ್ಟು ಮಟ್ಟಿಗೆ ಪಾಠದ ಪ್ರಾಚೀನ ರೂಪವನ್ನು ನಿರ್ಧಸುವಂತಹ ಪಾಂಡಿತ್ಯ ಕೌಶಲ್ಯವನ್ನು ಹೊಂದಿದ್ದರು ಎಂಬುದು ಅವರ ಸಂಪಾದಿತ ಗ್ರಂಥಗಳಿಂದ ಎದ್ದು ಕಾಣುವ ಲಕ್ಷಣವಾಗಿದೆ.

ಹೀಗೆ ಹಸ್ತಪ್ರತಿಗಳನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಪ್ರಕಟಣೆಗೆ ಅಣಿಗೊಳಿಸುತ್ತಿದ್ದರು ಎಂದು ಸ್ಪಷ್ಟವಾಗುತ್ತದೆ. ಗ್ರಂಥಸಂಪಾದನೆಯ ಶಿಸ್ತು ಇಲ್ಲದ ಕಾಲದಲ್ಲೂ ಯಾವುದೇ ನುರಿತ ಸಂಪಾದಕನನ್ನೂ ಮೀರಿಸುವಂತಹ ಸಾಸ್ತ್ರ ನಿಷ್ಠೆಯಿರುವುದನ್ನು ಗಮನಿಸಿದರೆ ಗ್ರಂಥಸಂಪಾದನಾ ಶಿಸ್ತನ್ನು ಸ್ವಯಂ ಪ್ರೇರಿತವಾಗಿ ಕಲಿತಿದ್ದರೆಂದು ಭಾಸವಾಗುತ್ತದೆ.

೩. ಪಾಠಾಂತರ ನಿರ್ಣಯ

ಗ್ರಂಥ ಸಂಪಾದನೆಯ ಮುಖ್ಯ ಕಾರ್ಯ ಕೃತಿಕಾರರ ಪಾಠವನ್ನು ತಿಳಿಯುವುದು. ಗ್ರಂಥವು ಒದಗಿಸುವ ಅಂತಃ ಸಾಕ್ಷ್ಯಗಳ ಬಲದಿಂದ ಕೆಲವೊಮ್ಮೆ ಸಾಧ್ಯವಾದರೆ ಉಚಿತ ಸಾಕ್ಷಿಗಳನ್ನೂ ನಿರಾಕರಿಸಿ ಅವುಗಳಿಂದ ಮುಂದಕ್ಕೆ ಸಾಗುವುದು ಉತ್ತಮ.

ಹೀಗೆ ವಿಮರ್ಶಾತ್ಮಕ ಪಾಠ ಪರಿಷ್ಕರಣೆ ಮಾಡಲು ಅದಕ್ಕೆ ಬೇಕಾದ ಪರಂಪರಾಗತ ಪ್ರತಿಗಳ ಆಧಾರಗಳನ್ನು ಸಂಗ್ರಹಿಸಿ ಪಾಠಾಂತರ ಸಂಕಲನ ಹಾಗೂ ದೀರ್ಘ ಅಭ್ಯಾಸ ಮಾಡಿ, ಆ ಹಸ್ತಪ್ರತಿಗಳನ್ನು ಮತ್ತೆ ಮತ್ತೆ ಓದಿ ತಾನು ಬಳಸುತ್ತಿರುವ ಪ್ರತಿಗಳು ಗ್ರಂಥದ ನಿಜವಾದ ಪರಂಪರಾಗತ ಪ್ರತಿಗಳೆಂಬುದನ್ನು ದೃಢಮಾಡಿಕೊಂಡು, ದೊರಕಿದ ಹಸ್ತಪ್ರತಿಗಳ ಪಾಠಾಂತರ ಸಂಕಲನ ಮುಗಿಸಿ ಅವುಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ಪಾಠರಚನೆಗೆ ಆಧಾರವಾಗಿ ಎಲ್ಲ ಹಸ್ತಪ್ರತಿಗಳನ್ನು ಆಯ್ಕೆಮಾಡಿದ್ದಾರೆ.

ಏಕೈಕ ಪ್ರತಿ ಇರುವಾಗ ಪಾಠಾಂತರವನ್ನು ತಪ್ಪೆಂದು ನಿರ್ಣಯಿಸುವುದಕ್ಕಾಗಲೀ ಅಥವಾ ಅದನ್ನು ತಿದ್ದುವುದಕ್ಕಾಗಲೀ ಆ ಪ್ರತಿಯ ಗಾಢವಾದ ಪರಿಚಯ ಬಹಳ ಅವಶ್ಯಕ. ಯಾವಪ್ರತಿಯಲ್ಲಿ ಬಳಸಿ ಪಾಠಾಂತರಗಳನ್ನು ನೀಡಲಾಗಿದೆ ಎಂಬ ಸೂಚನೆಯಿಲ್ಲದೆ ಅಡಿಟಿಪ್ಪಣಿಗಳಲ್ಲಿ ತೋರಿಸಿರುವುದು ಬಿಟ್ಟರೆ. ಸಾಮಾನ್ಯವಾಗಿ ಪಾಠಾಂತರಗಳ ನಿರ್ದೇಶನ ಕಂಡುಬರುವುದಿಲ್ಲ. ಇನ್ನು ಕೆಲವು ಕಡೆ ಛಿನ್ನಪಾಠಗಳು ಮತ್ತು ಅಧಿಕಪಾಠಗಳು ಕಂಡುಬರುತ್ತವೆ. ಹಿಂದಿನ ಗ್ರಂಥ ಸಂಪಾದಕರ ಪಾಠಗಳು ಕೆಟ್ಟುಹೋಗುವುದು, ಪಾಠಾಂತರಗಳಿರುವುದು, ಲಿಪಿಕಾರ ಸ್ಖಾಲಿತ್ಯಗಳು, ಅಧಿಕ ಪಾಠಗಳು, ಪ್ರಕ್ಷೇಪಗಳು, ಗ್ರಂಥಪಾತಗಳು ಇವೇ ಮುಂತಾದ ಅಂಶಗಳನ್ನೆಲ್ಲ ಅವರು ಬಲ್ಲವರಾಗಿದ್ದರು. ತಮ್ಮ ಮಿಗಿಲಾದ ಪಾಂಡಿತ್ಯದಿಂದಲೂ ಅನುಭವದಿಂದಲೂ ಅವರು ತಮ್ಮ ಕಾರ್ಯವನ್ನು ನೆರವೇರಿಸಿರುವರು.

ಗ್ರಂಥಸಂಪಾದನೆಯ ಪ್ರಧಾನ ಭಾಗವೆಂದರೆ ಹಸ್ತಪ್ರತಿಗಳ ವೈಲಕ್ಷಣವನ್ನು ತಿಳಿಯುವುದು. ಹಸ ಪ್ರತಿಗಳ ಸತತ ಅಧ್ಯಯನದಿಂದ ಮಾತ್ರ ಅದು ಸಾಧ್ಯವಾಗುತ್ತದೆ ಅಂತಹ ಪಾಂಡಿತ್ಯವನ್ನು ಹೊಂದವರು ರಾಮಾನುಜಯ್ಯಂಗಾರ್ ರವರು ಎಷ್ಟೋ ವಿಶೇಷ ವಿಚಾರಗಳನ್ನು ತಿಳಿಸಲು ಅವಿರತ ಪ್ರಯತ್ನ ಪಟ್ಟಿದ್ದಾರೆ ಎನ್ನಬಹುದು.

ಪಾಠಾಂತರಗಳನ್ನು ನಿರ್ಣಯಿಸುವಲ್ಲಿ ಮಾಡಿರುವ ಕೆಲಸ ಅತ್ಯಂತ ಶ್ಲಾಘನೀಯವಾಗಿದೆ. ಅಂದಿನ ಮುದ್ರಣ ಶಾಲೆಯಲ್ಲಿ ದೊರೆಯುತ್ತಿದ್ದ ಅಚ್ಚಿನ ಮೊಳೆಗಳನ್ನು ಬಳಸಿ ಪಾಠಾಂತರಗಳನ್ನು ಸೂಚಿಸುವುದಕ್ಕೆ ವಿಶೇಷ ವಿಚಾರಗಳನ್ನು ತಿಳಿಸುವುದಕ್ಕೆ ವಿಶೇಷವಾದ ಚಿಹ್ನೆಗಳನ್ನು ಬಳಸಿರುವುದು ಇಂದಿನ ವ್ಯವಸ್ಥಿತ ಸಂದರ್ಭದಲ್ಲಿಯೂ ಸಾಧ್ಯಾವಾಗುವುದಿಲ್ಲ ಎನ್ನಬಹುದು.

ಇಂದು ಭಾರತೀಯ ಗ್ರಂಥ ಸಂಪಾದನಾ ಪರಿಚಯವನ್ನು ಶಾಸ್ತ್ರೀಯವಾಗಿ ನಾಲ್ಕು ಹಂತಗಳಲ್ಲಿ ಮಾಡುವುದು ಕಾಣುತ್ತೇವೆ ಅವುಗಳು ಈ ಕೆಳಗಿನಂತಿವೆ

೧. ಸಾಮಗ್ರಿ ಸಂಕಲನ- ಹಸ್ತಪ್ರತಿ ಮತ್ತು ಪ್ರಮಾಣ ಲೇಖನಗಳಿಂದ ಕೂಡಿದ ಸಮಸ್ತ ಸಾಮಗ್ರಿಯನ್ನೂ ಕಲೆಹಾಕಿ ಅದನ್ನು ವಂಶವೃಕ್ಷ/ಪೀಠಿಕೆಯ ರೂಪದಲ್ಲಿ ಜೋಡಿಸುವುದು

೨. ಪಾಠ ಸಂಪ್ರದಾಯ ನಿರ್ಣಯ: ಮೇಲೆ ಹೇಳಿದ ಸಾಮಗ್ರಿಗಳ ಮೂಲ ರೂಪವನ್ನು ಸಾಧಿಸುವುದು

೩. ಪಾಠ ಪರಿಷ್ಕರಣ: ಗ್ರಂಥಕಾರನ ಪಾಠದ ಮೂಲರೂಪವನ್ನು ಸಾಧಿಸುವುದು.

೪. ಉನ್ನತ ವಿಮರ್ಶೆ: ಕವಿ ಬಳಸಿರುವ ಮೂಲಗಳನ್ನು ಪ್ರತ್ಯೇಕಿಸುವುದು.

ಇಂದಿನ ಸಂಪಾದನಾಕಾರರಿಗೆ ಈ ಮೇಲಿನ ಹಂತಗಳ ಪ್ರಕಾರ ಡಿ.ಎಲ್. ನರಸಿಂಹಾಚಾರ್. ಎಂ. ಎಂ. ಕಲುಬುರ್ಗಿ ಮುಂತಾದವರ ಗ್ರಂಥಗಳು ಸಹಾಯವಾಗುತ್ತೆ. ಆದರೆ ರಾಮಾನುಜಯ್ಯಂಗಾರ್ ರವರು ಗ್ರಂಥಗಳನ್ನು ಸಂಪಾದಿಸುವಾಗ ಯಾವುದೇ ಕ್ರಮವನ್ನು ಅನುಸರಿಸುವುದಕ್ಕಾಗಲೀ ಅಥವಾ ಯಾವ ಮಾರ್ಗದಶನವನ್ನು ಪಡೆಯುವುದಾಗಲಿ ಇರಲ್ಲಿಲ್ಲ ಅಂತಹ ಕಾಲದಲ್ಲಿ ರಾಮಾನುಜಯ್ಯಂಗಾರ್ ರವರು ಕೂಡ ಈ ನಾಲ್ಕು ಹಂತಗಳ ಮಾದರಿಯಲ್ಲಿ ಗ್ರಂಥ ಸಂಪಾದನೆಯನ್ನು ಮಾಡಿದ್ದಾರೆ ಎಂಬುದು ಅವರು ಸಂಪಾದಿಸಿದ ಗ್ರಂಥಗಳು ಸೂಚಿಸುತ್ತವೆ.

ಅವರು ಸಂಪಾದಿಸಿದ ಗ್ರಂಥಗಳಲ್ಲಿ ಓದುಗರಿಗೆ ಗ್ರಂಥವಿಷಯ ವಿಶದವಾಗಲೆಂದು ಹಲವಾರು ಸೂಚನೆಗಳು. ಸಂಕೇತ. ಚಿಹ್ನೆ. ಶೀರ್ಷಿಕೆ ಪ್ರಸ್ತಾರ. ಟೀಕೆ ಟಿಪ್ಪಣಿ. ವಿವರಣೆ. ವಿಶೇಷವಾದ ಅಂಶ. ಮುಂತಾದವುಗಳನ್ನು ಗ್ರಂಥಗಳ ಪರಿಷ್ಕರಣೆಗಳೆಲ್ಲವನ್ನು ನೀಡಿರುವುದು ಗಮನಾರ್ಹ.

ಉದಾಹರಣೆಗೆ ಅವರು ಬಳಸಿರುವ ಚಿಹ್ನೆಗಳು *‡†§$¶

ಡಾ॥ ಪ್ರಭುಶಂಕರ್ ರವರು ವಿಮರ್ಶೆಯು ಪ್ರಾರಂಭವಾದ ಕಾಲದ ಬಗ್ಗೆ ಚರ್ಚಿಸುತ್ತಾ ಈ ರೀತಿ ಹೇಳಿದ್ದಾರೆ. "ಕನ್ನಡ ವಿಮರ್ಶೆ ಬೆಳೆಯಲು ಪ್ರಾರಂಭಿಸಿದಲ್ಲಿ ಸಹಜವಾಗಿಯೇ ಸಂಸ್ಕೃತ ಕೃತಿಗಳನ್ನು. ಪ್ರಾಚೀನ ಕನ್ನಡ ಗ್ರಂಥಗಳನ್ನು ಪರಿಚಯ ಮಾಡಿಕೊಡಲು ಪ್ರಾರಂಭಿಸಿದವರು ಎಂ.ಎ.ರಾಮಾನುಜಯ್ಯಂಗಾರ್ ರವರು. ಇದರಲ್ಲಿ ಮೊಟ್ಟ ಮೊದಲಿಗೆ ಕವಿ ಚಕ್ರವರ್ತಿ ರನ್ನನ ಜೀವನ ಚರಿತ್ರೆಯ ಜೊತೆಗೆ ಅವರ ಕೃತಿಗಳ ಪರಿಚಯಾತ್ಮಕ ವಿಮರ್ಶೆಯನ್ನು ಒದಗಿಸಿದ್ದಾರೆ. ಈ ಕೃತಿಯನ್ನು

ಗಮನಕ್ಕೆ ತೆಗೆದುಕೊಂಡರೆ ಕನ್ನಡ ವಿಮರ್ಶೆಯ ಉಗಮ ೧೯ನೇ ಶತಮಾನದ ಕೊನೆಯ ಭಾಗದಲ್ಲೇ ಎಂದು ಹೇಳಬಹುದು." [೪೭]

ಎಂ.ಎ. ರಾಮಾನುಜಯ್ಯಂಗಾರ್ ಅವರ ಪ್ರಾಚಿನ ಗ್ರಂಥಗಳನ್ನು ಬಹು ಅಚ್ಚುಕಟ್ಟಾಗಿ ಸಂಪಾದಿಸಿ, ಶೋಧಿಸಿ, ಪರಿಷ್ಕರಿಸಿ ಪ್ರಕಟಿಸಿರುವುದು ಇಂದಿನ ಯುವ ಸಂಶೋಧಕರಿಗೆ ಮಾರ್ಗವಾಗಿದೆ ಎಂದರೆ ತಪ್ಪಾಗಲಾರದು. ಅವರ ಪರಿಶ್ರಮ ಇಂದಿಗೂ ಸ್ತುತ್ಯಾರ್ಹವಾದುದು. ಎಷ್ಟೋ ಮುದ್ರಿತವಾಗದ ಪ್ರಾಚಿನ ಗ್ರಂಥಗಳು ಇವರ ಪರಿಶ್ರಮದ ಫಲವಾಗಿ ಆಸಕ್ತಿ ಹೊಂದಿದ ಓದುಗರನ್ನು ತಲುಪವಂತಾಯಿತು.

ಕನ್ನಡ ಸಾಹಿತ್ಯದ ಮೇಲೆ ಅಭಿಮಾನ ಹೊಂದಿದ ಇವರು ಪ್ರಾಚಿನ ಕೃತಿಗಳು ನಾಶವಾಗದೆ ಉಳಿಯಬೇಕೆಂಬ ಮಹದಾಶೆಯಿಂದ ಕನ್ನಡ ಕವಿ ಕೃತಿಗಳಿಗೆ ಬೆಳಕನ್ನು ತೋರಿಸಿದ ಮಹನೀಯರು ರಾಮಾನುಜಯ್ಯಂಗಾರ್.

****

[47] ಚಿನ್ನದಬೆಳಸು, ಎಂ.ವಿ.ಸೀತಾರಾಮಯ್ಯ, ಕನ್ನಡ ವಿಮರ್ಶಾ ಲೇಖನ ಡಾ.ಪ್ರಭುಶಂಕರ್, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ೧೯೭೦

ಅನುಬಂಧ

ಎಂ.ಎ. ರಾಮಾನುಜಯ್ಯಂಗಾರ್ ರವರು ಸಂಪಾದಿಸಿದ ಮತ್ತು ಸ್ವತಃ ರಚಿಸಿದ ಕೃತಿಗಳ ಪಟ್ಟಿ

ಚಂಪೂಗ್ರಂಥಗಳು

೧. ಮಹಾಕವಿ ರನ್ನನ ಗದಾಯುದ್ಧ - ಕಾವ್ಯ ಮಂಜರಿ. ೧೮೯೫. ವೆಸ್ಲಿಯನ್ ಮಿಷನ್. ಮೈಸೂರು. , ದ್ವಿ. ೧೯೨೫. ತೃ. ೧೯೨೬

೨. ಮಹಾಕವಿ ರನ್ನನ ಅಜಿತತೀರ್ಥಂಕರ ಪುರಾಣ ತಿಲಕಂ – ಕಾವ್ಯಕಲಾನಿಧಿ. ೧೯೧೦. ಜಿ ಟಿ ಎ ಮುದ್ರಣಶಾಲೆ. ಮೈಸೂರು

೩. ಅಭಿನವ ಪಂಪ ಅಥವಾ ನಾಗಚಂದ್ರನ ಮಲ್ಲಿನಾಥಪುರಾಣ – ಕರ್ನಾಟಕ ಕಾವ್ಯ ಮಂಜರಿ. –೧೮೯೫. ಸದ್ವಿದ್ಯಾ ಮುದ್ರಣ ಶಾಲೆ. ಮೈಸೂರು.

೪. ದುರ್ಗಸಿಂಹನ ಪಂಚತಂತ್ರ (ಸಟಿಪ್ಪಣಂ)- ಕಾವ್ಯಮಂಜರಿ. ೧೮೯೮. ವೆಸ್ಲಿಯನ್ ಮಿಷನ್. ಮೈಸೂರು

೫. ಹರಿಹರದೇವನ ಗಿರಿಜಾ ಕಲ್ಯಾಣ – ಕಾವ್ಯಕಲಾನಿಧಿ. ೧೯೦೫. ಸ್ಟಾರ್ ಪ್ರೆಸ್. ಮೈಸೂರು

೬. ಕವಿಕುಂಜರಾಭಿದ ನೇಮಿಚಂದ್ರನ ಲೀಲಾವತೀ ಪ್ರಬಂಧಂ – ಕಾವ್ಯ ಮಂಜರಿ. ೧೮೯೮. ಸ್ಟಾರ್ ಪ್ರೆಸ್. ಮೈಸೂರು

೭. ಕವಿಕುಂಜರಾಭಿದ ನೇಮಿಚಂದ್ರನ ಅರ್ಧನೇಮಿ ಪುರಾಣಂ – ೧೯೧೪. ಜಿ ಟಿ ಎ ಮುದ್ರಣಶಾಲೆ. ಮೈಸೂರು

೮. ಅಗ್ಗಳದೇವನ ಚಂದ್ರ ಪ್ರಭಪುರಾಣಂ – ಅಗ್ಗಳ ಲೀಲಾವತಿ. – ಕಾವ್ಯಕಲಾನಿಧಿ. ೧೯೦೧. ೧೯೦೩ ಸ್ಟಾರ್ ಪ್ರೆಸ್ . ಮೈಸೂರು

೯. ಕರ್ಣಾಟಕ ಕವಿ ಚಕ್ರವರ್ತಿ ಜನ್ನನ ಶಾಸನಗಳ ಸಂಗ್ರಹ – ಕಾವ್ಯಕಲಾನಿಧಿ. ೧೯೧೧. ಜಿ ಟಿ ಎ ಮುದ್ರಣಶಾಲೆ. ಮೈಸೂರು

೧೦. ಕರ್ಣಾಟಕ ಕವಿ ಚಕ್ರವರ್ತಿ ಜನ್ನನ ಯಶೋಧರ ಚರಿತೆ (ಸಟಿಪ್ಪಣಂ) – ಕಾವ್ಯಕಲಾನಿಧಿ. ೧೯೧೧. ಜಿ ಟಿ ಎ ಮುದ್ರಣಶಾಲೆ. ಮೈಸೂರು

೧೧. ಕಮಲಭವನ ಶಾಂತೀಶ್ವರ ಪುರಾಣಂ. – ಕಾವ್ಯ ಕಲಾನಿದಿ. ೧೯೧೨. ಜಿ ಟಿ ಎ ಮುದ್ರಣಶಾಲೆ. ಮೈಸೂರು

೧೨. ಆಂಡಯ್ಯನ ಕಬ್ಬಿಗರ ಕಾವಂ. (ಸಟಿಪ್ಪಣಂ) – ಕಾವ್ಯಮಂಜರಿ. ೧೮೯೩. ತೃ-೧೯೩೦. ಸದ್ವಿದ್ಯಾ ಮುದ್ರಣ ಶಾಲೆ. ಮೈಸೂರು.

೧೩. ಚೌಂಡರಾಯನ ಅಭಿನವ ದಶಕುಮಾರ ಚರಿತೆ – ಕಾವ್ಯ ಕಲಾನಿಧಿ, ೧೯೦೨, ಸ್ಟಾರ್ ಪ್ರೆಸ್ , ಮೈಸೂರು

೧೪. ಅಭಿನವ ವಾದಿವಿದ್ಯಾನಂದನ ಕಾವ್ಯಸಾರಂ – ಕಾವ್ಯ ಮಂಜರಿ, ೧೮೯೮, ಜಿಟಿಎ ಮುದ್ರಣಶಾಲೆ, ಮೈಸೂರು.

೧೫. ತಿರುಮಲೆಯಾರ್ಯನ ಚಿಕದೇವರಾಜ ವಿಜಯಂ – ಕಾವ್ಯ ಮಂಜರಿ, ೧೮೯೭, ಜಿಟಿಎ ಮುದ್ರಣಶಾಲೆ, ಮೈಸೂರು.

೧೬. ಚಿಕುಪಾಧ್ಯಯನ ದಿವ್ಯಸೂರಿ ಚರಿತೆ – ಕರ್ನಾಟಕ ಕಾವ್ಯ ಕಲಾನಿಧಿ, ೧೯೧೧, ಜಿ ಟಿ ಎ ಮುದ್ರಣಶಾಲೆ, ಮೈಸೂರು.

೧೭. ಗೋಪಾಲ ಪ್ರಸಾದಿಯ ಚಿಕದೇವೇಂದ್ರ ವಂಶಾವಳಿ. – ಕಾವ್ಯ ಮಂಜರಿ, ೧೯೦೧, ಸ್ಟಾರ್ ಪ್ರೆಸ್ , ಮೈಸೂರು

ಷಟ್ಪದೀ ಗ್ರಂಥಗಳು

೧. ರಾಘವಾಂಕನ ಹರಿಶ್ಚಂದರ ಕಾವ್ಯ (ವಾರ್ಧಿಕ) – ಕಾವ್ಯ ಕಲಾನಿಧಿ. ೧೯೦೬, ಜಿಟಿಎ ಮುದ್ರಣಶಾಲೆ ಮೈಸೂರು

೨. ಗುಬ್ಬಿ ಮಲ್ಲಣಾರ್ಯನ ಭಾವ ಚಿಂತಾರತ್ನಂ (ವಾರ್ಧಿಕ), – ಪ್ರ ೧೯೦೧. ಒ ೧೯೩೩. ಜಿಟಿಎ ಮುದ್ರಣಶಾಲೆ ಮೈಸೂರು

೩. ಭಾಸ್ಕರನ ಜೀವಂಧರ ಚರಿತೆ (ಭಾಮಿನಿ) – ಕಾವ್ಯ ಕಲಾನಿಧಿ. ೧೯೦೮. ವೆಸ್ಲಿಯನ್ ಮಿಷನ್, ಮೈಸೂರು.

೪. ಮಂಗರಸನ ಜಯನೃಪಕಾವ್ಯ (ಪರಿವರ್ಧಿನಿ)

೫. ಕನಕದಾಸನ ನಳಚರಿತ್ರೆ (ಭಾಮಿನಿ) – ಕಾವ್ಯ ಕಲಾನಿಧಿ.

೬. ಗುರುಲಿಂಗ ವಿಭುವಿನ ಭಿಕ್ಷಾಟನ ಚರಿತೆ ಸವ್ಯಾಖ್ಯಾನ (ವಾರ್ಧಿಕ) – ಕಾವ್ಯ ಕಲಾನಿದಿ. ೧೯೦೮, ಜಿಟಿಎ ಮುದ್ರಣಶಾಲೆ, ಮೈಸೂರು.

೭. ಕುಮಾರ ವಾಲ್ಮೀಕಿಯ ಮೈರಾವಣನ ಕಾಳೆಗ (ಭಾಮಿನಿ) – ಕಾವ್ಯ ಕಲಾನಿಧಿ. ೧೯೧೨. ಶ್ರೀನಿವಾಸ್ ಮುದ್ರಣ ಶಾಲೆ, ಮೈಸೂರು.

೮. ತಿರುಮಲೆವೈದ್ಯನ ಉತ್ತರ ರಾಮಾಯಣ (ಭಾಮಿನಿ) – ಕಾವ್ಯ ಕಲಾನಿಧಿ. ೧೯೧೦. ಜಿಟಿಎ ಮುದ್ರಣಶಾಲೆ, ಮೈಸೂರು.

೯. ಮಹಾಲಕ್ಷ್ಮಿಯ ಶ್ರೀರಾಮ ಪಟ್ಟಾಭಿಷೇಕಂ (ವಾರ್ಧಿಕ)– ಕಾವ್ಯಮಂಜರಿ. ೧೮೯೭. ದ್ವಿ ೧೯೨೪

೧೦. ಗೋಪಕವಿಯ ನಂದೀ ಮಾಹಾತ್ಮ್ಯಂ (ವಾರ್ಧಿಕ) - ಕಾವ್ಯ ಕಲಾನಿಧಿ. ೧೯೦೭. ಜಿಟಿಎ ಮುದ್ರಣಶಾಲೆ. ಮೈಸೂರು.

೧೧. ಕೋನಯ್ಯನ ಗಯ ಚರಿತ್ರೆ (ಭಾಮಿನಿ), - ಕಾವ್ಯ ಕಲಾನಿಧಿ. ೧೯೧೫. ಶ್ರೀನಿವಾಸ್ ಮುದ್ರಣ ಶಾಲೆ, ಮೈಸೂರು.

೧೨. ಗಜೇಂದ್ರಮೋಕ್ಷ (ದ್ವಿಪದಿ, ಉದಯರಾಗ) - ೧೯೧೨

೧೩. ಧ್ರುವಚರಿತ್ರೆ (ಉದಯರಾಗ, ವಾರ್ಧಿಕ ಷಟ್ಪದಿ)- ೧೯೧೬

ಗದ್ಯ ಗ್ರಂಥಗಳು

೧. ತಿರುಮಲೆಯಾರ್ಯನ ಚಿಕದೇವರಾಯ ವಂಶಾವಳಿ; ಹಳಗನ್ನಡ - ೧೯೩೩. ಜಿ ಟಿ ಎ ಮುದ್ರಣಶಾಲೆ, ಮೈಸೂರು.

೨. ಚಿಕುಪಾಧ್ಯಾಯನ ವಿಷ್ಣುಪುರಾಣ. ೧. ೪. ೫ ನೆ ಅಂಶಗಳು. - ಕಾವ್ಯಕಲಾನಿಧಿ. ೧. ಶ್ರೀನಿವಾಸ್ ಮುದ್ರಣ ಶಾಲೆ. ಮೈಸೂರು. ೧೯೧೪. ೪. ೧೯೧೧. ೫. ೧೯೧೦.

೩. ಕನ್ನಡ ವಚನ ಕಾದಂಬರಿ - ಪೂರ್ವಭಾಗ - ೧೯೨೩. ಕೆ.ಎನ್. ನರಸಿಂಹಯ್ಯ ಮುದ್ರಣಶಾಲೆ

೪. ಬಾಳಲೋಚನನ ಬತ್ತೀಸಪುತ್ತಳ ಕಥೆಗಳು. - ಕಾವ್ಯ ಕಲಾನಿಧಿ. ೧೯೦೮. ಜಿ ಟಿ ಎ ಮುದ್ರಣಶಾಲೆ. ಮೈಸೂರು.

೫. ಮುದ್ದಣ್ಣನ ಶ್ರೀರಾಮಾಶ್ವಮೇಧಂ: ಹಳಗನ್ನಡ - ಕಾವ್ಯಕಲಾನಿಧಿ. ೧೯೦೧. ದ್ವಿ ೧೯೩೨.

೬. ಅದ್ಭುತರಾಮಾಯಣಂ (ಸಟಿಪ್ಪಣಂ) - ಕಾವ್ಯಮಂಜರಿ. ೧೮೯೬. ಜಿ ಟಿ ಎ ಮುದ್ರಣಶಾಲೆ, ಮೈಸೂರು

ನಾಟಕ

೧. ಸಿಂಗಾರಾರ್ಯನ ಮಿತ್ರವಿಂದಾಗೋವಿಂದ ನಾಟಕಂ - ೧೯೨೦. ಶ್ರೀನಿವಾಸ್ ಮುದ್ರಣ ಶಾಲೆ, ಮೈಸೂರು.

ನಾಟಕ ಗದ್ಯಾನುವಾದಗಳು

೧. ಉತ್ತರ ರಾಮ ಚರಿತ್ರ ಕಥೆ. - (ಆಜಿ ನರಸಿಂಹಾಚಾರ್) ೧೯೨೪. ವೆಸ್ಲಿಯನ್ ಮಿಷನ್. ಮೈಸೂರು,

೨. ಮುಮ್ಮಡಿ ಕೃಷ್ಣರಾಜ ಒಡೆಯರ ಶಾಕುಂತಳ ನವೀನ ಟೀಕೆ. - ಕಾವ್ಯಕಲಾನಿಧಿ. ೧೯೧೪, ಶ್ರೀನಿವಾಸ್ ಮುದ್ರಣ ಶಾಲೆ, ಮೈಸೂರು.

೩. ಮುಮ್ಮಡಿ ಕೃಷ್ಣರಾಜ ಒಡೆಯರ ವತ್ಸರಾಜ ಕಥೆ - ಪೂರ್ವಭಾಗ(ರತ್ನಾವಳೀ ಕಥೆ) - ಕಾವ್ಯಕಲಾನಿಧಿ, ೧೯೦೪, ಜಿ ಟಿ ಎ ಮುದ್ರಣಶಾಲೆ, ಮೈಸೂರು

೪. ಮುಮ್ಮಡಿ ಕೃಷ್ಣರಾಜ ಒಡೆಯರ ಪ್ರಬೋಧಚಂದ್ರೋದಯ(೧-೩ ಅಂಕಗಳು)

ಶತಕಗಳು

೧. ಹರಿಹರದೇವನ ಪಂಪಾಶತಕಂ - ಕಾವ್ಯಕಲಾನಿಧಿ, ೧೮೯೯, ಸ್ಟಾರ ಪ್ಲಸ್, ಮೈಸೂರು

೨. ಕವಿಹಂಸರಾಜನ ರತ್ನಾಕರ ಶತಕ

೩. ರತ್ನಾಕರ ಕವಿಯ ಅಪರಾಜಿತೇಶ್ವರ ಶತಕ - ಕಾವ್ಯ ಮಂಜರಿ ೧೮೯೩ ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

೪. ಶ್ರೀವಾಸನ ವರ್ಷ ವರ್ಧಂತೀ ಶತಕ(ವಾರ್ಧಿಕ ಷಟ್ಪದಿ) - ಕಾವ್ಯಕಲಾನಿಧಿ ೧೯೦೧, ಸ್ಟಾರ ಪ್ಲಸ್ ಮೈಸೂರು

ಅಲಂಕಾರ ಗ್ರಂಥಗಳು

೧. ಉದಯಾದಿತ್ಯಾಲಂಕಾರಂ - ಕಾವ್ಯ ಮಂಜರಿ, ೧೮೯೪, ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

೨. ತಿರುಮಲೆಯಾರ್ಯನ ಅಪ್ರತಿಮ ವೀರಚರಿತೆ – ೧೯೩೧, ಎ.ಎ.ಆರ್ ಮುದ್ರಣಶಾಲೆ.

೩. ಕವಿಕಾಮನ ಶೃಂಗಾರರತ್ನಾಕರ – ಕಾವ್ಯ ಮಂಜರಿ ೧೮೯೪, ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

ನಿಘಂಟುಗಳು

೧. ಕರ್ಣಾಟಕ ನಿಘಂಟು –ಕಾವ್ಯ ಮಂಜರಿ ೧೮೯೩, ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

೨. ಚತುರಾಸ್ಯ ನಿಘಂಟು – ಕಾವ್ಯ ಮಂಜರಿ ೧೮೯೩, ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

೩. ಶಬ್ದಸಾರ ನಿಘಂಟು (ಗದ್ಯ) - ಕಾವ್ಯ ಮಂಜರಿ ೧೮೯೭, ಜಿಟಿಎ ಮುದ್ರಣಶಾಲೆ, ಮೈಸೂರು.

೪. ಸೂರ್ಯಕವಿಯ ಕವಿಕಂಠ ಹಾರ – ಕಾವ್ಯ ಕಲಾನಿಧಿ, ೧೯೦೨, ಸ್ಟಾರ ಪ್ಲಸ್ ಮೈಸೂರು

೫. ಕರ್ಣಾಟಕ ಸಂಜೀವನವೆಂಬ ಅಟಿಕುಳ ನಿಘಂಟು - ಕಾವ್ಯ ಮಂಜರಿ, ೧೮೭೯, ಸ್ಟಾರ ಪ್ಲಸ್ ಮೈಸೂರು

ಛಂದಸ್ಸು

೧. ನಾಗವರ್ಮನ ಛಂದೋಂಬುಧಿ. ಸಟಿಪ್ಪಣ

೨. ನಂದಿಕವಿಯ ನಂದಿಛಂದಸ್ಸು. ಸವಿವರಣ – ಕಾವ್ಯ ಕಲಾನಿಧಿ. ೧೯೦೯. ಜಿ ಟಿ ಎ ಮುದ್ರಣಶಾಲೆ, ಮೈಸೂರು.

ವ್ಯಾಕರಣ

೧. ನಾಗವರ್ಮನ ಶಬ್ದಸ್ಮೃತಿ (ಅಸಮಗ್ರ)

ಸಾಂಗತ್ಯದ ಕೃತಿಗಳು

೧. ಕನಕದಾಸನ ಮೋಹನ ತರಂಗಿಣಿ – ಕಾವ್ಯ ಕಲಾನಿಧಿ. ೧೯೧೩. ಶ್ರೀನಿವಾಸ್ ಮುದ್ರಣ ಶಾಲೆ, ಮೈಸೂರು.

೨. ಪ್ರಧಾನಿ ತಿರುಮಲಾರ್ಯನ ಕರ್ಣ ವೃತ್ತಾಂತ ಕಥ – ೧೯೭೧. ಶ್ರೀನಿವಾಸ್ ಮುದ್ರಣ ಶಾಲೆ, ಮೈಸೂರು.

೩. ಸಂಚಿಹೊನ್ನಮ್ಮನ ಹದಿಬದೆಯ ಧರ್ಮ. – ಕಾವ್ಯ ಮಂಜರಿ. ೧೮೯೩. ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು. ೭ (ದ್ವಿ) ೧೯೩೫ ಜಿ ಟಿ ಎ ಮುದ್ರಣಶಾಲೆ. ಮೈಸೂರು.

೪. ಕೃಷ್ಣಗೋಪೀವಿಲಾಸ ಅಥವಾ ಕೃಷ್ಣಬಾಲಲೀಲೆ – ಕಾವ್ಯಮಂಜರಿ. ೧೮೯೪ ೧೮೯೪. ಸದ್ವಿದ್ಯಾಮಂದಿರ ಮುದ್ರಣಶಾಲೆ, ಮೈಸೂರು

೫. ನಂಜಕವಿಯ ಕಪೋತವಾಕ್ಯಂ – ೧೯೧೨

ಕೀರ್ತನೆಗಳು

೧. ಚಿಕದೇವರಾಯನ ಗೀತಗೋಪಾಲ ಪ್ರಬಂಧ – ಕಾವ್ಯಕಲಾನಿಧಿ. ೧೯೦೫. ಜಿ ಟಿ ಎ ಮುದ್ರಣಶಾಲೆ, ಮೈಸೂರು.

ಮತಗ್ರಂಥಗಳು:– ಗದ್ಯ

೧. ವೇದಾಂತವಿವೇಕಸಾರ, ಪ್ರಥಮಭಾಗ (ಅದ್ವೈತ). – ಕಾವ್ಯ ಕಲಾನಿಧಿ. ೧೯೦೮. ಸ್ಟಾರ್ ಪ್ರೆಸ್, ಮೈಸೂರು

೨. ಚಿಕದೇವರಾಯ ಬಿನ್ನಪಂ (ವಿಶಿಷ್ಟಾದ್ವೈತ) – ಕಾವ್ಯ ಕಲಾನಿಧಿ. ೧೯೦೫. ಜಿ ಟಿ ಎ ಮುದ್ರಣಶಾಲೆ, ಮೈಸೂರು.

೩. ಜೀವೇಶ್ವರ ಸಾಂಗತ್ಯಂ (ಅದ್ವೈತ)

೨. ಭಗವದ್ಗೀತಾರ್ಥ ಪ್ರತಿಪಾದನ (ಪ್ರಾಚೀನ ಟೀಕಾಸಹಿತ)

ಸ್ವತಂತ್ರ ಕೃತಿಗಳು

೧. ಮಹಾಭಾರತ ಕಥಾಪ್ರಸಂಗ ಆದಿಪರ್ವ ಮತ್ತು ಸಭಾಪರ್ವ – ೧೮೯೦, ೧೮೯೨

೨. ಕವಿಸಮಯಂ – ಕಾವ್ಯರಸವನ್ನು ಬೋದಿಸುವ ವಿಮರ್ಶೆ:

೩. ಬಾಗಿಲು ಭದ್ರ: ಇದೊಂದು ತತ್ವ ಬೋಧಕ ಗ್ರಂಥ- ೧೯೧೪

೪. ಸುವ್ರತ- ಕರ್ಮವಿಲಾಸವನ್ನು ಬೋದಿಸುವ ಕಾದಂಬರಿ:

೫. ಕವಿಕಾರ್ಯ ಪ್ರಶಂಶೆ: ಕನ್ನಡ ಕಾವ್ಯ ವಿಮರ್ಶೆಯ ಕೃತಿ – ೧೯೧೩

೬. ಪ್ರಮಾಣಪ್ರಮೇಯ ವಿವೇಕ-ಮತಬೋಧಾವತರಣಿಕೆ:

೭. ಪ್ರಬಂಧಾವಳಿ ಅಥವಾ ಐಹಿಕಸುಖಸಾಧನಂ

೮. ಸುಭಾಷಿತ ಮುಕ್ತಕಶತಕಂ (ಸಂಕಲಿತ) - ಕಾವ್ಯ ಮಂಜರಿ ೧೮೯೮. ಸ್ಟಾರ ಪ್ಲಸ್. ಮೈಸೂರು

ಆಕರ ಗ್ರಂಥಗಳು

ಗ್ರಂಥಸೂಚಿ

೧. ಎಂ.ಎ.ರಾಮಾನುಜಯ್ಯಂಗಾರ್, ಎಂ.ಆರ್. ನರಸಿಂಹನ್, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೭೩

೨. ಪ್ರಾಚೀನ ಕನ್ನಡ ಗ್ರಂಥಸಂಪಾದನೆ, ಬಿ.ಎಸ್ ಸಣ್ಣಯ್ಯ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೩. ಮಲ್ಲಿನಾಥ ಪುರಾಣ, ಬಿ. ಓ. ಹೆಂಡಿ, ಕನ್ನಡ ಅಧ್ಯಯನ ಪೀಠ, ಧಾರವಾಡ. ೧೯೭೪

೪. ಸಾಹಿತ್ಯೋಪಾಸಕರು: ಡಿ.ವಿ.ಜಿ. ಜ್ಞಾಪಕ ಚಿತ್ರ ಶಾಲೆ. ಕಾವ್ಯಾಲಯ ಪ್ರಕಾಶನ. ೧೯೭೦

೫. ದುರ್ಗಸಿಂಹನ ಪಂಚತಂತ್ರ, ಎನ್ ಅನಂತರಂಗಾಚಾರ್. ಶಾರದಾ ಮಂದಿರ, ಮೈಸೂರು. ೧೯೭೩

೬. ಶಾಂತೀಶ್ವರ ಪುರಾಣ. ಆರ್. ವಿ. ಕುಲಕರ್ಣಿ. ಸಾಹಿತ್ಯ ಪರಿಷತ್ತು. ಬೆಂಗಳೂರು, ೧೯೮೩

೭. ಗಿರಿಜಾಕಲ್ಯಾಣ. ಶಿ.ಚೆ. ನಂದೀ ಮಠ. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ. ಧಾರವಾಡ. ೧೯೪೩.

೮. ನಳಚರಿತ್ರೆ. ದೇ. ಜವರೇಗೌಡರು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಬೆಂಗಳೂರು. ೧೯೮೫

೯. ನಂದೀ ಮಹಾತ್ಮ್ಯೆ. ಜಿ.ಜಿ.ಮಂಜುನಾಥ್. ಕನ್ನಡ ಅಧ್ಯಯನ ಸಂಸ್ಥೆ, ೧೯೮೧

೧೦. ಚಿಕ್ಕಾಟನ ಚರಿತೆ. ಬಿ.ವಿ.ಶಿರೂರ. ಕನ್ನಡ ಸಾಹಿತ್ಯ ಪರಿಷತ್. ೧೯೮೨

೧೧. ಹರಿಶ್ಚಂದ್ರ ಕಾವ್ಯ ಸಂಗ್ರಹ. ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರೀ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೫೦.

೧೨. ಹರಿಶ್ಚಂದ್ರ ಕಾವ್ಯ ರಾಘವಾಂಕ ವಿರಚಿತ' ಎನ್. ಬಸವಾರಾಧ್ಯ ಮತ್ತು ಪಚಿಡಿತ ಎಸ್. ಬಸಪ್ಪ, ಶಾರದಾ ಮಂದಿರ, ಮೈಸೂರು, ೧೯೬೯.

೧೩. ಕನ್ನಡ ಸಾಹಿತ್ಯ ಚರಿತ್ರೆ, ಪುಟ ೨೫೯. ಸಂಪುಟ ೫. ಭಾಗ ೨. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ . ಮೈಸೂರು ವಿ.ವಿ ೨೦೦೮

೧೪. ಭಾರತೀಯ ಗ್ರಂಥ ಸಂಪಾದನಾ ಪರಿಚಯ. ಡಾ. ಎಸ್. ಎಂ. ಕತ್ರೆ, ಅನುವಾದ– ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಹರ್ಷವರ್ಧನ ಪ್ರಕಾಶನ ಬೆಂಗಳೂರು, ೧೯೬೮.

೧೫. ಕನ್ನಡ ಗ್ರಂಥ ಸಂಪಾದನೆ. ಡಿ.ಎಲ್. ನರಸಿಂಹಾಚಾರ್. ಶಾರದಾ ಮಂದಿರ . ಮೈಸೂರು, ೧೯೭೦

೧೬. ರನ್ನ ಕವಿ ಗದಾಯುದ್ಧ ಸಂಗ್ರಹಂ, ತೀ.ನ.ಶ್ರೀಕಂಠಯ್ಯ, ಕಾವ್ಯಾಲಯ ಪ್ರಕಾಶನ, ಮೈಸೂರು, ೧೧ನೇ ಮುದ್ರಣ, ೨೦೦೩

೧೭. ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪುರಸ್ಕೃತ ಹೊಸತು ಹೊಸತು: ಲೇಖನ: ರನ್ನನ ಒಂದು ಪದ್ಯದ ಸರಿಯಾದ ಒಂದು ಪಾಠ ಮತ್ತು ಅರ್ಥ, ಎಂ. ಚಿದಾನಂದ ಮೂರ್ತಿ, ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು, ೨೦೦೭

೧೮. ಹಸ್ತಪ್ರತಿ ಶಾಸ್ತ್ರ: ಪ್ರೊ. ಎಂ.ವಿ ಸೀತಾರಾಮಯ್ಯ, ಡಾ ಎಂ. ಚಿದಾನಂದ ಮೂರ್ತಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೩

೧೯. ಮಾರ್ಗದರ್ಶಕ ಮಹನೀಯರು, ಟಿ.ವಿ. ವೆಂಕಟಾಚಲ ಶಾಸ್ತ್ರಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೦೨

೨೦. ಮಣಿಹ, ಡಾ॥ ಸಿದ್ಧಯ್ಯ ಪುರಾಣಿಕ್, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ(ರಿ) ಬೆಂಗಳೂರು, ೧೯೮೨

೨೧. ಕನ್ನಡ ಸಾಹಿತ್ಯ ಚರಿತ್ರೆ: ಒಡೆಯರಕಾಲದ ಬ್ರಾಹ್ಮಣ ಸಾಹಿತ್ಯ: ರಂ.ಶ್ರೀ. ಮುಗಳಿ, ೧೦ನೇ ಮುದ್ರಣ, ೧೯೯೮

೨೨. ಕರ್ನಾಟಕ ಲೋಚನ, ವಿದ್ವತ್ ಪತ್ರಿಕೆ, ಸಂಪುಟ-೨೧ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ಜೂನ್-ಡಿಸೆಂಬರ್ ೨೦೦೭

೨೩. ಮುದ್ದಣ ಭಂಡಾರ, ಪ್ರೊ ಜಿ.ವೆಂಕಟಸುಬ್ಬಯ್ಯ, ಸಂಪುಟ -೧,೨ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ೧೯೮೭

೨೪. ಹಸ್ತಪ್ರತಿ ಅಧ್ಯಯನ ಶಾಸ್ತ್ರ, ಡಾ॥ ನಾ. ಗೀತಾಚಾರ್ಯ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೯

೨೫. ಸಾಹಿತ್ಯೋಪಾಸಕರು, ಎನ್ ಬಸವರಾಧ್ಯ ಮತ್ತು ತಂಡ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೪

೨೬. ಹರಿದಾಸರು ಕಂಡ ರಾಮಾನುಜ ದರ್ಶನ, ಡಾ॥ ನಾ. ಗೀತಾಚಾರ್ಯ, ನಾರಾಯಣ ಶರ್ಮ ಸಂಸ್ಕೃತಿ ಕೇಂದ್ರ ಬೆಂಗಳೂರು, ೨೦೧೦

೨೭. ಹದಿಬದೆಯ ಧರ್ಮ, ಬಿ.ಎಂ.ಶ್ರೀಕಂಠಯ್ಯ ಮತ್ತು ಡಿ ಸಂಪಾಬಾಯಿ, ಮೈಸೂರು ವಿಶ್ವವಿದ್ಯಾಲಯ, ೮ನೇ ಮುದ್ರಣ, ೧೯೭೬

೨೮. ಚಿಕ್ಕದೇವರಾಯ ವಂಶಾವಳಿ -ಅನುವಾದ ಮ.ಭಾ. ಭೋಯಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯

೨೯. ಚಿನ್ನದ ಬೆಳಸು, ಎಂ.ವಿ.ಸೀತಾರಾಮಯ್ಯ, ಕನ್ನಡ ವಿಮರ್ಶಾ ಲೇಖನ ಡಾ.ಪ್ರಭುಶಂಕರ್, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ೧೯೭೦

೩೦. ಕನ್ನಡ ಹಸ್ತಪ್ರತಿ ರಚನೆ– ಭಾಷಿಕ ವಿವೇಚನೆ, ಎಸ್.ಎಸ್. ಅಂಗಡಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೩

೩೧. ಮುದ್ದಣನ ಶ್ರೀರಾಮಾಶ್ವಮೇಧಂ, ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಶಾರದ ಪ್ರೆಸ್, ಮಂಗಳೂರು, ೧೯೭೨

೩೨. ಮುದ್ದಣ, ಡಾ|| ಶ್ರೀನಿವಾಸ ಹಾವನೂರು, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, ೧೯೭೮

೩೩. ಚಂದ್ರ ಪ್ರಭಪುರಾಣ, ಆರ್. ವಿ. ಕುಲಕರ್ಣಿ, ಕನ್ನಡ ಸಾಹಿತ್ಯ ಪರಿಷತ್, ೧೯೮೧,

ಲೇಖನಸೂಚಿ

೧. ಹಸ್ತಪ್ರತಿ, ಆಕಾಶವಾಣಿಯ ಜ್ಞಾನವಾಣಿಯಲ್ಲಿ ಕನ್ನಡ ಸಾಹಿತ್ಯ ಕಣ್ಮಣಿಗಳು ಎಂಬ ಕಾರ್ಯಕ್ರಮದಲ್ಲಿ ಪ್ರಸಾರವಾದ ಪ್ರೊ. ಅಶ್ವತ್ಥ್ ನಾರಾಯಣ ರವರ ಹಳಗನ್ನಡ ಕಾವ್ಯನಿಧಿ ಪುಣ್ಯಪುರುಷ ಮಂಡಯಂ ಆಜಿ ರಾಮಾನುಜಯ್ಯಂಗಾರ್ ರವರ ಕಿರು ಪರಿಚಯ

****